॥ ಶ್ರೀಶ ಪಾಹಿ ಮಾಂ ॥

ಗಯಾಕ್ಷೇತ್ರ ಮಹಾತ್ಮ್ಯೆ



ಮತ್ತು ಗ್ರಂಥಕರ್ತರು

ಸ್ತ್ರರತ್ನಂ ವೇದಾಂತವಿಶಾರದ
ವಿದ್ವಾನ್ ಚೀಮನಹಳ್ಳಿ, ರಘುನಾಥಾಚಾರ್ಯರು
ಪಂಡಿತ ಮಾರ್ತಾಂಡ, ತತ್ವ ಚಿಂತಾಮಣಿ, ಉಪನಿಷದ್ರತ್ನಾಕರ,
ಸಾಹಿತ್ಯರತ್ನಂ ಇತ್ಯಾದಿ ಬಿರುದಾಂಕಿತರು

ಕ್ರಯ ರೂ. ೧-೫೦ ಮಾತ್ರ

ಗಯಾಕ್ಷೇತ್ರ ಮಹಾತ್ಮ್ಯೆ

ಸಂಗ್ರಹಕಾರರು ಮತ್ತು ಗ್ರಂಥಕರ್ತರು

ಶಾಸ್ತ್ರರತ್ನಂ ವೇದಾಂತವಿಶಾರದ

ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು

ಪಂಡಿತ ಮಾರ್ತಾಂಡ, ತತ್ವ ಚಿಂತಾಮಣಿ, ಉಪನಿಷದ್ರತ್ನಾಕರ,

ಸಾಹಿತ್ಯರತ್ನಂ ಇತ್ಯಾದಿ ಬಿರುದಾಂಕಿತರು

ಪ್ರಕಾಶಕರು :

ಸಿ. ಆರ್. ವೆಂಕಟೇಶ ವಿಠ್ಠಲಾಚಾರ್ಯರು,

ಎಂ.ಎ., ಬಿ.ಕಾಂ. ಆರ್.ಎ.ಸಿ.ಎ.

ಆಡಿಟರ್, ನಂ. ೨೯, ಹಯವದನ ಸದನಂ, ೬ನೇ ರೋಡ್,

ಚಾಮರಾಜಪೇಟೆ, ಬೆಂಗಳೂರು – ೧೮.

ಪ್ರಥಮ ಮುದ್ರಣ 1966.

ಕ್ರಯ ರೂ. ೧-೫೦ ಮಾತ್ರ

ಮುದ್ರಕರು :

ಚಿತ್ರಾ ಪ್ರಿಂಟರ್, ಸೌರಾಷ್ಟ್ರಪೇಟೆ ಕ್ರಾಸ್,

ಬೆಂಗಳೂರು – ೨.

ಗಯಾಮಾಹಾತ್ಮ್ಯೆಯ ಪ್ರಸ್ತಾವನೆ

ಕರ್ಮಭೂಮಿಯೆನಿಸಿದ ಈ ಭರತ ಖಂಡದಲ್ಲಿ ಜನ್ಮವೆತ್ತಿದ "ವಿಧಿನಿಯತಾಃ ಮನುಷ್ಯಾಃ" ಎಂಬಂತೆ ವಿಧಿಬದ್ಧನಾದ. ಪ್ರತಿಯೊಬ್ಬ ಮಾನವನೂ ತನಗೆ ಶ್ರೇಯಸ್ಸಾಗಬೇಕಾದರೆ, "ನಿಷಿದ್ಧಕರ್ಮಣಾಂ ತ್ಯಾಗಃ ವಿಹಿತಸ್ಯ ಸದಾ ಕ್ರಿಯಾ" ಎಂದು ಹೇಳಿದ ಮೇರೆಗೆ, ತನ್ನ ವರ್ಣಾಶ್ರಮ ಧರ್ಮಕ್ಕೆ ವಿಹಿತಗಳಾದ, ನಿಷಿದ್ಧ ಕರ್ಮತ್ಯಾಗಪೂರ್ವಕ ಸತ್ಕರ್ಮಗಳನ್ನು ಆಯಾ ಕಾಲಗಳಲ್ಲಿ ನಿಷ್ಕಾಮನೆಯಿಂದ, ಫಲಾಪೇಕ್ಷೆಯಿಲ್ಲದೆ, ಭಗವತ್ಪ್ರೀತ್ಯುದ್ದೇಶ್ಯ ಪೂರ್ವಕವಾಗಿ ಅತ್ಯಾವಶ್ಯಕವಾಗಿ ಮಾಡಲೇಮಾಡಬೇಕು. ಇದರಿಂದ ಇಹಪರ ಉಭಯ ಲೋಕ ಸುಖಗಳು ಲಭಿಸುವುವು.

ಸುಖವು ಪುಣ್ಯದ ಫಲ, ದುಃಖವು ಪಾಪಫಲ, ನಿಷಿದ್ಧಕರ್ಮಾಚರಣೆ, ವಿಹಿತಕರ್ಮ ತ್ಯಾಗದಿಂದ ಪಾಪವೂ ಅದರ ಫಲವಾಗಿ ಮಹಾ ದುಃಖವೂ, ವಿಹಿತ ಕರ್ಮಾನುಷ್ಠಾನ, ನಿಷಿದ್ಧ ಕರ್ಮತ್ಯಾಗದಿಂದ ಪುಣ್ಯವೂ ತತ್ಫಲವಾಗಿ ಸುಖವೂ ಲಭಿಸುವುದು. ಯೋಗ್ಯಾಧಿಕಾರಿ ಜೀವನಿಗೆ ಗರ್ಭಾಧಾನ, ಪುಂಸವನ, ಶ್ರೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ ಮೊದಲಾದ, ವಿವಾಹಾಂತವಾಗಿ ಹದಿನೈದು ಶುಭಕರ್ಮಗಳೂ, ಹದಿನಾರನೆಯದಾದ "ಅಂತ್ಯೇಷ್ಟಿ" ಅಪರ ಕರ್ಮ—(ಅಶುಭ)ವೂ ಸೇರಿ ಷೋಢಶ ಕರ್ಮಗಳು ವಿಹಿತಗಳಾಗಿವೆ.

ಇವುಗಳಲ್ಲಿ ಪ್ರಾಯಃ ಸಕಲ ಜನಾಂಗದವರೂ ಪರಮ ಮಂಗಳಕರವಾದ ವಿವಾಹ ಮತ್ತು—ಅಪರ ಕರ್ಮ—ಮಾತಾ ಪಿತೃಗಳ ಶ್ರಾದ್ಧವನ್ನಂತೂ ಒಂದಲ್ಲ ಒಂದು ಬಗೆಯಲ್ಲಿ ತಮ್ಮ ಮತ, ಕುಲಾಚಾರ, ಸಂಪ್ರದಾಯಗಳನ್ನನುಸರಿಸಿ ಮಾಡುತ್ತಿರುವುದು ಸರ್ವವಿದಿತ ವಿಷಯವಾಗಿದೆ.

ಸದಾ ಚಾರಸಂಪನ್ನರೂ, ಸಚ್ಛಾಸ್ತ್ರದಲ್ಲಿ ದೀಕ್ಷಾದಕ್ಷರೂ ಅನೂಚಾನ ಸಂತತಿಯವರೂ, ಇಹಪರಲೋಕ, ಪಾಪಪುಣ್ಯ, ಜನನ, ಮರಣ, ಸ್ವರ್ಗ ಮೋಕ್ಷಗಳಲ್ಲಿ ಪೂರ್ಣ ನಂಬಿಕೆಯುಳ್ಳ ಆಸ್ತಿಕ ಮಹಾಶಯರು ಧರ್ಮ

ಶಾಸ್ತ್ರೋಕ್ತ ಪ್ರಮಾಣಾನುಗುಣವಾಗಿಯೂ, "ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ" ಇತ್ಯಾದಿ ಶ್ರುತ್ಯುಕ್ತ ರೀತಿಯಲ್ಲೂ ದೇವಕಾರ್ಯ ಪಿತೃ ಕಾರ್ಯಗಳನ್ನು ತಪ್ಪದೆ "ಮೃತೇಽಹನಿಂ ಪರಿತ್ಯಜ್ಯ ಚಂಡಾಲಾಃ ಕೋಟಿ ಜನ್ಮಸು" ಇತ್ಯಾದಿ ಶಾಸನರೂಪ ವಾಕ್ಯಗಳಿಗೆ ಭಯಪಟ್ಟು, ಅತ್ಯಂತ ಭಕ್ತಿ ಯಿಂದ ಪಿತೃಯಜ್ಞಗಳನ್ನು ಪ್ರತಿ ಸಾಂವತ್ಸರಿಕ, ಸಕೃನ್ಮಹಾಲಯ, ಸೂರ್ಯ ಸೋಮೋಪರಾಗಗಳಲ್ಲಿ, ತೀರ್ಥವಿಧಿಗಳನ್ನೂ, ಹಿರಣ್ಯ, ಆಮ, ಚರು, (ಅನ್ನ) ತಿಲ, ಸತ್ತುಗಳಿಂದ, ಶಾಸ್ತ್ರವಿಹಿತ ರೀತಿಯಿಂದ ಮಾತಾ ಪಿತೃಗಳ ಶ್ರಾದ್ಧಾದಿಗಳನ್ನು ಮಾಡಿದರೆ ತಮ್ಮ ಮಾತಾ ಪಿತೃವರ್ಗದವರನ್ನು ದಾಟಿಸಿ ಉದ್ಧೃತರನ್ನು ಮಾಡುವುದಲ್ಲದೆ ಕರ್ತನು ತಾನೂ ದೇವ, ಋಷಿ, ಪಿತೃಗಳ ಋಣಗಳಿಂದ ತರ್ಪಣಾದ್ಯನುಷ್ಠಾನಗಳಿಂದ ಮುಕ್ತನಾಗಿ ಪುಣ್ಯಲೋಕ ಗಳನ್ನು ಹೊಂದಿ ಐಹಿಕಾ ಮುಷ್ಮಿಕ ಉಭಯ ಶಾಶ್ವತ ಸುಖ ಫಲಗಳನ್ನು ಪಡೆಯುತ್ತಾನೆ.

ಸುಪುತ್ರರು ಮೃತರ ಔರ್ಧ್ವದೇಹಿಕ ವಿಧಿ, ಷೋಡಶ ಶ್ರಾದ್ಧಾದಿಗಳನ್ನು ಮಾಸಾನುಮಾಸಿಕ, ಊನಾದಿ ಶ್ರಾದ್ಧಗಳಿಂದ ಯಮಮಾರ್ಗದ 16 ಪುರಗ ಳನ್ನು ದಾಟಿಸಿ, ವಿಮುಖ ಶ್ರಾದ್ಧವನ್ನು 360ನೇ ಕೊನೇ ದಿವಸ ನಡಿಸಿ ವೈಕುಂಠ ಸಮಾರಾಧನದಿಂದ ಪಿತೃಗಳಿಗೆ ಸದ್ಗತಿ ಪ್ರದರಾಗಿ ಪ್ರತಿ ವರ್ಷವೂ ಸಾಂವತ್ಸರಿಕ ಶ್ರಾದ್ಧ ಮಹಾಲಯ ಶ್ರಾದ್ಧಗಳನ್ನು ಮಾಡುತ್ತಾ ಕೊನೆಗೆ ಬಹು ತೀರ್ಥ ಯಾತ್ರೆಗಳಿಂದ ಗಯಾ ಶ್ರಾದ್ಧ, ಅಲ್ಲಿ ವಿಷ್ಣುಪಾದದಲ್ಲಿ ಪಿಂಡ ಪ್ರದಾನ, ಅಕ್ಷಯವಟಾದಿಗಳಲ್ಲಿ ಪಿತೃಯಜ್ಞದಿಂದ ಕೃತಕೃತ್ಯರಾಗಿ, ಪಿತೃ ಋಣದಿಂದ ಮುಕ್ತರಾದವರೆಂದೂ, ಇನ್ನೂ ಅನುಕೂಲತೆಯೂ, ವಿಶೇಷ ಪುಣ್ಯವುಳ್ಳ, ಹರಿಗುರುಗಳ ಪೂರ್ಣಾನುಗ್ರಹಕ್ಕೆ ಪಾತ್ರರೂ, ಆದವರು ಬದರೀ ಕ್ಷೇತ್ರದಲ್ಲಿ ಬ್ರಹ್ಮಕಪಾಲದಲ್ಲಿ ಪಿಂಡಪ್ರದಾನ ಮಾಡಿ, ಸ್ವಯಂ ಸ್ವರ್ಗಮೋಕ್ಷ ಗಳನ್ನು ಪಿತೃಗಳಿಗೆ, ಸತ್ಯಲೋಕಪ್ರಾಪ್ತಿ, ವಿಷ್ಣು (ಪರಮ) ಪದಗಮನ, ಮುಕ್ತಿಗಳನ್ನು ಸಲ್ಲಿಸಿ ತಾವೂ ಉದ್ಧೃತರಾದೆವೆಂದು ಆನಂದ ತುಂದಲಿತರೂ ಕೃತಕೃತ್ಯರೂ ಆಗಿ ಇಹಪರ ಸಾಧನ ಸಂಪತ್ತನ್ನು ಪಡೆಯುವರು.

ಈ ಸಂಬಂಧದಲ್ಲಿ ಬದರೀಕ್ಷೇತ್ರ ಮಹಾತ್ಮೆಯನ್ನು ನಾವು ಈ ಮೊದಲೇ ಕಳೆದ ತಿಂಗಳಲ್ಲಿ ಪ್ರಚಾರ ಮಾಡಿರುವೆವು.

ಈಗ ಅನೇಕ ಗ್ರಂಥಗಳ ಆಧಾರದಿಂದ ಮತ್ತು ಯಾತ್ರಿಗಳ ಅನುಭವ ದಿಂದ, ಈ ಗಯಾಕ್ಷೇತ್ರ ಮಹಾತ್ಮ್ಯೆಯನ್ನು ಸಜ್ಜನರ ಉಪಯೋಗದಿಂವ ತಮ್ಮ ಪಿತೃಯಜ್ಞಾನುಷ್ಠಾನಕ್ಕೆ ಅನುಕೂಲವಾಗಲೆಂದು ವಿಷಯುಗಳನ್ನು ಸಂಗ್ರಹಿಸಿ ಮುದ್ರಿಸಿ ಪ್ರಚಾರಮಾಡಿರುವೆವು.

ರಾಜ ಪುರೋಹಿತರೆಂದು ಪ್ರಸಿದ್ಧರಾಗಿದ್ದ ದಿವಂಗತ ಶ್ರೀಮಾನ್ ನಂದ ಗುಡಿ ರಾಘವೇಂದ್ರಾಚಾರ್ಯರ ಮಕ್ಕಳು ಈ ಗ್ರಂಥವು ಮುದ್ರಿತವಾಗುತ್ತಿದ್ದಂತೆ ಆಮೂಲಾಗ್ರವಾಗಿ ಅವಲೋಕಿಸಿ, ನಮ್ಮೊಡನೆ ಬದರೀ, ಗಯಾ ಯಾತ್ರೆ ಗಳನ್ನು ಮಾಡಿ, ವೇದಾಧ್ಯಯ ಸಂಪನ್ನರೂ, ಪೂರ್ವಾಪರ ಯಜ್ಞೇಶ, ಹವ್ಯ, ಕವ್ಯ, ಹವನ, ಹೋಮಾದಿಗಳಲ್ಲಿ ವಿಶೇಷ ಪಾಂಡಿತ್ಯವುಳ್ಳ ಅನುಭವಿಗಳೂ, ನಿತ್ಯಾನುಷ್ಠಾನ ಪರರೂ, ಕರ್ಮಠರೂ ಆದ ಶ್ರೀಮಾನ್ ನಮ್ಮ ಮಿತ್ರರಾದ ನಂದಗುಡಿ ಶ್ರೀನಿವಾಸಮೂರ್ತಿ (ಅಬ್ಬಾಯಿ) ಆಚಾರ್ಯ ಮಾತೃಷೋಡಶ ವೆಂಬ ಪಿಂಡಪ್ರದಾನ ವಿಷಯಗಳಲ್ಲಿ ಕೆಲವು ಶ್ಲೋಕಗಳನ್ನು ಬರೆದುಕೊಟ್ಟು ಈ ಪ್ರಬಂಧದ ವಿಷಯದಲ್ಲಿ ಅವರು ಕಳುಹಿಸಿರುವ ಲೇಖನವನ್ನೂ ಇಲ್ಲಿ ಸಂತೋಷದಿಂದ ಪ್ರಚುರಮಾಡಿರುತ್ತೇವೆ. ಅವರ ಉಪಕಾರಕ್ಕೆ ನಾವು ಅಭಾರಿಗಳು ಮತ್ತು ಕೃತಜ್ಞತರು ಆಗಿರುವೆವು.

ಶ್ರೀಮಾನ್ ನಮ್ಮ ಪರಮ ಮಾನ್ಯ ಮಿತ್ರರಾದ ಕೆ. ಗುರುರಾಜಾಚಾರ್ಯರು ಟೂರಿಸ್ಟ್ ಹೋಟಲ್ ಪ್ರೊಪ್ರೈಟರು ಎಂದಿನಂತೆ ಈ ಗ್ರಂಥ ಮುದ್ರಣಕ್ಕೂ ದ್ರವ್ಯ ಸಹಾಯ ಮಾಡಿ ಪ್ರೋತ್ಸಾಹಿಸಿದ್ದಕ್ಕಾಗಿ ನಾವು ಅವರ ಉಪಕಾರ ವನ್ನು ಸ್ಮರಿಸುತ್ತಾ ಅವರಿಗೂ ಅವರ ಕುಟುಂಬಕ್ಕೂ ಭಗವಾನ್ ಶ್ರೀ ಕೃಷ್ಣನು ಆಯುರಾರೋಗ್ಯ ಹರಿಗುರುಗಳಲ್ಲಿ ಜ್ಞಾನ ಭಕ್ತಿಗಳನ್ನು ಅನುಗ್ರಹಿಸಲೆಂದು ಶ್ರೀಶೇಶರನ್ನು ಸಂಪ್ರಾರ್ಥಿಸುತ್ತೇವೆ.

ಓದುಗರು ಎಂದಿನಂತೆ ಇದನ್ನೂ ಸಂಗ್ರಹಿಸಿ ಮುಂದಿದ ಗ್ರಂಥಗಳ ಪ್ರಚಾರಕಾರ್ಯಕ್ಕೆ ಸಹಾಯವಿತ್ತು ಪ್ರೋತ್ಸಾಹಕರಾಗಬೇಕಾಗಿ ಕೋರುತ್ತೇವೆ.

ಚೀಮನಹಳ್ಳಿ ರಘುನಾಥಾಚಾರ್ಯರು ಶಾಸ್ತ್ರರತ್ನ.

ಪ್ರಕಾಶಕರ ನುಡಿ

ತಮ್ಮ ನಿರಂತರ ಪ್ರತಿಮಾರ್ಜನ ಪಾಠ ಪ್ರವಚನಾದಿ ನಿತ್ಯಾಷ್ಠಾನ, ಲೌಕಿಕ ಕಾರ್ಯ ನಿರ್ವಹಣೆಗಳ ಜೊತೆಯಲ್ಲಿ ನಮ್ಮ ಪೂಜ್ಯ ತಂದೆಯವರು ಈ 1965ನೇ ಒಂದ ವರ್ಷದಲ್ಲಿ ಬರೆದದ್ದು ಈ ಕೆಳಗೆ ಕಂಡ ಹನ್ನೆರಡು ಗ್ರಂಥ ಗಳಲ್ಲಿ ಈಗ ನಾವು ಮುದ್ರಣ ಮಾಡಿ ಪ್ರಚುರಮಾಡಿವವ ಮೊನಲನೆಯ ಆರು ಗ್ರಂಥಗಳು ಮಾತ್ರ.

ಇವರು ಕಳೆದ 40–45 ವರ್ಷಗಳಲ್ಲಿ ಪ್ರಚಾರ ಮಾಡಿದ, ಆ ಆಚಾರ್ಯ ರವರ ಸೇವಾರೂಪ ಗ್ರಂಥರಚನೆಗಳಿಗಿಂತಲೂ, ಈಗ ಅಪರ ವಯಸ್ಸಿನಲ್ಲಿ ಈ ವರ್ಷ ಮಾಡಿದ ಈ ದೇವಮಾನ್ಯ ಕಾರ್ಯವು ಅಸದೃಶವೂ, ಆಶ್ಚರ್ಯವೂ ಆಗಿದೆ ಎನ್ನಬಹುದು. ಅವರು ಇದಕ್ಕೆ ಹೇಳುವುದಿಷ್ಟೆ. "ಇದು ನನ್ನ ಕೃತಿಯಲ್ಲ. ಶ್ರೀ ಹರಿವಾಯುಗುರುಗಳು, ಗುರುರಾಜರು, ನಮ್ಮ ಪೂಜ್ಯ ಆ ಚಾರ್ಯ ರು ನಮ್ಮಲ್ಲಿ ನಡೆಯಿಸುತ್ತಿರುವ ಇದೊಂದು ನಮ್ಮ ಸಾಧನ. ಪುಣ್ಯಕೀರ್ತಿಗಳೆಲ್ಲ ಅವರದು" ಎನ್ನುತ್ತಾರೆ, ಪ್ರಕೃ ಈ ೧೨ ಗ್ರಂಥಗಳಲ್ಲಿ.

ಈ ಆರು ಮುದ್ರಣವಾಗಿದೆ

1. ಶ್ರೀಮನ್ಮರುಚ್ಛಾಸ್ತ್ರ ಸಾರಸಂಗ್ರಹ (ಸಂಸ್ಕೃತ)
2. ಸದ್ಭಕ್ತಿದರ್ಪಣ (ಸಂಸ್ಕೃತ)
3. ,, (ಕನ್ನಡಾನುವಾದ)
4. ಶ್ರೀ ಬದರೀಕ್ಷೇತ್ರ ಮಹಾತ್ಮ್ಯೆ (ಕನ್ನಡ)
5. ಪಿತೃಭಕ್ತಿ ,,
6. ಗಯಾಕ್ಷೇತ್ರ ಮಹಾತ್ಮ್ಯೆ ,,

ಈ ಆರು ಮುದ್ರಣವಾಗಬೇಕಾಗಿದೆ

7. ಮರುಚ್ಛಾಸ್ತ್ರಸಾರ ಸಂಗ್ರಹ (ಕನ್ನಡ)
8. ಅಶೋಕಸುಂದರೀ – ನಹುಷರಾಜ ಕಾವ್ಯ
9. ಗಂಗಾ ಮಹಾತ್ಮ್ಯೆ
10. ರಾಮೇಶ್ವರ ರಾಮಸೇತು ಮಹಾತ್ಮ್ಯೆ
11. ಕಾಶೀಕ್ಷೇತ್ರ ಮಹಿಮೆ
12. ಅಧ್ಯಾತ್ಮಾಮೃತನಿಧಿ (ಅರ್ಧ ಮುದ್ರಣವಾಗಿರುತ್ತದೆ)

ಉಳಿದ ಗ್ರಂಥಗಳು ಮಹಾಜನರು ವಿಶೇಷ ದ್ರವ್ಯ ಸಹಾಯ ಮಾಡಿದಲ್ಲಿ ಶೀಘ್ರವಾಗಿ ಓದುಗರ, ಸಹೃದಯರ ಕೈಸೇರುವಂತೆ ಮುದ್ರಣ ಮಾಡಿಕೊಡಲು ಸಾಧ್ಯವಾಗುತ್ತದೆ.

ಈ ಗಯಾ ಮಹಾತ್ಮ್ಯೆಯ ಪುಸ್ತಕವನ್ನು ವಾಚಕರು ಸಂಗ್ರಹಿಸಿ ಮುಂದಿನ ಕಾರ್ಯಕ್ಕೆ ನೆರವಾಗಿ ಉತ್ತೇಜಕರಾಗಬೇಕಾಗಿ ಕೋರುತ್ತೇನೆ.

ಗಯಾ ಗಜೋ ಗಯಾದಿತ್ಯೋ ಗಾಯತ್ರೀ ಚ ಗದಾಧರಃ ।
ಗಯಾ ಗಯ ಶಿರಶ್ಚೈವ ಷಡ್ಗಯಾ ಮುಕ್ತಿದಾಯಕಾಃ ॥

ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।
ಪಾಪಂ ತತ್ಸಂಗಜಂ ಸರ್ವಂ ಗಯಾ ಶ್ರಾದ್ಧಾದ್ವಿನಶ್ಯತಿ ॥

ಅಸಂಸ್ಕೃತಾ ಮೃತಾ ಯೇ ಚ ಪಶುಭಿಃ ಪ್ರಹತಾಶ್ಚ ಯೇ ।
ಸರ್ಪದಷ್ಟಾ ಗಯಾಶ್ರಾದ್ಧಾನ್ಮುಕ್ತಾಃ ಸ್ವರ್ಗಂ ವ್ರಜಂತಿತೇ ॥

ಗಯಾಯಾಂ ಪಿಂಡದಾನೇನ ಯತ್ಫಲಂ ಲಭತೇ ನರಃ।
ನ ತಚ್ಛಕ್ಯಂ ಮಯಾ ವಕ್ತುಂ ಕಲ್ಪಕೋಟಿಶತೈರಪಿ ॥

ಬ್ರಹ್ಮಜ್ಞಾನಂ ಗಯಾಶ್ರಾದ್ಧಂ ಗೋಗೃಹೇ ಮರಣಂ ತಥಾ ।
ವಾಸಃ ಪುಂಸಾಂ ಕುರುಕ್ಷೇತ್ರೇ ಮುಕ್ತಿರೇಷಾ ಚತುರ್ವಿಧಾ ॥

ಇತ್ಯಾದಿ ವೇದವ್ಯಾಸರ, ಸನತ್ಕುಮಾರ ಮತ್ತು ನಾರದಾದಿಗಳ ಅಭಿಪ್ರಾಯವನ್ನು ಶ್ರೀ ವಾದಿರಾಜರವರ ತೀರ್ಥಪ್ರಬಂಧ, ನಾರದೀಯ ಪುರಾಣ, ಪದ್ಮಪುರಾಣ, ಸನತ್ಕುಮಾರ ಸಂಹಿತೆ, ಆಗ್ನೇಯ ಪುರಾಣ, ಮಹಾಭಾರತ (ವನಪರ್ವ) ತೀರ್ಥಯಾತ್ರಾಪರ್ವ, ವಾಯುಪುರಾಣ, ಮತ್ತು ಅನೇಕ ಸ್ಮೃತಿ ಮತ್ತು ಪುರಾಣಗಳಿಂದ ಕನ್ನಡದಲ್ಲಿ ವಿಷಯಗಳ ಸಂಗ್ರಹದಿಂದ ರಚಿತವಾದ ಈ ಅತ್ಯಂತ ಭಕ್ತಜನೋಪಯೋಗಿಯಾದ ಅಮೌಲ್ಯ ಗ್ರಂಥವು ಸರ್ವರಿಂದಲೂ ಅತ್ಯವಶ್ಯಕವಾಗಿ ಸಂಗ್ರಹಿಸಬೇಕೆಂಬುದು ಇದನ್ನು ಓದುವುದರಿಂದಲೇ ತಿಳಿಯಬಹುದು.

ಇತಿ ಸಜ್ಜನ ವಿಬುಧ ವಿಧೇಯ,
(Sd.) C. R. ವೆಂಕಟೇಶ ವಿಠಲಾಚಾರ್ಯ,
10-1-1966.

ಗಯಾಮಹಾತ್ಮ್ಯೆಯ ವಿಷಯದಲ್ಲಿ ಅಭಿಪ್ರಾಯ

ಬ್ರಂ. ಶ್ರೀ. ಮ. ಶಾಸ್ತ್ರರತ್ನಂ, ಉಪನಿಷದ್ರತ್ನಾಕರೇತ್ಯಾದಿ ಬಿರುದುವೃಂದ ವಿಭೂಷಿತರಾದ ಶ್ರೀ. ಮ. ಶಾಸ್ತ್ರ ಸಂಪನ್ನ ಪೂಜ್ಯರಾದ ವಿದ್ವಾನ್ ಬೇವಿನಹಳ್ಳಿ ರಘುನಾಥಾಚಾರ್ಯರು ಅನೇಕ ಗ್ರಂಥಗಳನ್ನು ಬರೆದು ಪ್ರಚಾರ ಮಾಡಿ ಸುಪ್ರಸಿದ್ಧರಾಗಿದಾರೆ. ಈಗಾಗಲೇ ಶ್ರೀ ಬದರೀಕ್ಷೇತ್ರದ ಮಹಾತ್ಮ್ಯೆ, ಸದ್ಭಕ್ತಿ ದರ್ಪಣವನ್ನು ಮುದ್ರಿಸಿ ಸುಜನೋಪಕಾರ ಮಾಡಿರುವರು.

ಈ ಗಯಾ ಮಹಾತ್ಮ್ಯೆಯ ಗ್ರಂಥವನ್ನು ನಾನು ಆಮೂಲಾಗ್ರವಾಗಿ ಓದಿ ನೋಡಿ ಬಹಳ ಸಂತೋಷ ಪಟ್ಟೆನು. ಇದು ಬಹಳ ವಿಶದವಾಗಿಯೂ, ಶಾಸ್ತ್ರಸಮ್ಮತವಾಗಿಯೂ ರಚಿಸಲ್ಪಟ್ಟು ಅನೇಕ ಸಜ್ಜನರುಗಳಿಗೆ ಬಹಳ ಉಪಕಾರವಾಗಿರುವುದು. ಇವರಲ್ಲಿ ಬಹು ಗ್ರಂಥಗಳಿಂದ ಸಂಗ್ರಹಿಸಿದ ಅನೇಕ ವಿಷಯುಗಳು ಅಡಗಿರುವುದರಿಂದಲೂ, ವಿಷಯುಗಳೆಲ್ಲವೂ ಅನೇಕ ಪುರಾಣ, ಇತಿಹಾಸ, ಶ್ರುತಿ, ಸ್ಮೃತಿಗಳ ಆಧಾರದಿಂದ ಏಕತ್ರ ಕ್ರೋಡೀಕರಿಸಿ ಬರೆದಿರುವುದು ಶ್ಲಾಘ್ಯವೂ. ಬಹು ಜನರಿಗೂ ಅದರಲ್ಲೂ ಗಯಾ ಕ್ಷೇತ್ರಯಾತ್ರೆ ಮಾಡುವವರಿಗೆ ಅತ್ಯಂತ ಉಪಯೋಗಕರವೂ ಆಗಿದೆ. ಸರ್ವ ಆಸ್ತಿಕರೂ ಅವಶ್ಯಕವಾಗಿ ಸಂಗ್ರಹಿಸಬೇಕಾದ ಇದೊಂದು ಉತ್ತಮ ಗ್ರಂಥರತ್ನವು.

ಚಾಮರಾಜಪೇಟೆ 5ನೇ ಬೀದಿ, ಬೆಂಗಳೂರು, 21-1-966.

(Sd.) ನಂದಗುಡಿ ಅಬ್ಬಾಯಿ (ಶ್ರೀನಿವಾಸ ಮೂರ್ತಿ) ಆಚಾರ್ಯರು.

ಶ್ರೀ ಬದರೀಕ್ಷೇತ್ರ ಮಹಾತ್ಮ್ಯೆ

ರಿಟೈರ್ಡ್ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್,
ಶ್ರೀವರ್ಮಾ ಜಿ. ವೀರರಾಘವಾಚಾರ್ಯರು, ಎಂ.ಎ. ಅವರು
ಕಳುಹಿಸಿದ ಅಭಿಪ್ರಾಯ.

ಈ ಸದ್ಗ್ರಂಥವನ್ನು ಪ್ರಕಾಶಪಡಿಸಿರುವ ವಿದ್ವನ್ಮಣಿಗಳಾದ ಚೀಮನ ಹಳ್ಳಿ ರಘುನಾಥಾಚಾರ್ಯರು ವಂದ್ಯರು, ಪ್ರಶಂಸನೀಯರು. ಪ್ರಾಚೀನ ಉದ್ಗ್ರಂಥಗಳನ್ನು ಅಧ್ಯಯನ ಮಾಡಿ ಪುರಾಣೇತಿಹಾಸಗಳನ್ನು ಮಥಿಸಿ, ಅವುಗಳಲ್ಲಡಗಿರುವ ಶ್ರೀ ಬದರೀಕ್ಷೇತ್ರ ಮತ್ತು ಪರಿಸರ ಪ್ರದೇಶಗಳಿಗೆ ಸಂಬಂಧಿಸಿರುವ ಬಹಳ ಉಪಯುಕ್ತವಾದ ವಿಷಯಗಳನ್ನೆಲ್ಲ ಕ್ರೋಡೀಕರಿಸಿ, ವಿಮರ್ಶೆ ಮಾಡಿ, ಧರ್ಮಾಸಕ್ತರಾದ ಯಾತ್ರೇಚ್ಛೆಯುಳ್ಳ ಭಕ್ತ ಮಹಾಜನರಿಗೆ ಮಾರ್ಗದರ್ಶಕವಾಗುವಂತೆ ಅವರು ಈ ಗ್ರಂಥರತ್ನವನ್ನು ರಚಿಸಿದ್ದಾರೆ.

ನಮ್ಮ ಹಿಂದೂ ಧರ್ಮಾನುಯಾಯಿಗಳಲ್ಲಿ ಪುಣ್ಯಕ್ಷೇತ್ರ, ತೀರ್ಥಯಾತ್ರೆ ಎಂಬುದು ಮುಕ್ತಿಪ್ರದನೆಂಬ ಗಾಢ ವಿಶ್ವಾಸವಿದೆ. ಇಂತಹ ಯಾತ್ರೆಯಿಂದ ಜ್ಞಾನ–ಭಕ್ತಿ–ಕರ್ಮಗಳ ಸಂಯೋಗವು ತಾನಾಗಿಯೇ ಲಭ್ಯವಾಗುತ್ತದೆ. ಅಲ್ಲಲ್ಲಿ ಭಗವಂತನ ಧ್ಯಾನ–ಭಜನೆ–ಅರ್ಚನೆ ಮುಂತಾದುವು ಬುದ್ಧಿಯನ್ನೂ, ಹೃದಯವನ್ನೂ ವಿಕಾಸಪಡಿಸುತ್ತವೆ. ಅಲ್ಲದೆ ಮಹರ್ಷಿಗಳ ಮತ್ತು ಭಕ್ತ ಮಹಾಶಯರ ಸಂಸರ್ಗದಿಂದ ಲಭ್ಯವಾದ ಸ್ಥಳ ಮಹಾತ್ಮ್ಯಗಳಲ್ಲಿರುವ ಅದೃಶ್ಯ ಶಕ್ತಿ ವಿಶೇಷಗಳ ಅದ್ಭುತ ಪರಿಣಾಮಗಳು ಯಾತ್ರಿಕರಿಗೆ ದೈವಾನುಗ್ರಹದಿಂದ ಸುಲಭರೂಪದಲ್ಲಿ ಪ್ರಾಪ್ತವಾಗುವುವು. ಈ ಕಾರಣಗಳಿಂದ ಅತಿ ಪ್ರಾಚೀನ ಕಾಲದಿಂದಲೇ ಎಲ್ಲಾ ದೇಶಗಳಲ್ಲಿ, ಅದರಲ್ಲೂ ಭರತವರ್ಷದಲ್ಲಿ ಯಾತ್ರೆಯ ಶ್ರದ್ಧೆ ಬೆಳೆದುಬಂದಿದೆ. ಅಂತಹ ಯಾತ್ರಿಕರಿಗೆ ಕೈಗನ್ನಡಿಯಂತೆ ಶ್ರೀ. ಆಚಾರ್ಯರು ತಮ್ಮ ದಿವ್ಯ ಪುಸ್ತಕವನ್ನು ನೀಡಿದ್ದಾರೆ. ಅದನ್ನು ಒಂದು ಸಾರಿ ಪರಿಶೀಲಿಸಿ, ಯಾತ್ರಾರ್ಥಿಗಳು ಪ್ರಯಾಣ ಹೊರಟರೆ, ಅವರ ಇಷ್ಟಾರ್ಥವು ಸಂಪೂರ್ಣವಾಗಿ ಸಫಲವಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ಆಯಾಯಾ ಸನ್ನಿವೇಶಗಳಲ್ಲಿ ಆತ್ಮತೃಪ್ತಿಯಾಗುವಂತೆ, ಯಥಾಶಾಸ್ತ್ರ

ವಾಗಿ ಕರ್ಮಾನುಷ್ಠಾನ ಮಾಡಲು ಸಾಧ್ಯವಾಗುತ್ತದೆ. ಪ್ರದೇಶಗಳ ಪರಿಚಯ ಮುಂಚಿತವಾಗಿಯೇ ಮನಸ್ಸಿಗೆ ಉಂಟಾಗುವುದರಿಂದ ಆ ಕ್ಷೇತ್ರಗಳನ್ನು ಸೇರುವುದು, ಅಲ್ಲಿ ವಸತಿಗಳನ್ನು ಸಂಪಾದಿಸುವುದು, ನದಿ, ಕಲ್ಯಾಣಿ, ದೇವಸ್ಥಾನಗಳಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕೆಂಬುದು – ಇವೆಲ್ಲವೂ ಕರತಲಾಮಲಕವಾಗಿ (ಈ ಪುಸ್ತಕದಲ್ಲಿ) ತಿಳಿದುಬರುತ್ತದೆ.

ಆಧುನಿಕರು ಇಂದಿನ ವಿಜ್ಞಾನ – ತಾಂತ್ರಿಕ ವಿಷಯಗಳಲ್ಲಿ ಕಾಲವಿಶೇಷದಿಂದ ನಿರತರಾಗಿದ್ದಾರೆ. ಅವರಿಗೆ ಸಚ್ಛಾಸ್ತ್ರಪರಿಚಯಕ್ಕೆ ಅವಕಾಶ ಸಾಲದು. ಆದರೆ ತೀರ್ಥಯಾತ್ರೆಯ ರೂಪದಿಂದ ಅವರು ವೇದಶಾಸ್ತ್ರ – ಪುರಾಣೇತಿಹಾಸಾದಿಗಳನ್ನು ಸುಲಭವಾಗಿಯೂ, ಸಂತೋಷವಾಗಿಯೂ ತಿಳಿಸಲಾಗುವುದು. ಅದರಿಂದ ಮನಸ್ಸು ಪವಿತ್ರವಾಗುವುದು ; ಪಾಪದೂರವಾಗುವುದು ; ಆತ್ಮೋನ್ನತಿಯನ್ನು ಹೊಂದುವುದು ಸಾಧ್ಯವಾಗುವುದು. ದೇಹಾರೋಗ್ಯಕ್ಕೆ ಧನ್ವಂತರಿ ದೇವನು ಹೇಗೆ ಅವಶ್ಯಕವೋ, ಹಾಗೆಯೇ ಭವರೋಗ ನಿವಾರಣೆಗೆ, ಮುಕ್ತಿಲಾಭಕ್ಕೆ ತೀರ್ಥಯಾತ್ರೆ. ಅದರಲ್ಲಿ ಸರಿಯಾದ ಅನುಷ್ಠಾನ ಬಹಳ ಆವಶ್ಯಕ. ಅಹಂಕಾರ, ಮಮಕಾರ, ಮುಂತಾದ ಅಂತಃ ಶತೃಗಳು ನಾಶವಾಗಿ, ವೈರಾಗ್ಯ ಲಭಿಸುವುದು. ಮನುಷತ್ವವನ್ನು ಪಡೆದ ಮಾನವನು ಆತ್ಮ ಕಲ್ಯಾಣವನ್ನು ಪಡೆಯುವನು, ಬದರೀಕ್ಷೇತ್ರ ಮಹಾತ್ಮ್ಯೆಯು ಇದಕ್ಕೆ ಸಾಧನ ವಸ್ತುವಾಗಿದೆ.

ಇತಿ ಕಲ್ಯಾಣಮಸ್ತು, ಸರ್ವೇಜನಾಃ ಸುಖಿನೋಭವತು

(Sd.) ಜಿ. ವಿ. ಆಚಾರ್ಯ,
ನಿವೃತ್ತ ಜಿಲ್ಲಾಧಿಕಾರಿ.

ಮೈಸೂರು ಸಾಧ್ವೀ ದೈನಂದಿನ ಪತ್ರಿಕೆಯಲ್ಲಿ ವಿಮರ್ಶೆ

ಶ್ರೀ ಬದರೀ ಕ್ಷೇತ್ರ ಮಹಾತ್ಮೆ

ಬೆಂಗಳೂರಿನ ಶಾಸ್ತ್ರರತ್ನಂ ವೇದಾಂತ ವಿಶಾರದ ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು ಹಿಮವತ್ಪರ್ವತದಲ್ಲಿರುವ ಶ್ರೀ ಬದರಿಕ್ಷೇತ್ರ ಮಹಾತ್ಮೆಯನ್ನು ಸಂಗ್ರಹಿಸಿ ರಚಿಸಿರುತ್ತಾರೆ. ಶ್ರೀಯುತರು ಧಾರ್ಮಿಕ ವಿಷಯ ಮತ್ತು ತತ್ವಜ್ಞಾನ ಪ್ರತಿಪಾದನ ವಿಚಾರಗಳ ಬಗ್ಗೆ ಈಗಾಗಲೇ ಅನೇಕ ಗ್ರಂಥಗಳನ್ನು ಸಂಸ್ಕೃತದಲ್ಲೂ, ಕನ್ನಡದಲ್ಲೂ ರಚಿಸಿ ಚಿರಪರಿಚಿತರಾಗಿರುತ್ತಾರೆ.

ತೀರ್ಥ ಪ್ರಬಂಧ, ನಾರದೀಯ ಪುರಾಣ, ಸನಕ ಸಂಹಿತೆ, ಪದ್ಮಪುರಾಣ, ನಾರದ ಸನತ್ಕುಮಾರರ ಸಂವಾದರೂಪ ಮಹಾತ್ಮ್ಯೆಗಳ ಆಧಾರದಮೇಲೆ ಗ್ರಂಥವನ್ನು ಬರೆಯಲಾಗಿದೆ.

ಶ್ರೀಯುತರು ಗ್ರಂಥವನ್ನು ತಮ್ಮ ಪಿತೃವರ್ಯರಾದ ಆಸ್ಥಾನ ಮಹಾವಿದ್ವಾನ್ ವಿದ್ವಚ್ಚಕ್ರ ಚೂಡಾಮಣಿ ಚೀಮನಹಳ್ಳಿ ಕೃಷ್ಣಾಚಾರ್ಯರಿಗೆ ಸಮರ್ಪಿಸಿರುವರು. ತೀರ್ಥ ಕ್ಷೇತ್ರಾದಿ ಯಾತ್ರಿಕರು ಮತ್ತು ಆಸ್ತಿಕ ಮಹನೀಯರಿಗೆ ವಿಶೇಷ ಉಪಯುಕ್ತವಾಗಿದೆ. ಅದು ಪ್ರಕಾಶರಾದ ಶ್ರೀ ಸಿ. ಆರ್. ವೆಂಕಟೇಶ ವಿಠಲಾಚಾರ್ಯ, ನಂ. ೨೯, ಹಯವದನ ಸದನಂ, ೭ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು=೧೮. ಇವರಲ್ಲಿ ದೊರೆಯುತ್ತದೆ.

ಬೆಲೆ: ರೂ. ೧-೨೫.

ಬೆಂಗಳೂರು ಧರ್ಮಸಂದೇಶ ಪತ್ರಿಕೆಯು 1965ನೇ ನವಂಬರ್ ತಿಂಗಳಲ್ಲಿ ಬ್ರಂ. ಶ್ರೀ ತಲಕಾಡು ಆಗಮಿಕ ಮಹಾ ವಿದ್ವಾನ್ ಕೃಷ್ಣದೀಕ್ಷಿತರವರಿಂದ ವಿಮರ್ಶೆ

ಸ್ವೀಕಾರ ಮತ್ತು ವಿಮರ್ಶೆ

'ಸದ್ಭಕ್ತಿ ದರ್ಪಣಂ' ಎಂಬ ಪವಿತ್ರ ಗಂಥವನ್ನು ಭಕ್ತಿಪೂರ್ವಕ ಸ್ವೀಕರಿಸಲಾಗಿದೆ.

ಭಕ್ತನನ್ನು ಭಗವಂತನಲ್ಲಿಗೆ ಕೊಂಡೊಯ್ಯುವ ಮಾರ್ಗಗಳು ಮೂರಾಗಿವೆ. ಕರ್ಮಮಾರ್ಗ – ಜ್ಞಾನಮಾರ್ಗ ಭಕ್ತಿಮಾರ್ಗಗಳೆಂಬ ಈ ಮೂರರಲ್ಲಿ ಅತ್ಯಂತ ಸುಲಭವಾದ ಮಾರ್ಗ – 'ಭಕ್ತಿಮಾರ್ಗ'. ಭಕ್ತಿಯು ನವವಿಧಗಳೆಂದು ಸ್ಥೂಲವಾಗಿ ಸರ್ವತ್ರ ಕೇಳಿಬರುತ್ತಿದ್ದರೂ, ಭಕ್ತಿಯು 'ಸದ್ಭಕ್ತಿ' ಯಾದಾಗಲೇ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುವುದು. 'ಭಕ್ತಿ' ಎಂಬ ಶಬ್ದದ ನಿಜವಾದ ಅರ್ಥವನ್ನು ಗುರೂಪದೇಶದಿಂದ ತಿಳಿದು ಕೊಂಡು, ಅದರಂತೆ ಸತ್ಕರ್ಮಾನುಷ್ಠಾನಪರರಾಗಿ, ಭಗವಂತನಲ್ಲಿ ಅಂತಃಕರಣ ಪೂರ್ವಕವಾಗಿ 'ದಾಸ್ಯ – ದಾಸ' ಭಾವಮಗ್ನರಾಗಿ ತನ್ಮಯತೆಯನ್ನು ಪಡೆದಾಗಲೇ ಮಾನವ ಜನ್ಮದ ಉದ್ಧಾರವಾದೀತು! ಆ ವಿವರಗಳನ್ನು ಸಾದ್ಯಂತವಾಗಿ ತಿಳಿಯಬಯಸುವವರು—ಅನೇಕ ಪ್ರಮಾಣ ಗ್ರಂಥಗಳ ಉದಾಹರಣೆಯೊಡನೆ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗಿರುವ 'ಸದ್ಭಕ್ತಿ ದರ್ಪಣಂ' ಎಂಬ ಗ್ರಂಥವನ್ನೋದಿ ಮನನ ಮಾಡಿರಿ.

ಸದಾಚಾರಗಳನ್ನು ತಮ್ಮ ದಿನಚರಿಯಲ್ಲಿ ಅಳವಡಿಸಿಕೊಂಡು, ಸಚ್ಛಾಸ್ತ್ರ ಸಾಗರದಲ್ಲಿ ಮಿಂದು, ಪಂಡಿತ ಪ್ರಕಾಂಡರಾಗಿರುವ 'ಶಾಸ್ತ್ರರತ್ನಂ' ಇತ್ಯಾದಿ ಬಿರುದಾಂಕಿತರಾಗಿರುವ ಶ್ರೀ. ಚೀಮನಹಳ್ಳಿ ರಘುನಾಥಾಚಾರ್ಯರವರು ಆ ಗ್ರಂಥದ ಮೂಲಕ ಭಕ್ತಿಯ ಸಹಸ್ರಮುಖಗಳನ್ನು ಸಾಧಾರವಾಗಿ ಪರಿಚಯ ಮಾಡಿಕೊಟ್ಟು ಆಸ್ತಿಕ ಲೋಕಕ್ಕೆ ಉಪಕಾರ ಮಾಡಿದ್ದಾರೆ. ಆ ಗ್ರಂಥದ ಮಹತ್ವದ ದೃಷ್ಟಿಯಿಂದ ಅದಕ್ಕಿಟ್ಟಿರುವ ಬೆಲೆ ಅತ್ಯಲ್ಪ. ಪ್ರತಿಯೊಬ್ಬ ಆಸ್ತಿಕರೂ ಓದಲೇಬೇಕಾದ 'ಸದ್ಭಕ್ತಿ ದರ್ಪಣಂ' ನಿಮಗೂ ಬೇಕಾಗಿದ್ದರೆ—

ಶ್ರೀ. ಸಿ. ಆರ್. ವೆಂಕಟೇಶ ವಿಠಲಾಚಾರ್ಯರು, ನಂ. ೨೯, 'ಹಯವದನ ಸದನ' ೬ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ. ಇವರಲ್ಲಿಗೆ ಬರೆಯಿರಿ.

Shree

Bangalore,
18-2-1966.

GÁYA MAHATMYA

By the master Scholar Sri Cheemanahalli Raghunathacharya is a masterpiece Compoundium of very useful information of practical value to all orthodax pilgrims to Gaya Kshetra. To analyse its value is to write a paralal book, every page, every sentance is a piece of research for the guidance of the pilgrims.

The Acharya has spared no pains to make the book rich in every necessary detail, with quotations from the Puranas of " Vaayu, Naradiya, Agneya, Padma, Mahabharath, Sant-Kumara-Sanhite, Thirtha-Prabandha". These themselves would tax a good scholar, But the amount of personal Knowledge Collected, when he toured north in those spots round about Gaya and the contacts he had with scholars and priests of the many places,-this Knowledge places every reader of the book under a deep debt of gratitude to the author.

Then, there is the method of exposition. It is crystal-clear as one reads the pages, one feels, as if one is a actually at the places. First, there is the graphic description of the places, every nook

and corner and every route and means of travel or transport is 'stated clearly. Then follows the cermonial detail, the sequence of rites and the fast and the penanic. Along with each and every one of these particulars, there are the ancient quatations which describe the sanctity and appropriateness of the observances.

As I have visited Northern India several times, I can declare with emphasis that the book is indispensable to every tourist and pilgrim, surely, it will be placed in a bibliographical dictionary.

If the Acharya is helped financially, the book can come out, in a well-illustrated form of places and it can also include charts of routes and resting places and institutions, which help pilgrims in several ways.

(Sd.) G. VEERARAGHAVACHAR,
Retired District Educational Officer,
BANGALORE.

To Maha vidwan Sriman Cheemanahalli
RAGHUNATHACHARYA
with Greateful regards.

ವಿ ಷ ಯಾ ನು ಕ್ರ ಮ ಣಿ ಕೆ

ತೀರ್ಥಪ್ರಬಂಧದಿಂದ

ಬೃಹನ್ನಾರದೀಯ ಪುರಾಣದಲ್ಲಿ ಸಂಕ್ಷೇಪದಿಂದ ಗಯಾಮಾಹಾತ್ಮೆಯು

ಪದ್ಮಪುರಾಣ ಆದಿಖಂಡದಲ್ಲಿ ಗಯಾ ಮಹಾತ್ಮ್ಯೆ

ನಾರದರು ಧ್ರುವರಾಜನಿಗೆ ಉಪದೇಶ 48–55

ಗಯಾ ಮಹಾತ್ಮ್ಯೆ, ಆಗ್ನೇಯ ಪುರಾಣದಿಂದ

ಪುಟ

ಮಹಾಭಾರತ ವನಪರ್ವತದಲ್ಲಿ (ಸಂಕ್ಷೇಪವಾಗಿ)
(ತೀರ್ಥಯಾತ್ರಾ ಪರ್ವದಿಂದ)

ವಾಯುಪುರಾಣದಿಂದ ಗಯಾ ಮಹಾತ್ಮ್ಯೆಯು
ಸನತ್ಕುಮಾರರು ನಾರದರಿಗೆ ಉಪದೇಶ (೮ ಅಧ್ಯಾಯಗಳು)

ಪುಟ

ನಮ್ಮ ಜ್ಞಾನೋಪದೇಶಕರೂ ಸ್ವರೂಪೋದ್ಧಾರಕರೂ
ಪಿತೃಗಳೂ ಆದ



ವೇದಾಂತವಿದ್ಯಾವಿಶಾರದ ಚೀಮನಹಳ್ಳೀ ಕೃಷ್ಣಾಚಾರ್ಯ
ಮಹಾಚಾರ್ಯರವರ ಚರಣಾರವಿಂದದಲ್ಲಿ ಭಕ್ತಿಪುರಸ್ಸರವಾಗಿ
ಈ ಸಣ್ಣ ಸೇವೆಯನ್ನು ಸಮರ್ಪಿಸಿರುತ್ತೇನೆ.

ಶ್ರೀ ಚೀಮನ್ನಳ್ಳೀ ಕೃಷ್ಣಾರ್ಯ ಹೃದಬ್ಜಾಮಲ ಮಂದಿರಃ |
ಹಯಗ್ರೀವೋ ರಮಾಕಾಂತಃ ಪ್ರಿಯತಾಂ ಸೇವಯಾನಯಾ ||

ಸಿ. ರಘುನಾಥಾಚಾರ್ಯಃ

॥ ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಗ ಯಾ ವ ರ್ಣ ನೆ

ಗಯಾಭಿ ಧಮಿದಂ ಕ್ಷೇತ್ರಂ ಶ್ರಯೇ ಶ್ರೇಯಸ್ಕರಂ ನೃಣಾಂ ।
ನ ಯತ್ರ ಸಹತೇ ಜಾತು ಕ್ರೀಯಾ ಜನ್ಮಾಂತರಕ್ರಿಯಾಂ ॥

ಯಾವ ಗಯಾಕ್ಷೇತ್ರದಲ್ಲಿ ಒಂದಾವರ್ತಿ ಪಿಂಡಪ್ರದಾನವೆಂಬ ಕ್ರಿಯೆಯು ಜನ್ಮಾಂತರದಲ್ಲಿ ಕ್ರಿಯಮಾಣ ಪಿಂಡಪ್ರದಾನ ಮೊದಲಾದ ಕ್ರಿಯೆಯನ್ನು ಸಹಿಸುವುದಿಲ್ಲವೋ, ಎಂದರೆ ಒಂದಾವರ್ತಿ (ಸಕೃತ್) ಪಿಂಡದಾನದಿಂದಲೇ ವೈಕುಂಠಪ್ರಾಪ್ತಿಯಾಗುವುದರಿಂದ, ಪುನರ್ಜನ್ಮವಿಲ್ಲವಾಗಿ, ಜನ್ಮಾಂತರದಲ್ಲಿ ಕ್ರಿಯಮಾಣ ಕರ್ಮವನ್ನು ಸಹಿಸುವುದಿಲ್ಲವೆಂದು ಭಾವವು. ಅಂಥ ಮಾನವರಿಗೆ ಪುಣ್ಯಪ್ರದಾನ ಮಾಡುವ ಇಂಥಾ ಗಯಾನಾಮಕ ಕ್ಷೇತ್ರವನ್ನು ಆಶ್ರಯಿಸುತ್ತೇನೆ.

ಗಧಾದರನ ಸ್ತೋತ್ರವು

ಗದಾಧರ ಸದಾಧರಸ್ಫುರಿತಚಾರುಹಾಸೋಲ್ಲಸ—
ತ್ಸುಧಾಧರ ಮುಧಾಧರಾಮರಕೃತಸ್ತುತೇ ಸುಂದರ, ।
ಪದಾ ಧರ ಮುದಾಧರಸ್ಖಲಿತಮೀಶ ಮಾಂ ಸದ್ವರ
ಪ್ರದಾಧರಚಿದಾದರಪ್ರಮುದಿತಾಂತರ ಶ್ರೀಧರ ॥

ನಿರಂತರ ಅಧರೋಷ್ಠದಲ್ಲಿ ಉತ್ಪನ್ನವಾದ ಮನೋಹರವಾದ ಮಂದಹಾಸವೆಂಬ ಸುಧಾವನ್ನು ಧರಿಸಿರುವನೇ, ಸರ್ವತ್ರ (ಸಮಂತಾತ್) ಮುದವನ್ನು ಧರಿಸಿದವನೇ, ದೇವತೆಗಳಿಂದ ಕೃತವಾದ ಸ್ತುತಿಯುಳ್ಳವನೇ, ಪ್ರೀತಿಯಿಂದ, ಧರಾಮರರು,—ಭೂಸುರರು—ಎನಿಸಿದ ಬ್ರಾಹ್ಮಣರಿಂದ (ಸ್ತುತಿ ಮಾಡಿಸಿಕೊಳ್ಳುವನೇ,) ಸ್ತುತ್ಯನೇ, ಸುಂದರನೇ, ಮನೋಹರನೇ, ಸಜ್ಜನರ ಇಷ್ಟಾರ್ಥಪ್ರದನೇ, "ನಾನು ಅಧಮನೆಂಬ (ದಾಸೋಽಹಂ ಎಂಬ) ಜ್ಞಾನವುಳ್ಳವರ ವಿಷಯದಲ್ಲಿ ಸಂತುಷ್ಟಾಂತರ್ಹೃದಯವುಳ್ಳವನೇ, ಎಂದರೆ ಭಕ್ತಜನರ ಭಕ್ತಿಯಿಂದ ಸಂತುಷ್ಟನಾದವನೇ, "ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ"

ಎಂಬ ಸ್ಮೃತಿಯಂತೆ ಲಕ್ಷ್ಮೀಧರನೇ, ಹೇ ಶ್ರೀಧರ, ಹೇ ಸ್ವಾಮಿನ್, ಹೇ ಗದಾಧರ, ಮದ (ಅಹಂಕಾರ) ದಿಂದ ಕೆಳಬಿದ್ದಿರುವ ನನ್ನನ್ನು ಪಾದದಿಂದ ಧರಿಸು, ನಿನ್ನ ಚರಣ ಧ್ಯಾನವನ್ನು ಕೊಟ್ಟು ರಕ್ಷಿಸು. ಎಂದು ಅರ್ಥವು.

ಶ್ರೀವಿಷ್ಣುಪಾದ ವರ್ಣನೆಯು

ಯದ್ಯಾತ್ರಾ ಪಿತೃಮಂಡಲಸ್ಯ ತನುತೇ ವೈಕುಂಠಯಾತ್ರಾಂ ಪರಾ
ಮತ್ರ ಕ್ಷಿಪ್ತತಿಲಾ ಮಹಾಂತಿ ತಿಲಶಃ ಕುರ್ವಂತಿ ಪಾಪಾನ್ಯಹೋ
ಪಿಂಡೋ ಯತ್ರ ಸಮರ್ಪಿತೋ ಯಮಭಟಾನ್ ಪಿಂಡೀಕರೋತ್ಯಕ್ಷತಾ
ಮರ್ತ್ಯಂ ಸ್ವಾಕ್ಷತಮಾದ್ಯಕಾಂ ಸ್ತುತಿಶತಿಸ್ತಂ ವಿಷ್ಣುಪಾದಂ ಭಜೇ ॥

ಯಾವ ವಿಷ್ಣು ಪಾದದ (ಗಯಾಕ್ಷೇತ್ರದ) ಯಾತ್ರೆಯು, ಯಾತ್ರೆ ಮಾಡುವವನ ಪಿತೃ ಸಮುದಾಯದ ಉತ್ತಮವಾದ ವೈಕುಂಠ ಯಾತ್ರೆಯನ್ನು ವಿಸ್ತಾರ ಮಾಡುತ್ತದೆಯೋ (ಎಂದರೆ ವಿಷ್ಣುಪಾದ ಯಾತ್ರೆಯಿಂದ ಪಿತೃಗಳಿಗೆ ವೈಕುಂಠ ಪ್ರಾಪ್ತಿಯಾಗುತ್ತದೆಂದು ಭಾವವು)—ಯಾವ ವಿಷ್ಣು ಪಾದದಲ್ಲಿ ಹಾಕಿ ಸಮರ್ಪಿಸಿದ ತಿಲ (ಎಳ್ಳೆ)ಗಳು ಮಹತ್ತರಗಳಾದ ಪಾಪಗಳನ್ನು ತಿಲಶಃ ಅಲ್ಪಗಳನ್ನಾಗಿ ಮಾಡುತ್ತದೆಯೋ, (ವಿಷ್ಣುಪಾದದಲ್ಲಿ ತಿಲಾರೋಪಣೆ ಮಾಡುವುದರಿಂದ ಮಹಾ ಪಾಪಗಳು ಪರಿಹಾರವಾಗುವುದೆಂದು ಭಾವವು) ಅಹೋ! ಅಲ್ಪ ಕರ್ಮಕ್ಕೆ ಮಹಾ ಪಾಪ ಪರಿಹಾರ ಸಾಮರ್ಥ್ಯವೆಂಬುದು ಆಶ್ಚರ್ಯವು. ಯಾವ ವಿಷ್ಣು ಪಾದದಲ್ಲಿ ಸಮರ್ಪಿಸಿದ ಪಿಂಡವು (ವಿಷ್ಣುಪದದಲ್ಲಿ ಪಿಂಡಪ್ರದಾನದಿಂದ) (ಯಮದೂತರನ್ನು ಭಯಪಡುವಂತೆ ಮಾಡುತ್ತದೆ) ಯಮಭಟರು ಭಯವುಳ್ಳವರಾಗುತ್ತಾರೆ. ಯಾವ ಆ ವಿಷ್ಣುಪಾದದಲ್ಲಿ ಸಮರ್ಪಿತಗಳಾದ ಅಕ್ಷತೆ (ಅಕ್ಕಿಕಾಳು) ತೆಗಳು ಮರಣಶೀಲನಾದ ಮನುಷ್ಯನನ್ನು ಅಮೃತನನ್ನು (ಅಕ್ಷತ) ಮುಕ್ತನನ್ನು ಮಾಡುತ್ತದೆ. ವಿಷ್ಣು ಪಾದದಲ್ಲಿ ಮಂತ್ರಾಕ್ಷತೆಯನ್ನು ಸಮರ್ಪಿಸುವುದರಿಂದ ಮುಕ್ತರಾಗುತ್ತಾರೆಂದು ಭಾವವು. ಯಾವ ವಿಷ್ಣುಪಾದ ವಿಷಯದಲ್ಲಿ ಕೃತವಾದ ಸ್ತೋತ್ರ ಸಮೂಹವು ಸ್ತುತಿಮಾಡತಕ್ಕವನನ್ನು ಸ್ತುತ್ಯನನ್ನಾಗಿ ಮಾಡುತ್ತದೆ. ಅವನನ್ನೇ ಭಗವದ್ಭಕ್ತನೆಂದು ಸ್ತುತಿಮಾಡುವರು. ಅವನು ಯೋಗ್ಯವರಿಂದ ಅರ್ಚ್ಯನು, ಸ್ತುತ್ಯ

ನಾಗುವನೆಂಬುದು ಪ್ರಸಿದ್ಧವು. ಅಂಥಾ ವಿಷ್ಣು ಪಾದವನ್ನು ಭಜಿಸಿ, ಸೇವಿಸಿ, ಪೂಜಿಸುತ್ತೇನೆ.

ಫಲ್ಗು ನದಿಯ ವರ್ಣನೆಯು

ಅಪಿ ಜನ್ಮಶತೋದ್ಭೂತಂ ಕೃಪಯಾ ಯಾ ಹರಂತ್ಯಘಂ ।
ಮನುತೇ ಫಲ್ಗು ಸಾ ಫಲ್ಗುನದೀ ಸದ್ಗುಣದಾಸ್ತು ಮೇ ॥

ಯಾವ ಫಲ್ಗುನದಿಯು ನೂರಾರು ಜನ್ಮಗಳಲ್ಲಿ ಆರ್ಜಿಸಿ ಸಂಪಾದಿಸಿದ ಪಾಪವನ್ನು ಕೃಪೆಯಿಂದ ಪರಿಹರಿಸಿ ನಾಶಮಾಡುತ್ತಿದ್ದರೂ ಫಲ್ಗು, ತುಚ್ಛವನ್ನಾಗಿ ತಿಳಿಯುತ್ತದೆ. ಬಹುಜನ್ಮಾರ್ಜಿತ ಪಾಪ ಪರಿಹಾರರೂಪ ಮಹೋಪಕಾರವನ್ನೂ ಸಹ, ಗಾಂಭೀರ್ಯಾಖ್ಯ ಗುಣವುಳ್ಳಳಾದುದರಿಂದ ಅಲ್ಪ ಫಲವನ್ನೇ ಕೊಟ್ಟೆನೆಂದು ತಿಳಿಯುತ್ತಾಳೆ. ಬಹುದೂರದಿಂದ ಬಂದ ಮನುಜರಿಗೆ ನಾನು ಫಲವನ್ನು ಕೊಟ್ಟೆನೆಂದು ಸಹ ತಿಳಿಯುವುದಿಲ್ಲವು. "ತ್ಯಾಗೇ ಶ್ಲಾಘಾವಿಪರ್ಯಯಃ" ಎಂದು ಮಹಾತ್ಮರ ಗುಣವು. ಆದುದರಿಂದ ಆ ಫಲ್ಗುನದಿಯು "ಫಲ್ಗು" ಎಂಬ ಸಂಜ್ಞೆಯುಳ್ಳ ನದಿಯು ನನಗೆ ನಿರಹಂಕಾರಾದಿ ಸದ್ಗುಣ (ಶುಭಗುಣ) ಗಳನ್ನು ಕೊಡುವುದಾಗಲಿ."

॥ ಶ್ರೀಶ ಪಾಹಿ ಮಾಂ ॥

"ಗಯಾತೀರ್ಥ"ವೆಂಬುದು ಲೋಕದಲ್ಲಿ ವಿಖ್ಯಾತವಾಗಿದೆ. ಇದು ಸರ್ವತೀರ್ಥಗಳಲ್ಲಿ ಶ್ರೇಷ್ಠವಾದುದು. ಅಲ್ಲಿ ದೇವದೇವೇಶನಾದ ಪಿತಾಮಹನೇ ಸ್ವಯಂ ಇರುವನು. ಅಲ್ಲಿ ಯೋಗವನ್ನು ಇಚ್ಛಿಸುವ ಪಿತೃಗಳಿಂದ "ಬಹು ಮಕ್ಕಳಾಗಲು ಇಚ್ಛಿಸಿ ಯಜ್ಞ(ಯಜನ)ಮಾಡಬೇಕು, ಅವರಲ್ಲಿ ಒಬ್ಬನಾದರೂ ಗಯಾಕ್ಕೆ ಹೋದ ಪಕ್ಷದಲ್ಲಿ, ಅಥವಾ ಅಶ್ವಮೇಧಯಾಗವನ್ನು ಮಾಡಿದರೆ, ಅಥವಾ ಕರಿಯಬಣ್ಣದ ಹೋರಿಯನ್ನು ಗೂಳಿಬಿಟ್ಟರೆ ನಮಗೆ ಸದ್ಗತಿಯಾಗುತ್ತದೆ." ಎಂದು ಇಚ್ಛಿಸಿ ನುಡಿಯಲ್ಪಡುತ್ತಿದೆ, ಗಯಾಮಾಹಾತ್ಮ್ಯೆಯು ಭುಕ್ತಿ ಮುಕ್ತಿ ಕೊಡುವ ಉತ್ತಮವೂ ಅವಶ್ಯಕವಾಗಿ ಶ್ರವಣೀಯವಾದುದೂ ಆಗಿದೆ.

ಪೂರ್ವದಲ್ಲಿ "ಗಯಾಸುರ"ನೆಂಬ ಮಹಾ ಪರಾಕ್ರಮಶಾಲಿಯು ಇದ್ದನು. ಆ ವೀರನೂ ಸಹ ಪರಮ ಉತ್ಕೃಷ್ಟವಾದ ಸರ್ವಭೂತಗಳಿಗೂ ತಾಪವನ್ನುಂಟುಮಾಡುವ ಉಗ್ರ ತಪಸ್ಸನ್ನಾಚರಿಸಿದನು. ಆತನ ತಪಸ್ಸಿನಿಂದ ಸಂತಪ್ತರಾದ ದೇವತೆಗಳು ಅವನನ್ನು ವಧೆಮಾಡಲು ಹರಿಯನ್ನು ಶರಣು ಹೊಕ್ಕರು. ಹರಿಯು ಅವರನ್ನು ಕುರಿತು "ಕೆಳಗೆ ಬಿದ್ದ ಆತನ ಮಹಾ ದೇಹದಲ್ಲಿ ನೀವು ಶಿವಾತ್ಮರುಗಳಾಗಬೇಕಾಗುತ್ತದೆ" ಎಂದು ನುಡಿಯಲು, ಆ ದೇವತೆಗಳು ಶ್ರೀಹರಿಯನ್ನು ಕುರಿತು "ಹಾಗೆಯೇ ಆಗಲಿ" ಎಂದರು.

ಒಂದು ಕಾಲದಲ್ಲಿ ಶಿವನ ಪೂಜೆಗೋಸ್ಕರ ಕ್ಷೀರಸಾಗರದ ದೆಸೆಯಿಂದ ಕಮಲ ಪುಷ್ಪಗಳನ್ನು ತಂದು, ಶ್ರೀಹರಿಯ ಸಮೀಪ (ಸ್ಥಳ)ದಲ್ಲಿ ಮಲಗಿ ನಿದ್ರೆ ಮಾಡಲು, ವಿಷ್ಣುಮಾಯೆಯಿಂದ ವಿಮೂಢನಾದ ಈ ಅಸುರನು ವಿಷ್ಣುವಿನಿಂದಲೇ ಗದೆಯಿಂದ ಹತನಾಗಿ ಸಂಹೃತನಾದನು. ಅನಂತರ ಗಯಾದಲ್ಲಿ ವಿಷ್ಣುವು ಗದಾಧರನಾಗಿ ಮುಕ್ತಿಯನ್ನು ಕೊಡುವನೆಂದು ಸ್ತುತ್ಯನಾದನು. ಅವನ ದೇಹದಲ್ಲಿ ಪಿತಾಮಹನು ಶುದ್ಧನಾಗಿ ಲಿಂಗರೂಪಿ ಯಾಗಿ ಸ್ಥಿತನಾಗಲು ವಿಷ್ಣುವಾಹಾರ್ಥವಾಗಿ ಇದು ಪುಣ್ಯಕ್ಷೇತ್ರವಾಯಿತು. ಇಲ್ಲಿ ಮಾನವನು ಸ್ನಾನ, ಯಜ್ಞ, ಶ್ರಾದ್ಧ, ಪಿಂಡಪ್ರದಾನ ಮಾಡಿದರೆ ಸ್ವರ್ಗ ಕ್ಕಾಗಲಿ, ಬ್ರಹ್ಮಲೋಕಕ್ಕಾಗಲಿ ಹೋಗುತ್ತಾನೆ. ಅಂಥವನೆಂದಿಗೂ ನರ ಕಕ್ಕೆ ಹೋಗುವುದಿಲ್ಲ.

ಪಿತಾಮಹನು ಗಯಾ ತೀರ್ಥವು ಉತ್ತಮವಾದುದೆಂದು ತಿಳಿದು ಅಲ್ಲಿ ಯೋಗಾನುಷ್ಠಾನವನ್ನು ಮಾಡಿದನು. ಅಲ್ಲಿಗೆ ಬಂದ ಋಷಿಗಳನ್ನೂ, ಬ್ರಾಹ್ಮಣರನ್ನೂ ಪೂಜೆ ಮಾಡಿದವನು ಸರಸ್ವತೀ ನದಿಯನ್ನು ಸೃಜಿಸಿ ದಿಗಂ ತರದಲ್ಲಿ ವ್ಯಾಪಿಸಿ ಸ್ಥಿತನಾದನು. ಭಕ್ಷ್ಯ, ಭೋಜ್ಯ, ಫಲಾದಿಗಳನ್ನೂ ಕಾಮಧೇನುವನ್ನೂ ಸೃಜಿಸಿದನು. ಪಂಚಕ್ರೋಶವನ್ನೂ ಗಯಾ ತೀರ್ಥ ವನ್ನೂ ಬ್ರಾಹ್ಮಣರಿಗೆ ಧನವನ್ನೂ ಕೊಟ್ಟನು. ಅಂಥ ಧರ್ಮ ಯಾಗದಲ್ಲಿ ಅವರು ಲೋಭದಿಂದ ಅವುಗಳನ್ನು ಪ್ರತಿಗ್ರಹ ಮಾಡಿ ಧನಾದಿಗಳನ್ನು ಸ್ವೀಕ ರಿಸಿ ಸ್ಥಿತರಾಗಲು ಆ ಬ್ರಾಹ್ಮಣರು ಗಯಾದಲ್ಲಿ "ನಿಮಗೆ ತ್ರಿಪುರುಷೀ ವಿದ್ಯೆಯು (ವೇದವೂ) ತ್ರಿಪುರುಷ ಧನವೂ ಇಲ್ಲದೆ ಹೋಗಲಿ. ನಿಮ್ಮಲ್ಲಿ ಪರಸ್ಪರ ವಿರಸವುಂಟಾಗಲಿ, ನದಿಯಲ್ಲಿ ನೀರಿಲ್ಲದೆ ಹೋಗಲಿ. ಪರ್ವತವ

ಪಾಷಾಣವಾಗಲಿ " ಎಂಪು ಶಾಪವನ್ನು ಹೊಂದಲು, ಬ್ರಹ್ಮನನ್ನು ಅವರು ಪ್ರಾರ್ಥಿಸಲು, ಆ ಪ್ರಭುವು ಅಲ್ಲಿ ತೀರ್ಥಗಳನ್ನು ನಿರ್ಮಿಸಿ " ಇಲ್ಲಿ ಶ್ರಾದ್ಧ ಮಾಡುವ ಜನರು ಗಯಾ ಶ್ರಾದ್ಧದಿಂದ ಪುಣ್ಯವನ್ನು ಪಡೆದು ಬ್ರಹ್ಮ ಲೋಕಕ್ಕೆ ಹೋಗುವರು. ನಿಮ್ಮನ್ನು ಪೂಜಿಸಿದವರು ನನ್ನನ್ನೇ ಅವರು ಪೂಜಿಸಿದಂತೆ ಆಗಲಿ. ನಿಮ್ಮ ಪೂಜೆಯೇ ನನ್ನ ಪೂಜೆಯು." ಎಂದು ಹೇಳಿ ಬ್ರಹ್ಮಜ್ಞಾನವೂ, ಗಯಾ ಶ್ರಾದ್ಧವೂ, ಗೋಗೃಹದಲ್ಲಿ ಮರಣವೂ, ಪುರುಷರು ಕುರುಕ್ಷೇತ್ರದಲ್ಲಿ ವಾಸಿಸುವುದೂ, ಇವು ನಾಲ್ಕು ವಿಧವಾದ ಮುಕ್ತಿಯು. ಸಮುದ್ರಗಳೂ, ಸರ್ವ ನದಿಗಳೂ, ವಾಪೀ ಕೂಪ, ದೇವ ಹ್ರದಗಳ ಅಭಿಮಾನಿ ದೇವತೆಗಳೆಲ್ಲರೂ ಗಯಾತೀರ್ಥಕ್ಕೆ ನಿಸ್ಸಂಶಯವಾಗಿ ತಪ್ಪದೆ ಸ್ನಾನ ಮಾಡಲು ಇಚ್ಛಿಸಿ ಬರುತ್ತಾರೆ. ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರ್ವಂಗನಾ ಗಮನ ಪಾಪಗಳು ಇಂಥಾ ಪಾಪಿ ಸಂಗಿ ಸಂಗ ಮಾಡಿದವರೆಲ್ಲರ (ಈರೀತಿ ಪ್ರಸಿದ್ಧರಾದ ಪಂಚ ಮಹಾ ಪಾತಕಿಗಳ) ಪಾಪಗಳೂ ಗಯಾ ಶ್ರಾದ್ಧದಿಂದ ಸಂಪೂರ್ಣವಾಗಿ ವಿನಾಶ ಹೊಂದಿ ಪರಿಹೃತಗಳಾಗುವುವು.

ಸಂಸ್ಕಾರಹೀನರಾಗಿ ಮೃತರಾದವರು, ಪಶುಗಳಿಂದ ಹತರಾದವರು, ಹೊಡೆಸಿಕೊಂಡು ಸತ್ತವರು, ಹಾವು ಕಚ್ಚಿ ಸತ್ತವರುಗಳೆಲ್ಲರೂ ಗಯಾ ಶ್ರಾದ್ಧ ಮಾಡುವದರಿಂದ, ಪಾಪಗಳಿಂದ ಮುಕ್ತರಾಗಿ ಸ್ವರ್ಗಕ್ಕೆ ಹೋಗುತ್ತಾರೆ. ಗಯಾದಲ್ಲಿ ಪಿಂಡದಾನದಿಂದ ಏನು ಫಲ ಬರುತ್ತದೆಂಬುದನ್ನು ಕಲ್ಪಕೋಟಿ ಶತಗಳಲ್ಲಿ ಹೇಳಿದರೂ ಮುಗಿಯುವುದಿಲ್ಲವು. ಅದು ಅನಂತ ಫಲಗಳನ್ನು ಕೊಡುವುವು. ಈ ವಿಷಯದಲ್ಲಿ ಒಂದು ಪುರಾತನ ಇತಿಹಾಸವು ಈ ರೀತಿ ಹೇಳಲ್ಪಟ್ಟಿದೆ. ಸಮಾಹಿತ ಮನಸ್ಕರಾಗಿ ಆಲಿಸಿರಿ.

ತ್ರೇತಾಯುಗದಲ್ಲಿ " ವಿಶಾಲ ನಗರ "ವನ್ನು ನಿರ್ಮಿಸಿದವನೆಂದು ಪ್ರಸಿದ್ಧನಾದ " ವಿಶಾಲ ನೃಪತಿ " ಎಂಬ ರಾಜನಿದ್ದನು. ಆತನು ಧನ್ಯನು, ಧೃತಿಮಂತನು, ಧರ್ಮದಿಂದ ರಾಜ್ಯಪಾಲನೆ ಮಾಡುತ್ತಿದ್ದನು. ಈ ವಿಶಾಲಾಧಿಪತಿಗೆ ಮಕ್ಕಳಿಲ್ಲವಾಗಿ ಬ್ರಾಹ್ಮಣೋತ್ತಮರನ್ನು ಕರೆಸಿ ಅವರನ್ನು ಪೂಜಿಸಿ ಪರಾಕ್ರಮಶಾಲಿಯೂ, ಶತ್ರುಹಂತಕನೂ ಆದ ಆ ರಾಜನು ಪುತ್ರಾರ್ಥಿಯಾಗಿ ಪ್ರಶ್ನಿಸಲು ಅದೀನ ಸತ್ವರಾದ ಆ ದ್ವಿಜರು " ಎಲೈ ರಾಜನೇ ಪುತ್ರಸಂತಾನ ಪಡೆಯಲು ಗಯಾ ಕ್ಷೇತ್ರಕ್ಕೆ ಹೋಗಿ ವಿಧ್ಯುಕ್ತ ಪ್ರಕಾರವಾಗಿ

ನಿನ್ನ ಪಿತೃಗಳ ಪ್ರೀತ್ಯರ್ಥವಾಗಿ ಶ್ರದ್ಧೆಯಿಂದ ಪಿಂಡಪ್ರದಾನಾದಿಗಳನ್ನು ಶ್ರಾದ್ಧವನ್ನು ಮಾಡು. ಕೂಡಲೇ ನಿನಗೆ ತಪ್ಪದೆ ನಿಶ್ಚಯವಾಗಿಯೂ ಪಿತೃ ದೇವತೆಗಳ ಅನುಗ್ರಹದಿಂದ ವೀರನೂ ಸಕಲ ಲಕ್ಷಣಗಳಿಂದ ಕೂಡಿದ ಸಹಸ್ರ ದಾತನಾದ ಕ್ಷಿತೀಶನು ರಾಜಕುಮಾರನಾಗಿ ಜನಿಸುವನು" ಎಂದು ಹೇಳಿದರು.

ಹೀಗೆ ಬ್ರಾಹ್ಮಣರ ಮುಖದಿಂದ ಸಲಹೆಯನ್ನು ಪಡೆದ ವಿಶಾಲಾಧಿಪತಿಯು ಪ್ರಯತ್ನಪೂರ್ವಕವಾಗಿ ವಿಪ್ರರುಗಳಿಂದ ಕೂಡಿ ಪ್ರಹೃಷ್ಟಾಂತರಂಗನಾಗಿ, ಪ್ರಯತ್ನಪೂರ್ವಕವಾಗಿ, ಸಕಲ ತೀರ್ಥ ಶ್ರೇಷ್ಠನೆನಿಸಿದ **ಗಯಾತೀರ್ಥಕ್ಕೆ** ತನ್ನ ಪುರೋಹಿತ, ಪರಿವಾರ ದ್ವಿಜರೊಡನೆ ಭಗನ್ನಿಷ್ಠ ಬುದ್ಧಿಯಿಂದ ತದ್ಗತ ಮನಸ್ಕನಾಗಿ ಗಯಾ ತೀರ್ಥಕ್ಕೆ ಬಂದು ತೀರ್ಥರಾಜನಲ್ಲಿ ಮಿಂದು **ಗಯಾಶಿರಸ್ಸಿ**ನಲ್ಲಿ ವಿಷ್ಣುಪಾದದಲ್ಲಿ ಪಿತೃಯಜ್ಞದಲ್ಲಿ ನಿರತನಾಗಿ ವಿಧ್ಯುಕ್ತ ರೀತಿಯಲ್ಲಿ ವಿಷ್ಣು ಪಾದದಲ್ಲಿ ಪಿಂಡಪ್ರಧಾನ ಮಾಡಲು ಆಗಲೇ ಆಕಾಶದಲ್ಲಿ ಅವನ ಪಿತೃಗಳು ಮೂರ್ತಿಮತ್ತಾಗಿ ಬಂದುದನ್ನು ಬಿಳಿವರ್ಣ, ರಕ್ತ ವರ್ಣ ಮತ್ತು ಕೃಷ್ಣವರ್ಣ ಉಳ್ಳ ಮೂವರನ್ನು ಕಂಡು ರಾಜನು ಅವರನ್ನು ಕುರಿತು "ಏನಿದು ನೀವು ಈ ರೀತಿ ಇರುವಿರಿ? ನಿಮ್ಮನ್ನು ಕಂಡು ಸಂತೋ ಹಿತನಾದ ನನಗೆ ಮನಸ್ಸಿನಲ್ಲಿ ಕುತೂಹಲ ಉಂಟಾಗಿದೆ. ಈ ನಿಮ್ಮ ವರ್ಣ ಗಳ ಸ್ಥಿತಿಗತಿಗಳನ್ನು ತಿಳಿಸಿ" ಎಂದು ಕೇಳಲು ಅವರಲ್ಲಿ ಸಿತ (ಬಿಳಿ ವರ್ಣ) ದವನು "ಎಲೈ ರಾಜನೇ ಈ ಬೆಳ್ಳಗಿರುವ ಸಿತನಾದ ನಾನು ಹೆಸರಿನಿಂದಲೂ ವರ್ಣದಿಂದಲೂ, ಕರ್ಮದಿಂದಲೂ "ಸಿತನೆ"ನಿಸಿರುವೆನು, ಈತನು ನನ್ನ ತಂದೆಯು ರಕ್ತವರ್ಣವುಳ್ಳವನು, ಪಾಪಕರ್ಮ ಮಾಡಿದವನು, ಬ್ರಹ್ಮಹತ್ಯೆ ಮಾಡಿದವನು, ಸುಳ್ಳು ಹೇಳಿದವನು. ಅನಂತರ ಕೇಳು ಈ ಪ್ರಪಿತಾಮಹನು ವರ್ಣದಿಂದಲೂ, ನಾಮದಿಂದಲೂ, ಕರ್ಮದಿಂದಲೂ, ಕೃಷ್ಣವರ್ಣನು. ಕೃಷ್ಣ ಎನಿಸಿದವನು, ಈತನಿಂದ ಪೂರ್ವದಲ್ಲಿ ಅನೇಕ ಜನ್ಮ ಗಳಲ್ಲಿ ಪುರಾತನರಾದ ಅನೇಕ ಋಷಿಗಳು ಹತರಾದರು. ಈ ಇಬ್ಬರೂ ತಂದೆ ಮಕ್ಕಳು ಎನಿಸಿದವರು. **ಅವೀಚಿ** ಎಂಬ ಸಂಜ್ಞೆಯುಳ್ಳ ನರಕಕ್ಕೆ ತಳ್ಳಲ್ಪ ಟ್ಟರು. ಆಮೇಲೆ ಈ ನನ್ನ ಜನಕನೂ ಆತನ ತಂದೆಯಾದ ಈ ಕೃಷ್ಣವಕ್ತ್ರ (ಮುಖ)ನು ದೀರ್ಘಕಾಲ ಅಲ್ಲಿ ವಾಸಿಸಿದರು ನಾನೂ ಸಹ ಶುದ್ಧವಾದ ನನ್ನ

ನಿಜ ಕರ್ಮದಿಂದ ಅತ್ಯಂತ ದುರ್ಬಲವಾದ ಶಕ್ರಾಸನವೆನಿಸಿದ ಸ್ವರ್ಗದಲ್ಲಿ ವಾಸಿಸುತ್ತಿದ್ದೆನು. ಬುದ್ಧಿವಂತನೂ, ಮಂತ್ರಜ್ಞನೂ ಆದ ನಿನ್ನಿಂದ ಈ ಗಯಾದಲ್ಲಿ ಪಿಂಡಪ್ರದಾನದಿಂದ ಆಚರಿಸಿದ ಶ್ರಾದ್ಧದಿಂದ ಇವರಿಬ್ಬರೂ ಬಲಾತ್ಕಾರದಿಂದ ತೀರ್ಥವರ ಪ್ರಭಾವದ ದೆಶೆಯಿಂದಲೂ, ಆವೀಚಿ ನರಕದಲ್ಲಿ ಬಿದ್ದು ದುಃಖ ಪಡುತ್ತಿದ್ದವರು, ಎಲ್ಲೈ ಅರಿಂದಮನೇ, ನಿನ್ನಿಂದ ಪಿತೃಗಳನ್ನೂ, ಪಿತಾಮಹಂದರನ್ನೂ, ಹಾಗೆಯೇ ಪ್ರಪಿತಾಮಹಂದರನ್ನೂ ಪ್ರೀಣಯಾಮಿ (ತೃಪ್ತಿಪಡಿಸುತ್ತೇನೆ.) ಎಂದು ಉದಕವನ್ನು ಕೊಡಲ್ಪಡುತ್ತಿದ್ದಂತೆಯೇ ಆ ಸಂಕಲ್ಪ ಕರ್ಮಪ್ರಭಾವದಿಂದ ಎಲ್ಲೈ ಸತ್ತಮನೇ, ಆ ನಿನ್ನ ವಾಕ್ಯದಿಂದ ನಾವೆಲ್ಲರೂ ಒಟ್ಟಿಗೆ ಬಂದು ನಿನ್ನ ಸಪರ್ಯೆಯನ್ನು ಸ್ವೀಕರಿಸಿ ಈ ತೀರ್ಥಪ್ರಭಾವದಿಂದ ಪಿತೃಲೋಕಕ್ಕೆ ಹೋಗುತ್ತಿರುವೆವು. ನಿನಗೆ ಸಂಶಯಬೇಡ. ಇಲ್ಲಿ ಪಿಂಡಪ್ರಧಾನ ಮಾಡಿದ್ದರಿಂದ ಈ ನಿನ್ನ ಪಿತಾಮಹ ಪ್ರಪಿತಾಮಹಂದಿರಿಬ್ಬರನ್ನೂ ನಿನ್ನಲ್ಲಿರುವ ಭಕ್ತಿಯಿಂದ ಸಂಸಿದ್ಧರಾಗಿ ಪಾಪದಿಂದ ವಿಕೃತಲಿಂಗವುಳ್ಳವರಾಗಿ ಕಶ್ಮಲದೇಹ ವಿಕಾರಗಳಿಂದ ಮುಕ್ತರಾದರು. ಈ ಕಾರಣದಿಂದ ನಾನೂ ಇವರಿಬ್ಬರನ್ನು ಹಿಡಿದುಕೊಂಡು ಬಂದೆನು. ನಿನ್ನನ್ನು ನೋಡಲು ಬಂದವನು ಈಗ ಇನ್ನು ಹೊರಡುತ್ತೇನೆ. ಪುತ್ರನೇ, ಈ ತೀರ್ಥಪ್ರಭಾವದಿಂದ ಯತ್ನಪೂರ್ವಕವಾಗಿ ಗಯಾದಲ್ಲಿ ಪಿಂಡಪ್ರದಾನದಿಂದ ಬ್ರಹ್ಮಹತ್ಯೆ ಮಾಡಿದ್ದರೂ ತಂದೆ ತಾತಂದಿರ ಪಾಪಗಳು ಪರಿಹಾರವಾಗಿ ಅವರು ಉದ್ಧೃತರಾಗುತ್ತಾರೆ" ಎಂತೆಂದು ಹೇಳಿ ಈ ರಾಜನ ತಂದೆಯಾದ ಸಿತಸು ತನ್ನ ಪಿತೃಪಿತಾಮಹರೊಡಗೂಡಿ ಹೊರಡುವಾಗ "ನಿನಗೆ ಸದ್ಯದಲ್ಲೇ ಉತ್ತಮನಾದ ಪುತ್ರನು ಜನಿಸಲೆಂದು" ಆಶೀರ್ವದಿಸಿ, ವಿಶಾಲರಾಜನಿಗೆ ಪುತ್ರಜನನಾರ್ಥವಾಗಿ ಆಶೀರ್ವಾದದಿಂದ ಅನುಗ್ರಹಿಸಿ ತಮ್ಮ ಲೋಕಕ್ಕೆ ಹೊರಟುಹೋದರು.

ಒಂದಾವರ್ತಿ ಗಯಾಕ್ಕೆ ಹೋಗುವುದು, ಒಂದು ಸಲ ಪಿತೃಗಳಿಗೆ ವಿಷ್ಣುಪದದಲ್ಲಿ ಗಯಾ ಶಿರಸ್ಸಿನಲ್ಲಿ ಪಿಂಡಪ್ರದಾನ ಮಾಡುವುದು, ಇವುಗಳಿಂದ ಯಾವುದು ತಾನೇ ದುರ್ಲಭ? ಸರ್ವಪಿತೃಗಳೂ ಉದ್ಧೃತರಾಗಿ ಸ್ವರ್ಗಾದಿಗಳಲ್ಲಿ ಸುಖದಿಂದ ಇರುವರೆಂದು ಪ್ರತ್ಯೇಕ ಹೇಳಬೇಕಾದುದೇನಿದೆ? ಇದು ಈ ಕ್ಷೇತ್ರದ ನಿತ್ಯದ ವ್ಯವಸ್ಥೆಯು. ಪತಿತರಿಗೆ ಪಿಂಡಹಾಕುವುದರಿಂದ ಸದ್ಗತಿಯು. ಕೆಲವು ಪತಿತರಿಗೆ ಕ್ವಚಿತ್ ಒಂದು ಸಂವತ್ಸರದ ಒಳಗೆ ದೇಶ,

ಕಾಲ, ಪ್ರಮಾಣಗಳಿಂದ ತನ್ನ ಬಂಧುಗಳಿಂದ ಗಯಾಕೂಪದಲ್ಲಿ ಪಿಂಡವನ್ನು ಹಾಕಿದರೂ ಅದು ಫಲ ಕೊಡುವುದು.

ಒಂದು ಕಾಲದಲ್ಲಿ ಒಬ್ಬ ವಣಿಕೌ (ವೈಶ್ಯ ವ್ಯಾಪಾರಿ) ನಿನ್ನ ಪ್ರೇತತ್ವ ವಿನ್ನೂ ಪೂರ್ಣ ಹೋಗದಿರುವಾಗ ಪ್ರೇತರಾಜನು (ಆ ಜೀವನು) ತನ್ನ ಮುಕ್ತಿಗಾಗಿ ಹೀಗೆ ಹೇಳಿದನು. "ನೀನು ಗಯಾ ತೀರ್ಥವನ್ನು ನೋಡಿ ಮೃತ್ತಿಕಾ ಶೌಚಾದಿಗಳನ್ನಾಚರಿಸಿ, ಸ್ನಾನಮಾಡಿ ನನ್ನ ನಾಮವನ್ನು ಉದ್ದೇಶಿಸಿ, ಉಚ್ಚ ರಿಸಿ ಪಿಂಡವನ್ನು ಹಾಕು. ಅಲ್ಲಿ ಪಿಂಡಪ್ರದಾನದಿಂದ ಪ್ರೇತಭಾವದಿಂದ ಮುಕ್ತನಾಗಿ ಸುಖವನ್ನು ಹೊಂದುವೆನು ಸರ್ವದಾತೃಗಳ ದಾನಾದಿಗಳಿಂದ ನಾನು ಶುಭಲೋಕಗಳನ್ನು ಹೊಂದುವೆನು," ಎಂದು ಹೇಳಿ ಆ ವಣಿಕನನ್ನು ತನ್ನ ಅನುಗರಿಂದ ಸಹಿತನಾಗಿ, ತನ್ನ ನಾಮಗಳನ್ನು ಯಥಾ ನ್ಯಾಯವಾಗಿ ಸರಿಯಾಗಿ ಹೇಳಿ ರಹಸ್ಯವಾಗಿ ತಿಳಿಸಿ, ಅನುತ್ತಮಸಾದ ಗಯಾಶೀರ್ಷ ವನ್ನು ಕುರಿತು ಹೊರಟನು, ಅಲ್ಲಿ ಪ್ರೇತರಿಗೆ ಅನುಪೂರ್ವದಿಂದ ಪಾಂಸು (ಮಣ್ಣಿನಧೂಳಿ) ಪಿಂಡವನ್ನು ಹಾಕಿ ಪಿತೃಗಳಿಗೂ ವಸು ದಾನವನ್ನು ಮಾಡಿ, ಮಹಾಬುದ್ಧಿವಂತನಾದ ಈ ವಣಿಕ್ ತನಗೂ ಸಹ (ಆತ್ಮಶ್ರಾದ್ಧ) ತಿಲವನ್ನು ಬಿಟ್ಟು, ಎಳ್ಳು ಇಲ್ಲದೆ, ಪಿಂಡವನ್ನು ನಿರ್ವಪಣ (ಹಾಕಿದನು) ಮಾಡಿದ್ದಲ್ಲದೆ, ತನ್ನ ಗೋತ್ರದಲ್ಲಿದ್ದ ಇತರರಿಗೂ ಪಿಂಡಗಳನ್ನು ಕೊಟ್ಟನು. ಹೀಗೆ ವಣಿಕ ನಿಂದ ಅನುಷ್ಠಾನ ಮಾಡಲು ಅವರು ಪ್ರೇತಭಾವದಿಂದ ವಿಮುಕ್ತರಾಗಿ ದ್ವಿಜತ್ವವನ್ನು ಪಡೆದು ನಂತರ ಬ್ರಹ್ಮಲೋಕಕ್ಕೆ ಹೋದರು.

ಪಾಯಸ, ಖಡ್ಗಮೃಗ ಮಾಂಸಪುತ್ರರಿಂದ ಕೊಡಲ್ಪಟ್ಟದ್ದು ಪಿತೃ ಕ್ಷಯವು. ಕೃಷ್ಣಲೋಹ, ಮೇಕೆ ಮೊದಲಾದ ದಾನಗಳನ್ನು ಕೊಡುವುದು ಅನಂತಪುಣ್ಯಪ್ರದವಾಗಿ ಕಲ್ಪಿಸಲ್ಪಡುತ್ತದೆ ಗಯಾದಲ್ಲಿ ಶ್ರಾದ್ಧವೂ, ಜಪ, ಹೋಮ, ತಪಸ್ಸು ಅಕ್ಷಯ ಫಲಪ್ರದವು. ಪಿತೃಕ್ಷಯ (ಕೃಷ್ಣ ಪಕ್ಷ)ದಲ್ಲಿ ಅವರ ಪುತ್ರರಿಂದ ಕೊಡಲ್ಪಟ್ಟದ್ದು, ಅವರು ಆಚರಿಸಿದ ಕರ್ಮವೂ, ಅನಂತತ್ವವನ್ನು ಹೊಂದುವುದು. ನರಕದಿಂದ ಭಯಪಟ್ಟ ಪಿತೃಗಳು, ಮಕ್ಕಳ ಸಹಾಯವನ್ನು ಅಪೇಕ್ಷಿಸುತ್ತಾರೆ. ಯಾವ ಪುತ್ರನು ಗಯಾಕ್ಕೆ ಹೋಗುತ್ತಾನೆಯೋ ಅವನು ನಮ್ಮನ್ನು ಈ ನರಕದಿಂದ ಕಷ್ಟದಿಂದ ದಾಟಿಸುತ್ತಾನೆ. ಗಯಾದಲ್ಲಿ

ಧರ್ಮಪ್ರಷ್ಠದಲ್ಲಿ, ಬ್ರಹ್ಮಸದಸ್ಸಿನಲ್ಲಿ, ಹಾಗೆಯೇ ಗಯಾಶಿರಸ್ಸಿನಲ್ಲಿ, ಅಕ್ಷಯ ವಟದಲ್ಲಿ ಪಿತೃಗಳಿಗೆ ಕೊಟ್ಟದ್ದು ಅಕ್ಷಯವಾಗುವುದು.

ಬ್ರಹ್ಮಾರಣ್ಯ, ಧರ್ಮಪೃಷ್ಠ, ಧೇನುಕಾರಣ್ಯಗಳನ್ನು ನೋಡಿ, ಪಿತೃಗಳನ್ನು ಶ್ರಾದ್ಧಪಿಂಡ ಪ್ರದಾನಾದಿಗಳಿಂದ ಪೂಜಿಸುವುದರಿಂದ ಇಪ್ಪತ್ತು ಕುಲಗಳನ್ನು ಉದ್ಧರಿಸುವನು.

ಮಹಾಕಲ್ಪದಲ್ಲಿ ಮಾಡಿದ ಪಾಪವು ಗಯಾಕ್ಕೆ ಹೋದೊಡನೆಯೇ ವಿನಾಶವಾಗುವುದು. ಗೋವಿನಲ್ಲಿ, ಗೃಧ್ರವಟದಲ್ಲಿ ಶ್ರಾದ್ಧಮಾಡಿ ಕೊಟ್ಟುದುದೆಲ್ಲವೂ ಮಹಾಫಲಪ್ರದವಾಗುವುದು. ಅಲ್ಲಿ ಸರ್ವ ಮನುಜ ರಿಂದಲೂ ಮತಂಗನ ಪದವು ಕಾಣಲ್ಪಡುವುದು. ಲೋಕದ ಧರ್ಮ ಸರ್ವಸ್ವವೂ ಅಲ್ಲಿ ನಿದರ್ಶನದಿಂದ ಖ್ಯಾಪಿತವಾಗಿದೆ. ಅಲ್ಲಿನ ಪುಣ್ಯಕರವಾದ ಪಂಕಜವನವು ಪುಣ್ಯಾತ್ಮರಿಂದ ವಿಶೇಷವಾಗಿ ಸೇವಿಸಲ್ಪಡುತ್ತಿರುವುದು. ಅಲ್ಲಿರುವ ತೀರ್ಥದಲ್ಲಿ ಸರ್ವ ನಿದರ್ಶನವಾಗಿ ಪಾಂಡು ಪ್ರವೇಶವಾಗುವುದನ್ನು ಕಾಣಬಹುದು. ಹಾಗೆಯೇ ಮೂರನೆಯ ಪಾದದಲ್ಲಿ, "ನಿಃಕ್ಷೀರಾಮಂಡಲ"ದಲ್ಲಿ ಮತ್ತು "ಕೌಶಿಕೀ ಮಹಾ ಹ್ರದ"ದಲ್ಲಿ ಪಿತೃಗಳಿಗಾಗಿ ಕೊಟ್ಟ ಶ್ರಾದ್ಧವು ಮಹಾ ಫಲಪ್ರದವಾಗುವುದು.

ಧೀಮಂತನಾದ ಮಹಾದೇವನಿಂದ ಮುಂಡಪೃಷ್ಟದಲ್ಲಿ ಪದವನ್ನಿಟ್ಟು ದುಸ್ತರವಾದ ತಪಸ್ಸು ನೂರಾರು ವರ್ಷಗಳು, ಬಹು ಶತವರ್ಷಗಳು ಆಚರಿಸಲ್ಪಟ್ಟಿತು. ಇಲ್ಲಿ ಮಾನವನು ಅಲ್ಪಕಾಲವಾದರೂ ಧರ್ಮಪರಾಯಣನಾಗಿ ಸತ್ಕರ್ಮದಿಂದ ವಾಸಿಸಿದರೆ, ಹಾವು ಪೊರೆಯನ್ನು ಬಿಡುವಂತೆ ಆಶು (ಶೀಘ್ರವಾಗಿ) ಸರ್ವಪಾಪಗಳಿಂದ ಬಿಡಲ್ಪಡುತ್ತಾನೆ.

ಅಲ್ಲೇ ಮುಂಡಪೃಷ್ಟದ ಉತ್ತರ ದಿಕ್ಕಿನಲ್ಲಿ ಬ್ರಹ್ಮರ್ಷಿಗಣದಿಂದ ಸೇವಿತವಾದ "ಕನಕನಂದ"ವೆಂದು ಪ್ರಸಿದ್ಧವಾದ ತೀರ್ಥವಿದೆ. ಅದರಲ್ಲಿ ಸ್ನಾನ ಮಾಡಿದ ಮಾನವರು ಸ್ವಶರೀರದಿಂದ ಸ್ವರ್ಗಕ್ಕೆ ಹೋಗುತ್ತಾರೆ. ಅಲ್ಲಿ ಆಚರಿಸಿ ಕೊಟ್ಟ ಶ್ರಾದ್ಧವು ಅಕ್ಷಯವಾಗುವುದೆಂದು ಹೇಳಲ್ಪಟ್ಟಿದೆ. ಅಲ್ಲಿರುವ "ನಿಃಕ್ಷೀರಾದಲ್ಲಿ ಮೂರು ದಿನಗಳು ಸ್ನಾನಮಾಡಿ "ಮಾನ ಸಸರಸ್ಸಿ"ನಲ್ಲಿ ಶ್ರಾದ್ಧವನ್ನು ಭಕ್ತಿಯಿಂದ ಆಚರಿಸಬೇಕು. ಉತ್ತರ ಮಾನಸಕ್ಕೆ ಹೋದ ಮಾನವನು ಅನುತ್ತಮ (ಅಸದೃಶ) ಸಿದ್ಧಿಯನ್ನು ಪಡೆಯುವನು. ಯಾವನು

ಅಲ್ಲಿ ಯಥಾಶಕ್ತಿ, ತನಗೆ ಬಲವಿದ್ದಷ್ಟು ಪಿತೃಗಳಿಗೆ ಶ್ರಾದ್ಧಮಾಡಿ ಪಿಂಡವನ್ನು ಹಾಕುತ್ತಾನೆಯೋ ಆ ವ ನು ದಿವ್ಯ ಕಾಮನೆಗಳನ್ನು ಪಡೆಯುವುದಲ್ಲ ಸಂಪೂರ್ಣ ಮೋಕ್ಷೋಪಾಯುವನ್ನೂ ತಿಳಿದು, ಹೊಂದುವನು.

ಅನಂತರ ಬ್ರಹ್ಮಾವಶ್ಯೋಪ ಶೋಭಿತವಾದ "ಬ್ರಹ್ಮಶಿರಕ್ಕೆ" ಹೋ ಬೇಕು. ರಾತ್ರಿ ಕಳೆದು ಹಗಲನ್ನು ಕಾಣುವಂತೆ, ಬ್ರಹ್ಮಲೋಕವನ್ನು ಹೊಂದುವನು. ಅಲ್ಲಿ ಸರಸ್ಸಿನಲ್ಲಿ ಬ್ರಹ್ಮನಿಂದ ಪುಣ್ಯಕರವಾದ ಯೂ ಸ್ತಂಭವು (ಪು) ಕಲ್ಪಿಸಲ್ಪಟ್ಟಿದೆ. ಆ ಯೂಪಕ್ಕೆ ಪ್ರದಕ್ಷಿಣೆ ಮಾಡುವು ರಿಂದ ಮನುಜನು "ವಾಜಪೇಯ" ಯಾಗಮಾಡಿದ ಫಲವನ್ನು ಪಡೆಯು ವನು.

ಅನಂತರ ಲೋಕವಿಶ್ರುತವಾದ ಧೇನುಕ ಕ್ಷೇತ್ರಕ್ಕೆ ಹೋಗಬೇಕು ಅಲ್ಲಿ ಒಂದು ರಾತ್ರಿ ವಾಸಮಾಡಿ "ತಿಲಧೇನುವನ್ನು" ದಾನ ಕೊಟ್ಟವನು ಸರ್ವಪಾಪಗಳಿಂದ ವಿಮುಕ್ತನಾಗಿ, ತಕ್ಷಣ ತಪ್ಪದೆ ಸೋಮಲೋಕಕ್ಕೆ ಹೋಗುತ್ತಾನೆ. ಅಲ್ಲಿ ಈಗಲೂ ಸಹ ಪರ್ವತದಲ್ಲಿ ತನ್ನ ಕರುವಿನಿಂದ ಕೂ ಕಪಿಲೆ (ಗೋವು) ಸಂಚರಿಸುವ ಆಶ್ಚರ್ಯಕರವಾದ ಮಹದದ್ಭುತ ಚಿಹ್ನೆಯನ್ನು ಕಾಣಬಹುದು. ಆ ಕಪಿಲಾ ಗೋ ಮತ್ತು ವತ್ಸದ ಪದ ಚಿನ್ಹೆಗಳು, (ಹೆಜ್ಜೆಗಳು ಅಲ್ಲಿ ಕಾಣಲ್ಪಡುವುದು. ಅಂಥಾ ಪ್ರಹೃಷ್ಟ ಪದಗಳಲ್ಲಿ ಪುರುಷ ಪುಂಗವ ಯತ್ಕಿಂಚಿತ್ ಏನಾದರೂ ಅಶುಭ (ಪಾಪ) ಕರ್ಮ ಶೇಷವಿದ್ದರೂ ಅವೆಲ್ಲವ ಆ ಪದ ಚಿಹ್ನೆಯು ಕ್ಷಣಮಾತ್ರದಲ್ಲಿ ನಾಶಗೊಳಿಸಿ ಅನಿಷ್ಟಗಳನ್ನು ಪರಿಹರಿಸು ವುದು.

ಅನಂತರ ಅಲ್ಲಿಂದ ಧೀಮಂತನಾದವನು ದೇವನ ಸ್ಥಾನವಾದ ಗೃಧ್ರ ವಟಕ್ಕೆ ಹೋಗಬೇಕು. ಅಲ್ಲಿ ಭಸ್ಮಸ್ನಾನಮಾಡಿ ಮಹಾದೇವನ ವೃ ಧ್ವಜನ ದರ್ಶನ, ನಮಸ್ಕಾರಗಳ ಸೇವೆ ಮಾಡುವುದರಿಂದ ಹನ್ನೆರಡು ವ ಬ್ರಾಹ್ಮಣರಿಗೆ ಭೋಜನ ಸೇವಾದಿಗಳು ಮಾಡಿಸಿದ ವ್ರತಫಲವು ದೊರೆಯು ವುದು, ಇತರ ವರ್ಣದವರಿಗೆ ಸರ್ವ ಪಾಪಗಳೂ ನಾಶವಾಗುವುವು.

ಅಲ್ಲಿಂದ ಗೀತಧ್ವನಿಯಿಂದ ಕೂಡಿದ ಉದ್ಯಂತ ಪರ್ವತಕ್ಕೆ ಹೋಗಬೇಕು. ಅಲ್ಲಿ ವೇದಮಾತಾ, ಸಾವಿತ್ರಿ (ಗಾಯಿತ್ರಿ) ಯ ಮ ಶ್ವರ ಪುಣ್ಯಪ್ರದವಾದ ಪದವು ಕಾಣಲ್ಪಡುತ್ತದೆ, ಅಲ್ಲಿ ಬ್ರಾಹ್ಮಣ ಶು

ನಾಗಿ, ಶಂಸಿತ ವ್ರತನಾಗಿ, ಸಂಧ್ಯಾವಂದನೆಯನ್ನು ಉಪಾಸನೆ ಮಾಡಬೇಕು. ಅಂಥವನಿಂದ ಹನ್ನೆರಡು ವರ್ಷ ಸಂಧ್ಯೋಪಾಸನೆ ಮಾಡಿದ ಪುಣ್ಯಫಲವು ಸಂಧ್ಯಾ ದೇವತಾನುಗ್ರಹದಿಂದ ಹೊಂದಲ್ಪಡುವುದು, ಅಲ್ಲೇ ಯೋನಿದ್ವಾರ ವೆಂದಿರುವುದು, ಅಲ್ಲಿ ಪ್ರವೇಶಿಸಿದ ಪುರುಷನು ಯೋನಿ ಸಂಕಟದಿಂದ ಮುಕ್ತ ನಾಗುತ್ತಾನೆ. ಯಾವ ಮನುಜನು ಗಯಾ ಕ್ಷೇತ್ರದಲ್ಲಿ ಶುಕ್ಲ ಮತ್ತು ಕೃಷ್ಣ ಪಕ್ಷಗಳೆರಡರಲ್ಲೂ (ಒಂದು ತಿಂಗಳು) ವಾಸಿಸುತ್ತಾನೆಯೋ ಅಂಥ ಪುರುಷನು ಏಳು ಕುಲಗಳನ್ನು ಉದ್ಧರಿಸಿ, ಪುನೀತರನ್ನು ಮಾಡುತ್ತಾನೆಂಬ ವಿಷಯದಲ್ಲಿ ಸಂಶಯವಿಲ್ಲ.

ಅನಂತರ ಮಹಾಫಲಪ್ರದವಾದ ಧರ್ಮ ಪೃಷ್ಠಕ್ಕೆ ಹೋಗಬೇಕು. ಅಲ್ಲಿ ಪಿತೃಲೋಕ ಪಾಲಕನಾದ ಧರ್ಮನು ಸಾಕ್ಷಾತ್ತಾಗಿ ಸ್ಥಿತನಾಗಿರುವನು. ಅಲ್ಲಿ ನಮಸ್ಕರಿಸಿ ಸೇವಾ, ದರ್ಶನ, ಪೂಜಾದಿಗಳನ್ನು ಮಾಡಿದವನು ವಾಜ ಪೇಯ, ಯಜ್ಞ ಫಲವನ್ನು ಪಡೆಯುವನು.

ಅಲ್ಲಿಂದ ಮನುಜನು ಅಸದೃಶವೂ ಶ್ರೇಷ್ಠವೂ ಆದ "ಬ್ರಹ್ಮತೀರ್ಥಕ್ಕೆ" ಹೋಗಬೇಕು. ಅಲ್ಲಿರುವ ಬ್ರಹ್ಮನ ಅಭಿಗಮನ ಸೇವಾದಿಗಳಿಂದ ರಾಜ ಸೂಯ ಯಾಗದ ಫಲವನ್ನು ಪಡೆಯುತ್ತಾನೆ.

"ಫಲ್ಗುತೀರ್ಥ"ವೆಂದು ವಿಖ್ಯಾತವಾದ ಬಹು ಮೂಲ ಫಲಗಳಿಂದ ಕೂಡಿದ ಸ್ಥಾನವಿದೆ. ಅಲ್ಲಿ ಕೌಶಿಕೀ ನದಿಯು ಇರುವುದು. ಪಿತೃಶ್ರಾದ್ಧ ವನ್ನು "ಫಲ್ಗುತೀರ್ಥ ಶ್ರಾದ್ಧವನ್ನು" ಆಚರಿಸುವುದು ಅಕ್ಷಯ ಫಲಪ್ರದ ವೆಂದು ಸ್ಮೃತವಾಗಿದೆ.

ಅನಂತರ ಅಲ್ಲಿಂದ ರಾಜರ್ಷಿಯಾದ ಧರ್ಮಜ್ಞನಿಂದ ಅಭಿರಕ್ಷಿತವಾದ, ಪುಣ್ಯಮಾಡಿದ "ಗಯ"ನಿಂದ ಅನುಪಮ ಭೋಗಪಡುವ ಮಹೀಧರಕ್ಕೆ ಹೋಗಬೇಕು. ಅಲ್ಲೇ ಗಯಾ ಶಿರಸರಸ್ಸಿರುವುದು. ಪುಣ್ಯಕರ ಮಹಾ ನದಿಯು ಪ್ರವಹಿಸುತ್ತಿರುವುದು. ಋಷಿಗಳಿಂದ ಸೇವಿತವಾದ ಬ್ರಹ್ಮಸರೋ ವರವೆಂಬ ಮಹಾ ಪುಣ್ಯಕರವಾದ ತೀರ್ಥವಿರುವುದು.

ಯಾವ ಸ್ಥಳದಲ್ಲಿ ಸನಾತನನಾದ ಧರ್ಮರಾಜನು ಸತತ ವಾಸಿಸು ತ್ತಾನೆಯೋ, ಸರ್ವಸರಿತ್ (ನದಿ)ಗಳೂ ಎಲ್ಲಿ ಸಮುದ್ಭವಗಳಾಗಿ ಕಾಣಿಸು ತ್ತವೆಯೋ ಯಾವ ಸ್ಥಳದಲ್ಲಿ ಪಿನಾಕಿಧಾರಿಯಾದ ಮಹಾದೇವನು ನಿತ್ಯದಲ್ಲೂ

ಸನ್ನಿಹಿತನಾಗಿದಾನೆಯೋ, ಯಾವ ಸ್ಥಳದಲ್ಲಿ ಲೋಕವಿಶ್ರುತವಾದ ಅಕ್ಷ
(ನಾಶರಹಿತ)ವಾದ ವಟವೃಕ್ಷವು ಪ್ರಸಿದ್ಧವಾಗಿ ಇರುವುದೋ, ಅಂ
ಸ್ಥಳಕ್ಕೆ ಪೂಜ್ಯರಾದ ಅಗಸ್ತ್ಯ ಋಷಿಯು ವೈವಸ್ವತನನ್ನು ಕುರಿತುಹೋ
ವಾಸಿಸುತ್ತಿರುವರು.

ಅಲ್ಲಿ ಪೂರ್ವದಲ್ಲಿ ಗಯನೆಂಬ ಯಜಮಾನನಿಂದ ಕ್ರು
ವೆನಿಸಿದ ಯಾಗವು, ಇಷ್ಟಿಯು ಮಾಡಲ್ಪಟ್ಟಿತು. ಅಲ್ಲಿರುವ ಸರಿ
ಶ್ರೇಷ್ಠವೆನಿಸಿದ ಉತ್ಕೃಷ್ಟವಾದ ನದಿಯು, ಗಯಾ ಯಜ್ಞದಲ್ಲಿ ರಕ್ಷಿ
ಲ್ಪಟ್ಟಿತು. ಮುಂಡಪೃಷ್ಟವನ್ನೂ ಗಯಾವನ್ನೂ ದೇವಪರ್ವತವೆನಿಸಿ
ರೈವತವನ್ನೂ ಮೂರನೆಯ "ಕ್ರೌಂಚಪಾದ"ವನ್ನು ದರ್ಶನಮಾಡಿ ನೋ
ದವನು ಸರ್ವಪಾಪಗಳಿಂದ ಮುಕ್ತನಾಗುತ್ತಾನೆ. ಶಿವನದಿಯಲ್ಲಿ ಶಿ
(ಮಂಗಳ)ಕರನಾದ ಶಿವನನ್ನೂ ಗಯಾದಲ್ಲಿ ಗದಾಧರನನ್ನೂ, ಸರ್ವ
ಪರಮಾತ್ಮನನ್ನೂ ದರ್ಶನಮಾಡಿ ಪಾಪಸಮೂಹದಿಂದ ಮುಕ್ತನಾಗುತ್ತಾನೆ

ವಾರಾಣಸಿಯಲ್ಲಿ "ವಿಶಾಲಾಕ್ಷಿಯೂ," ಪ್ರಯಾಗದಲ್ಲಿ "ಅಲಿ
ದೇವಿ"ಯೂ ಗಯಾದಲ್ಲಿ "ಮಂಗಳನಾಮಕಳೂ" ಹಾಗೆಯೇ ಕೃತಶೌ
ದಲ್ಲಿ ಸೈಂಹಿಕೆಯೂ ವಿರಾಜಮಾನರಾಗಿ ಸ್ಥಿತರಾಗಿರುವರು.

ಗಯಾ ಕ್ಷೇತ್ರದಲ್ಲಿ ಪಿತೃಗಳ ಉದ್ದೇಶದಿಂದ ಏನೊಂದು ದಾನಕೊಟ್ಟರೂ
ಅದು ಅನಂತವಾಗಿ, ಪಿತೃಗಳಿಂದ ಭುಂಜಿಸಲ್ಪಡುತ್ತದೆ, ಯಾರ ಪುತ್ರ
ಗಯಾಕ್ಕೆ ಹೋಗಿ, ಅಲ್ಲಿ ನಿಂತು, ಪಿತೃಗಳಿಗೆ ಪಿಂಡ, ಅನ್ನದಾನ ಮೊದಲಾದ
ವನ್ನು ಕೊಡುವುದರಿಂದ ಅಂಥವರ ಪಿತೃಗಳು, ಮಗನ ಪ್ರಕೃಷ್ಟ ಕರ್ಮದಿಂ
ವಿಶೇಷ ಆನಂದದಿಂದ ನರ್ತನ ಮಾಡುತ್ತಾರೆ.

ಇತಿಶಂ

ಪುಣ್ಯಕರವಾದ ಪ್ರೇತಶಿಲಾ ಮಾಹಾತ್ಮ್ಯವು

ಪ್ರೇತ ಶಿಲಾದಲ್ಲಿ ಪಿಂಡಪ್ರದಾನ ಮಾಡುವುದರಿಂದ ಪಿತೃಗಳೆಲ್ಲರೂ
ಉದ್ಧೃತರಾಗುತ್ತಾರೆ. ಪ್ರಭಾಸನಿಂದ ಶಿಲಾ ಪಾದವು ಆಚ್ಛಾದಿತವಾದುದು
ಅತ್ರಿ ಋಷಿಗಳಿಂದ ಮತ್ತು ಇತರ ಮುನಿಗಳಿಂದ ಸ್ತುತ್ಯನಾಗಿ ಸಂತುಷ್ಟ

ನಾದ ಪ್ರಭಾಸನು ಶಿಲಾಂಗುಷ್ಟದ ದೆಶೆಯಿಂದ ವಿನಿರ್ಗತನಾಗಿ ಬಂದನು. ಅಂಗುಷ್ಟ ಸ್ಥಿತನಾದ ಈಶನೂ "ಪ್ರಭಾಸೇಶ"ನೆಂದು ಪ್ರಕೀರ್ತನಾಗಿದ್ದಾನೆ. ಶಿಲಾಂಗುಷ್ಟದ ಏಕದೇಶವಾವುದಿದೆಯೋ ಅದೇ "ಪ್ರೇತಶಿಲೆ"ಯೆಂದು ಸ್ಥಿತ ವಾಗಿದೆ. ಇಲ್ಲಿ ಪಿಂಡದಾನ ಮಾಡುವುದರಿಂದ ನರನು ಪ್ರೇತತ್ವದ ದೆಶೆಯಿಂದ ಮುಕ್ತನಾಗುತ್ತಾನಾದುದರಿಂದಲೇ ಅದಕ್ಕೆ ಆ ನಾಮವು ಬಂದಿದೆ. ಪಭಾ ಸಾತ್ರಿ ಮಹಾ ನದಿಗಳ ಸಂಗಮದಲ್ಲಿ ಸ್ನಾನ ಮಾಡುವ ನರನು ಪಾಪರಹಿತ ನಾಗುವನು.

ಸ್ವಯಂ ವಾಮದೇವನೇ ತೀರ್ಥರೂಪನಾಗಿರುವುದರಿಂದ "ವಾಮ ತೀರ್ಥ"ವೆನಿಸಿರುವುದು.

ಶ್ರೀರಾಮನು ಪ್ರಾರ್ಥಿತನಾಗಿ ಮಹಾನದಿಯಲ್ಲಿ ಸ್ನಾನ ಮಾಡಿದಾಗ, ಸರ್ವಲೋಕಗಳಲ್ಲೂ ಪರಮ ಪಾವನವಾದ ಸರ್ವತೀರ್ಥೋತ್ತಮವಾದ "ರಾಮತೀರ್ಥ"ವು ಅಲ್ಲಿ ಉಂಟಾಯಿತು. ಈ ರಾಮತೀರ್ಥದಲ್ಲಿ ಸ್ನಾನ ಮಾಡುವುದರಿಂದ ಮಾನವನು ಸಹಸ್ರಾರು ಜನ್ಮಗಳಲ್ಲಿ ಮಾಡಿದ ಪಾತಕ ಗಳಿಂದ ಮುಕ್ತನಾಗುತ್ತಾನೆ.

"ರಾಮ ರಾಮ ಮಹಾಬಾಹೋ ದೇವಾನಾಮಭಯಂಕರ
ತ್ವಾಂ ನಮಸ್ಯೇ ತು ದೇವೇಶ ಮಮ ನಶ್ಯತು ಪಾತಕಂ"

"ಮಹಾ ಪರಾಕ್ರಮಶಾಲಿಯಾದ ದೇವತೆಗಳಿಗೆ ಭಯ ಪರಿಹಾರಮಾಡಿ ಅಭಯ ಪ್ರದಾನಮಾಡಿದ ಹೇ ರಾಮ, ಶ್ರೀರಾಮ, ದೇವೇಶ, ನಿನಗೆ ನಮಸ್ಕರಿ ಸುತ್ತೇನೆ. ನನ್ನ ಪಾತಕಗಳೆಲ್ಲವೂ ನಾಶವಾಗಲಿ." ಎಂಬ ಅರ್ಥವುಳ್ಳ ಈ ಶ್ಲೋಕ ವನ್ನು ಉಚ್ಚರಿಸಿ, ರಾಮತೀರ್ಥದಲ್ಲಿ ಸ್ನಾನಮಾಡಿ, ಶ್ರಾದ್ಧಮಾಡಿ ಪಿಂಡ ಪ್ರದಾನಮಾಡಿದ ಮಾನವನು ವಿಷ್ಣುಲೋಕದಲ್ಲಿ ಪೂಜಿತನಾಗುತ್ತಾನೆ. ಅಲ್ಲಿ ನಮಸ್ಕರಿಸಿ, ನಂತರ ಪ್ರಭಾಶೇಶನಾದ ಶಿವನ ಸಮೀಪಕ್ಕೆ ಹೋಗಿ ಶಂಭು ವಿಗೆ ಭಕ್ತಿಯಿಂದ ನಮಸ್ಕರಿಸಿ.

ಆಪಸ್ತ್ವಮಸಿ ದೇವೇಶ ಜ್ಯೋತಿಷಾಂ ಪತಿರೇವ ಚ ||
ಪಾಪಂ ನಾಶಯ ಮೇ ಶೀಘ್ರಂ ಮನೋವಾಕ್ಕಾಯಕರ್ಮಜಂ ||

"ಎಲೈ ದೇವೇಶನೇ, ನೀನು ಆಪಃ (ನೀರಿನ) ರೂಪದಲ್ಲಿರುವಿ, ಜ್ಯೋತಿಸ್ಸುಗಳಿಗೂ ಪತಿಯಾಗಿರುವಿ, ನನ್ನ ಮನೋವಾಕ್ಕಾಯ, ಕರ್ಮ

ಗಳಿಂದ ಕೃತಗಳಾದ ಪಾಪಗಳನ್ನು ಶೀಘ್ರವಾಗಿ ನಾಶಮಾಡಿ ತ್ರಿಕರಣ ಶು
ನನ್ನಾಗಿ ಮಾಡು" ಎಂದು ಪ್ರಾರ್ಥಿಸಬೇಕು.

ಶಿಲೆಯಜಘನ ಪ್ರದೇಶವು ಯಮನಿಂದ ಸಮಾಕ್ರಾಂತವಾಗಿದೆ. ಧ
ರಾಜನಿಂದ ಅದ್ರಿಯು "ನಗಚ್ಛ" "ಹೋಗಬೇಡ," ಎಂದು ಹೇಳಿಸಿಕೊ
ಲ್ಪಟ್ಟುದಿದರಿಂದ ನಗಃ ಎಂದು ಸ್ಮೃತವಾಯಿತು. ಇಲ್ಲಿ ಯಮ
ಧರ್ಮರಾಜರಿಬ್ಬರೂ ಚಲಿಸದೆ ಇಲ್ಲಿಯೇ ನಿಶ್ಚಲರಾಗಿ ಸಂಸ್ಥಿತರಾಗಿರುವ
ಅವರಿಬ್ಬರಿಗೂ ಬಲಿಪ್ರದಾನ ಮಾಡದಿದ್ದರೆ ಗಯಾ ಶ್ರಾದ್ಧವು ಅಪಾರ್ಥ
(ವ್ಯರ್ಥ) ವಾಗುವುದು.

ಶ್ವಾನೌ ದ್ವೌ ಶಾಮಶಬಲೌ ವೈವಸ್ವತಕುಲೋದ್ಭವಾ ||
ತಾಭ್ಯಾಂ ಪಿಂಡಂ ಪ್ರದಾಸ್ಯಾಮಿ ಸ್ಯಾತಾಮೇತಾವಹಿಂಸಕೌ ||

"ವೈವಸ್ವತ(ಯಮನ)ಕುಲದಲ್ಲಿ, ಕರಿ ಮತ್ತು ಶಬಲ (ಕೆಂಪು) ವರ್ಣ
ನಾಯಿಗಳೆರಡು ಉತ್ಪನ್ನವಾಗಿವೆ. ಅವುಗಳಿಗೆ ಪಿಂಡವನ್ನು ಕೊಡುತ್ತೇ
ನಮಗೆ ಹಿಂಸೆ ಮಾಡದಂತಿರಲಿ" ಎಂಬು ಉಚ್ಚರಿಸಿ, ಬಲಿಪ್ರದಾನ ಮಾ
ಬೇಕು. ತೀರ್ಥದಲ್ಲೂ ಪ್ರೇತಶಿಲಾದಿಗಳಲ್ಲೂ ಚರು ಮತ್ತು ತುಪ್ಪದಿ
ಸಹಿತವಾಗಿ ಪಿತೃಗಳನ್ನು ಮಂತ್ರಗಳಿಂದ ಆವಾಹನೆ ಮಾಡಿ ಅವರಿಗೆ ಪಿಂ
ವನ್ನು ಹಾಕಬೇಕು. ಪಿತೃಗಳನ್ನು ಧ್ಯಾನಮಾಡಿ, ಪಿತೃಗಳಿಗೆ ಪ್ರಯ
ಪೂರ್ವಕವಾಗಿ "ಪ್ರೇತಪರ್ವತ"ದಲ್ಲಿ ಶಾಂತಮನಸ್ಕನಾಗಿ ಪ್ರಾಚೀನಾವೀ
ಯಾಗಿ ಎಂದರೆ ಜನಿವಾರವನ್ನು ಎಡಕ್ಕೆ ಹಾಕಿಕೊಂಡು ದಕ್ಷಿಣಾಭಿಮುಖವಾ
ಮಂಡಿಯೂರಿ ಕುಳಿತು ಈ ಮಂತ್ರಗಳನ್ನು ಹೇಳಿ ಪಿಂಡಪ್ರದಾನ ಮಾ
ಬೇಕು.

ಕವ್ಯವಾಲೋಽನಲಃ ಸೋಮೋ ಯಮಶ್ಚೈವಾರ್ಯಮಾ ತಥಾ
ಅಗ್ನಿಷ್ವಾತ್ತಾ ಬರ್ಹಿಷದಃ ಸೋಮಪಾಃ ಪಿತೃದೇವತಾಃ ||
ಆಗಚ್ಛಂತು ಮಹಾಭಾಗಾ ಯುಷ್ಮಾಭೀರಕ್ಷಿತಾಸ್ತ್ವಿಹ |
ಮದೀಯಾಃ ಪಿತರೋ ಯೇ ಚ ಕುಲೇಜಾತಾಃ ಸನಾಭಯಃ
ತೇಷಾಂ ಪಿಂಡಪ್ರದಾನಾರ್ಥಮಾಗತೋಽಸ್ಮಿ ಗಯಾಮಿಮಾಂ ||
ತೇ ಸರ್ವೇ ತೃಪ್ತಿಮಾಯಾಂತು ಶ್ರಾದ್ಧೇನಾನೇನ ಶಾಶ್ವತೀಂ ||

"ಕವ್ಯವಾಲ, ಅಗ್ನಿ-ಸೋಮ ಮತ್ತು ಯಮ, ಅರ್ಯಮಾ, ಅಗ್ನಿಷ್ವಾತ್ತಾ, ಬರ್ಹಿಷದ, ಸೋಮಪರು ಎಂದು ಪ್ರಸಿದ್ಧರಾದ ದೇವತೆಗಳಿರಾ, ತಾವು ದಯ ಮಾಡಿ ಬನ್ನಿ. ನನ್ನಿಂದ "ನಮ್ಮ ಕುಲದಲ್ಲಿ ಉತ್ಪನ್ನರಾದ ಯಾವ ಪಿತೃಗಳಿದ್ದಾರೆಯೋ ಅವರಿಗೆ ಇಲ್ಲಿ (ಈ ಗಯಾ ಕ್ಷೇತ್ರಕ್ಕೆ) ಶ್ರಾದ್ಧಮಾಡಿ ಪಿಂಡಪ್ರದಾನ ಮಾಡಲು ನಾನು ಬಂದಿರುವೆನು. ಮಹಾ ಭಾಗರೂ, ಪೂಜ್ಯರೂ ಆದ ತಮ್ಮಿಂದ ರಕ್ಷಿತರಾಗಿ, ನಮ್ಮ ಪಿತೃಗಳೆಲ್ಲರೂ ನಿಮ್ಮ ಮೂಲಕ ಈ ನಾನು ಆಚರಿಸುತ್ತಿರುವ ಶ್ರಾದ್ಧ ಕರ್ಮದಿಂದ ತೃಪ್ತರಾಗಿ ಶಾಶ್ವತ (ಲೋಕ ಗಳಲ್ಲಿ) ಸುಖವನ್ನು ಪಡೆಯಲಿ." ಎಂದು ಪ್ರಾರ್ಥಿಸಿ, ಆಚಮನ ಮಾಡಿ, ಪಂಚಾಂಗವನ್ನು ಹೇಳಿ, ಯತ್ನತಃ ಪ್ರಾಣಾಯಾಮ ಮಾಡಿ ಮನಸ್ಸನ್ನು ನಿಯಮಿಸಿ ಸ್ವಾಧೀನದಲ್ಲಿಟ್ಟು ಭಕ್ತಿಯಿಂದ "ಪುನರಾವೃತ್ತಿ ರಹಿತ ಬ್ರಹ್ಮ ಲೋಕಾಪ್ತಿ ಹೇತವೇ" ಪುನಃ ಸಂಸಾರಕ್ಕೆ ಹಿಂತಿರುಗಿ ಬಾರದಿರುವ ಶಾಶ್ವತ ಬ್ರಹ್ಮಲೋಕವನ್ನು ಪಡೆಯಲು ಎಂದು ಸಂಕಲ್ಪಮಾಡಿ ವಿಧ್ಯುಕ್ತಪ್ರಕಾರ ವಾಗಿ, ಎಂದರೆ ಪಿತೃಗಳನ್ನು ಆವಾಹನೆ ಮಾಡಿ ಅಭ್ಯರ್ಚನೆ (ಪೂಜೆ) ಮಾಡಿ, ಮಂತ್ರಪೂರ್ವಕವಾಗಿ ಪಿಂಡಪ್ರದಾನ ಮಾಡಬೇಕು. ಆ ಸ್ಥಾನವನ್ನು ಪೂರ್ವ ದಲ್ಲಿ ಪ್ರಜ್ವಲಿಸಿ, ಪಂಚಗವ್ಯಗಳಿಂದ ಪ್ರಥುಕ್ ಪ್ರಥುಕ್ ಪ್ರತ್ಯೇಕವಾಗಿ ಪ್ರೋಕ್ಷಿಸಿ ಶುದ್ಧಿಮಾಡಿ ಸಪಿಂಡರಿಗೆ ಶ್ರಾದ್ಧದಲ್ಲಿ ಪಿಂಡವನ್ನು ಕೊಟ್ಟು, ಕುಶ (ದರ್ಭೆ) ಗಳಿಂದ ಆಸ್ತರಣಮಾಡಿ (ಹರಡಿ) ಅವುಗಳಲ್ಲಿ ಸಕೃತ್ ತಿಲೋದಕ ವನ್ನು ಕೊಟ್ಟು, ಅಂಜಲಿಯಿಂದ ತೆಗೆದುಕೊಂಡು ಪಿತೃತೀರ್ಥದಿಂದ, ಯತ್ನತಃ ಮುಷ್ಟಿ ಮಾತ್ರ ಸಕ್ತುವಿನಿಂದ ಅಕ್ಷಯ್ಯ ಪಿಂಡವನ್ನು ಕೊಡಬೇಕು. ತಿಲ, ತುಪ್ಪ, ಮೊಸರು, ಮಧು ಮೊದಲಾದವು ಎಂದರೆ ತೀರ್ಥ, ತುಳಸಿ, ದರ್ಭೆದ ಚೂರುಗಳು ಬಾಳೆಹಣ್ಣು ಇತ್ಯಾದಿಗಳನ್ನು ಪಿಂಡದ್ರವ್ಯದಲ್ಲಿ ಸೇರಿಸಿ ಸಂಯೋ ಜನೆಮಾಡಬೇಕು. ಸಂಬಂಧಿಗಳು ಅನುಬಂಧಿ ಪಿತೃಗಳನ್ನು ತಿಲಾದಿಗಳಿಂದ ಕುಶ (ದರ್ಭೆ) ಗಳಲ್ಲಿ ಆವಾಹನೆ ಮಾಡಿ. ಇವರಲ್ಲಿ ಸ್ತ್ರೀಯರನ್ನು ಸ್ತ್ರೀಲಿಂಗ ವಿಭಕ್ತ್ಯಂತಗಳಿಂದ ಉಚ್ಚರಿಸಿ, ಯಥಾಕ್ರಮವಾಗಿ ಪೂರ್ವದಂತೆ ಪಿತೃಗಳನ್ನು ಆವಾಹಿಸಿ ಕರೆದು, ಪಿಂಡಗಳನ್ನು ಕೊಡಬೇಕು. ಸ್ವಗೋತ್ರದವರಿಗೆ ವಿಗೋತ್ರ (ಅನ್ಯಗೋತ್ರ) ದವರಿಗೆ ಬೇರೆ ಬೇರೆ ಏಕತ್ರ ಒಂದಕ್ಕೊಂದು ಸೇರಿ ಸಂಪರ್ಕ ವಾಗದಂತೆ, ಪ್ರತ್ಯೇಕ ಪ್ರತ್ಯೇಕವಾಗಿಯೂ ದಂಪತಿಗಳಿಗೆ ಏಕತ್ರದಲ್ಲಿಯೂ

ಪಿಂಡವನ್ನು ಹಾಕಬೇಕು. ಪ್ರತ್ಯೇಕ ಮಾಡದೆ, ಸೇರಿಸಿಬಿಟ್ಟರೆ, ಶ್ರಾದ್ಧ ಪಿಂಡವೂ, ಉದಕ ತರ್ಪಣಗಳೂ ನಿಷ್ಫಲವಾಗುವುದು. ಅನಂತರ ಪಿ ಪಾತ್ರೆಯಲ್ಲಿ ಎಳ್ಳನ್ನು ಹಾಕಿ, ಅದನ್ನು ಶುಭೋದಕ (ಶುದ್ಧವಾದ ನೀರಿನಿಂ ಪೂರ್ಣಮಾಡಿ, ತುಂಬಬೇಕು. ಈ ಮಂತ್ರೋಚ್ಚಾರಣೆಯಿಂದ ಆ ಪಿ ಗಳನ್ನು ಪ್ರದಕ್ಷಿಣಕರನಾಗಿ ಯಥಾ ಕ್ರಮದಂತೆ, ಮೂರುಸಲ (ಮೂರಾವೃ ಪರಿಷೇಚನ ವಿಧಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಕ್ಷಮಾಪಣೆ ಬೇ ಬೇಕು. ಪಿತೃಗಳನ್ನು ವಿಸರ್ಜನೆ ಮಾಡಿ ಆಚಮನಮಾಡಿ, ದೇವತೆಗಳನ್ನು ಸಾಕ್ಷಿಗಳಾಗಿ ಮಂತ್ರೋಚಾರಣೆಯಿಂದ ಶ್ರವಣಮಾಡಿಸಿ ಪ್ರಾರ್ಥಿಸಬೇಕು ಈ ರೀತಿಯಾಗಿ ಗಯಾದಲ್ಲಿ ಸರ್ವಸ್ಥಳಗಳಲ್ಲೂ ಪಿಂಡದಾನವನ್ನು ಮಾ ತಕ್ಕದ್ದು.

ಗಯಾ ಶ್ರಾದ್ಧಕ್ಕೆ ಕಾಲನಿಯಮವಿಲ್ಲವು. ಅಲ್ಲಿ ಸದಾ ಪರ್ವಕಾಲ ಆಗಿರುವುದು. ಗಯಾದಲ್ಲಿ ಪಿಂಡದಾನ ಮಾಡಲು ಕಾಲನಿಯಮವನ್ನು ಯೋಚಿಸಬೇಕಾದುದಿಲ್ಲವು. ಅಧಿಕಮಾಸದಲ್ಲಿ ಜನ್ಮದಿವಸ, ನಕ್ಷತ್ರಗಳಲ್ಲಿ ಗುರು (ಮೂಢ) ಶುಕ್ರ (ಮೂಢ) ಅಸ್ತಗಳಲ್ಲಿ ಬೃಹಸ್ಪತಿಯು ಸಿಂಹ ಯಲ್ಲಿರುವಾಗಲೂ ಗಯಾ ಶ್ರಾದ್ಧವನ್ನು ತ್ಯಜಿಸದೆ ಅವಶ್ಯಕವಾಗಿ ಆಚ ಮಾಡಬೇಕು.

ಭಿಕ್ಷುವು (ಸನ್ಯಾಸಿಯು) ಗಯಾಕ್ಕೆ ಹೋಗಿ ವಿಷ್ಣು ಪಾದಾದಿಗ ದಂಡವನ್ನು ಪ್ರದರ್ಶನ ಮಾಡಬೇಕು. ಪಿಂಡಪ್ರದಾನ ಮಾಡಬಾರದು ವಿಷ್ಣು ಪದದಲ್ಲಿ ದಂಡವನ್ನು ನ್ಯಾಸಮಾಡಿದ್ದ (ಇಡುವುದ) ರಿಂದಲೇ ತಾನು ಪಿತೃಗಳೊಡನೆ ಮುಕ್ತನಾಗುತ್ತಾನೆ.

ಗಯಾದಲ್ಲಿ ಪಾಯಸದಿಂದ, ಸಕ್ತುಪಿಷ್ಟದಿಂ (ಗೋಧಿ ಅಥವ ಹಿಟ್ಟಿನಿಂ)ದ, ಚರುವಿನಿಂದ (ಅನ್ನದಿಂದ) ಲಾಗಲಿ ಪಿಂಡದಾನವು ಉಕ್ತವಾ ವಿಧಿಸಲ್ಪಟ್ಟಿದೆ.

ಮಹಾಪಾಪಿಯಾದರೂ, ಪಾತಕಿಯಾದರೂ, ಗಯಾದರ್ಶನ ಮಾತ್ರ ದಿಂದ ಪೂತ (ಪವಿತ್ರ) ನಾಗುತ್ತಾನೆ. ಕೃತ್ಯಾಧಿಕಾರಿಯಾಗಿ ಶ್ರಾದ್ಧ ಬ್ರಹ್ಮಲೋಕವನ್ನು ಹೊಂದಲು ಭಾಗಿಯಾಗುತ್ತಾನೆ.

ಫಲ್ಗು ತೀರ್ಥದಲ್ಲಿ ಸ್ನಾನ, ಶ್ರಾದ್ಧ, ಪಿಂಡಪ್ರದಾನಾದಿಗಳಿಂದ ಲಭಿಸುವ ಸುಕೃತ ಫಲವು ಸಹಸ್ರಾಶ್ವಮೇಧ ಸಹಸ್ರಗಳನ್ನು ಮಾಡಿದರೂ ಪಡೆಯಲಾರನು, ಅವುಗಳಕಿಂತ ಅಧಿಕ ಪುಣ್ಯಫಲವು ಫಲ್ಗು ತೀರ್ಥಾನುಷ್ಠಾನ ಸೇವೆಯಿಂದ ಹೊಂದುವನು.

ಗಯಾಕ್ಕೆ ಹೋಗಿ ಪಿತೃಗಳಿಗೆ ಅತಿ ಪ್ರಿಯವಾದ ಪಿಂಡಗಳನ್ನು ಅರ್ಪಿಸಬೇಕು. ವಿಳಂಬ ಮಾಡಬಾರದು ವಿಘ್ನವನ್ನು ಮಾಡಬಾರದು, ಆಲಸ್ಯ ಮಾಡದೆ, ಶೀಘ್ರವಾಗಿ ಗಯಾ ಯಾತ್ರಾ ಪಿತೃಕಾರ್ಯ ಮೊದಲಾದವುಗಳನ್ನು ಆಚರಿಸಿ, ಭಗವತ್ಪ್ರೀತಯುಕ್ತ ಪಿತೃ ದೇವತೆಗಳ ಅನುಗ್ರಹವನ್ನು ಸಂಪಾದಿಸಿ, ಕೃತಕೃತ್ಯನಾಗಬೇಕು.

ಪಿತಾ ಪಿತಾಮಹಾಶ್ಚೈವ ತಥೈವ ಪ್ರಪಿತಾಮಹಾಃ
ಮಾತಾ ಪಿತಾಮಹೀ ಚೈವ ತಥೈವ ಪ್ರಪಿತಾಮಹೀ ।
ಮಾತಾಮಹಸ್ತತ್ಪಿತಾ ಚ ಪ್ರಮಾತಾಮಹಕಾದಯಃ
ತೇಷಾಂ ಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತಾಂ ॥

ತನ್ನ ಪಿತೃ, ಪಿತಾಮಹ ಪ್ರಪಿತಾಮಹ, (ತಂದೆ, ತಾತ, ಮುತ್ತಾತ (ತಾತನ ತಂದೆ), ಮಾತೃ, ಪಿತಾಮಹಿ, ಪ್ರಪಿತಾಮಹಿ. (ತಾಯಿ, ಅಜ್ಜಿ, ತಂದೆಯ ತಾಯಿ, ಮುತ್ತಜ್ಜಿ. ಮುತ್ತಾತನ ತಂದೆ (ಎಂದರೆ, ಕರ್ತನ ತಾಯಿ, ಆಕೆಯ ಅತ್ತೆ ಆ ಅತ್ತೆಯ ಅತ್ತೆ), ಮಾತಾಮಹ, ಮಾತೃ ಪಿತಾಮಹ, ಮಾತೃಪ್ರಪಿತಾಮಹ, ತಾಯಿಯ ತಂದೆ, ಆತನ ತಂದೆ, ಅವರ ತಂದೆ, ಅವರ ಪತ್ನಿಯರು ಎಂದರೆ, ಮಾತಾಮಹಿ, ಮಾತೃಪಿತಾಮಹಿ, ಮಾತೃಪ್ರಪಿತಾಮಹಿ ಇವರೇ ಮೊದಲಾದವರಿಗೆ ನನ್ನಿಂದ ಕೊಡಲ್ಪಟ್ಟ ಪಿಂಡವು ಅಕ್ಷಯ (ಫಲಪ್ರದ) ವಾಗಲಿ ಎಂದು ಹೇಳಬೇಕು.

ಅಸ್ಮತ್ಕುಲೇ ಮೃತಾ ಯೇ ಚ ಗತಿರ್ಯೇಷಾಂ ನ ವಿದ್ಯತೇ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ನಮ್ಮ ಕುಲದಲ್ಲಿ ಯಾರು ಉತ್ಪನ್ನರಾಗಿ, ಯಾರಿಗೆ ಗತಿಯಿಲ್ಲವೋ, ಅವರ ಉದ್ಧಾರಕ್ಕಾಗಿ ಉತ್ತಮಗತಿಯಾಗಲು ಈ ಪಿಂಡವನ್ನು ನಾನು ಕೊಡುತ್ತೇನೆ.

ಬಂಧುವರ್ಗಕುಲೇಯೇ ಚ ಗತಿರ್ಯೇಷಾಂ ನ ವಿದ್ಯತೇ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ಬಂಧುವರ್ಗ ಕುಲದಲ್ಲಿ ಯಾರಿಗೆ ಸದ್ಗತಿಯಿಲ್ಲವೋ ಅವರ ಉದ್ಧಾ ಕ್ಕಾಗಿ ನನ್ನಿಂದ ಈ ಪಿಂಡವು ಕೊಡಲ್ಪಟ್ಟಿದೆ.

ಅಜಾತದಂತಾ ಯೇ ಕೇಚಿದ್ಯೇಚ ಗರ್ಭೇ ಪ್ರಪೀಡಿತಾಃ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ಹಲ್ಲು ಹುಟ್ಟದೆ ಮೃತರಾದವರು ಯಾರೋ, ಗರ್ಭದಲ್ಲೇ ಪ್ರಪೀ ರಾಗಿ ಮೃತಪಟ್ಟವರಾರೋ, ಅವರೆಲ್ಲರು ಸದ್ಗತಿಯಿಂದ ಉದ್ಧೃತರಾಗ ನಾನು ಈ ಪಿಂಡವನ್ನು ಕೊಡುತ್ತೇನೆ.

ಅಗ್ನಿದಗ್ಧಾಶ್ಚಯೇಕೇಚಿತ್ ನಾಗ್ನಿದಗ್ಧಾಸ್ತಥಾಪರೇ
ವಿದ್ಯುಚ್ಚೋರಹತಾ ಯೇ ಚ ತೇಭ್ಯಃ ಪಿಂಡಂ ದದಾಮ್ಯಹಂ

ಬೆಂಕಿಯಿಂದ ಸುಟ್ಟು ಸತ್ತವರು ಯಾರೋ, ಅಗ್ನಿದಗ್ಧರಲ್ಲದೆ ಮೃ ದವರು ಬೇರೆಯವರು ಯಾರಿದಾರೆಯೋ, ಸಿಡಿಲುಮಿಂಚಿನಿಂದ ಮತ್ತು ಕಾಕರಿಂದ, ಹೊಡಸಿ, ಬಡಿಸಿಕೊಂಡು ಹತರಾದವರು, ಸತ್ತವರು ಯಾ ಅವರ ಉದ್ಧಾರಕ್ಕಾಗಿ ನಾನು ಈ ಪಿಂಡವನ್ನು (ಹಾಕು) ಕೊಡುತ್ತೇನೆ.

ದಾವದಾಹೇ ಮೃತಾ ಯೇ ಚ ಸಿಹ್ಮವ್ಯಾಘ್ರಹತಾಶ್ಚ ಯೇ
ದಂಷ್ಟ್ರಿಭಿಃ ಶೃಂತಭಿರ್ವಾಪಿ ತೇಭ್ಯಃ ಪಿಂಡಂ ದದಾಮ್ಯಹಂ

ಕಾಡುಕಿಚ್ಚಿನಲ್ಲಿ ಮೃತರಾದವರು, ಸಿಂಹ, ಹುಲಿ ಮೊದಲಾದವುಗಳ ಕಚ್ಚಿ ತಿಂದು ಸತ್ತವರು, ಸರ್ಪ, ವರಾಹ, ಮೊದಲಾದ ಹಲ್ಲುಗಳಿಂದ ಲ್ಪಟ್ಟು ಸತ್ತವರು, ಪ್ರಾಣಿಗಳ ಕೊಂಬುಗಳಿಂದ ಇರಿದು ತಿವಿಸಿಕೊಂಡು ವರಿಗೆಲ್ಲ ಅವರ ಉದ್ಧಾರಕ್ಕಾಗಿ ನಾನು ಈ ಪಿಂಡವನ್ನು ಕೊಡುವೆನು.

ಉದ್ಬಂಧನ ಮೃತಾಯೇ ಚ ವಿಷಶಸ್ತ್ರಹತಾಶ್ಚ ಯೇ
ಆತ್ಮನೋ ಘಾತಿನೋ ಯೇ ಚಾ ತೇಭ್ಯಃ ಪಿಂಡಂ ದದಾಮ್ಯಹಂ

ಯಾರು ನೇಣುಹಾಕಿಕೊಂಡು ಬಂಧನದಿಂದ ಮೃತರಾಗಿದ್ದಾರೆಯೋ ವಿಷಪಾನದಿಂದ, ಶಸ್ತ್ರಗಳಿಂದ ಹತರಾಗಿದ್ದಾರೆಯೋ, ಯಾರು ಆತ್ಮಘಾ ಮಾಡಿಕೊಂಡವರೋ ಅವರಿಗೆ ಪಿಂಡವನ್ನು ಕೊಡುವೆನು.

ಅರಣ್ಯೇ ವರ್ತ್ಮನಿ ವನೇ ಕ್ಷುಧಯಾ ತೃಷಯಾ ಹತಾಃ
ಭೂತಪ್ರೇತ ಪಿಶಾಚೈಶ್ಚ ತೇಭ್ಯಃ ಪಿಂಡಂ ದದಾಮ್ಯಹಂ

ಅರಣ್ಯದಲ್ಲಿ, ಮಾರ್ಗ ಮಧ್ಯದಲ್ಲಿ, ವನದಲ್ಲಿ ಹಸಿವಿನಿಂದ, ಬಾಯಾರಿಕೆಯಿಂದ ಭೂತ, ಪ್ರೇತ ಪಿಶಾಚಿಗಳ ದೆಶೆಯಿಂದ, ಹತರಾದವರಿಗೆ ನಾನು ಈ ಪಿಂಡವನ್ನು ಕೊಡುವೆನು.

ರೌರವೇ ಯೇ ಚ ತಾಮಿಶ್ರೇ ಕಾಲಸೂತ್ರೇ ಚ ಯೇ ಸ್ಥಿತಾಃ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ಯಾರು ರೌರವ ನರಕದಲ್ಲಿ, ತಾಮಿಶ್ರವೆಂಬ ನರಕದಲ್ಲಿ, ಕಾಲಸೂತ್ರವೆಂಬುವ ನರಕ ವಿಶೇಷದಲ್ಲಿ ದುಃಖಪಡುತ್ತಿರುವರೋ, ಅವರ ಉದ್ಧಾರಕ್ಕಾಗಿ ಈ ಪಿಂಡವನ್ನು ನಾನು ಕೊಡುವೆನು.

ಅನೇಕ ಯಾತನಾಸಂಸ್ಥಾಃ ಪ್ರೇತಲೋಕಂ ಚ ಯೇ ಗತಾಃ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ಅನೇಕ ಯಾತನೆಗಳಿಂದ ಕೂಡಿ ಯಾರು ಪ್ರೇತಲೋಕದಲ್ಲಿರುವರೋ, ಅವರ ಉದ್ಧರಣಾರ್ಥವಾಗಿ ಈ ಪಿಂಡವನ್ನು ಕೊಡುವೆನು.

ದುರ್ಗತಿಂ ಸಮನುಪ್ರಾಪ್ಯ ಅಭಿಶಾಪಾದಿನಾ ಹತಾಃ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ದುರ್ಗತಿಯನ್ನು ಹೊಂದಿ, ಶಾಪ ಮೊದಲಾದವುಗಳಿಂದ ಹತರಾದವರ ಉದ್ಧಾರಕ್ಕಾಗಿ, ಈ ಪಿಂಡವನ್ನು ಕೊಡುತ್ತೇನೆ.

ನರಕೇಷು ಸಮಸ್ತೇಷು ಯಮದೂತವಶಂ ಗತಾಃ
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ

ಸಮಸ್ತ ನರಕಗಳಲ್ಲಿ ಯಮದೂತರುಗಳ ವಶರಾದವರ ಉದ್ಧಾರಕ್ಕಾಗಿ, ಈ ಪಿಂಡವನ್ನು ನಾನು ಕೊಡುತ್ತೇನೆ.

ಪಶುಯೋನಿಗತಾ ಯೇ ಚ ಪಕ್ಷೀಕೀಟ ಸರೀಸೃಪಾಃ
ಅಥವಾ ವೃಕ್ಷಯೋನಿಸ್ಥಾಃ ತೇಭ್ಯಃ ಪಿಂಡಂ ದದಾಮ್ಯಹಂ

ಪಶುಯೋನಿಗಳಲ್ಲಿ ಯಾರು ಉತ್ಪನ್ನರಾಗಿರುವರೋ, ಪಕ್ಷಿ, ಕೀಟ ಹುಳು ಹುಪ್ಪಟೆ, ಹಾವು, ಮೊದಲಾದ ನೀಚ ಜಾತಿಗಳಲ್ಲಿ ವೃಕ್ಷ ಯೋನಿಗಳಲ್ಲಿ,

ಗಿಡ್ಡ, ಮರ, ಬಳ್ಳಿ, ವನಸ್ಪತಿ ಔಷಧಿಗಳಲ್ಲಿರುವವರುಗಳಿಗೆ, ಈ ಪಿಂಡವನ್ನು ಕೊಡುತ್ತೇನೆ.

ಜಾತ್ಯಂತರಸಹಸ್ರೇಷು ಯೇ ಭ್ರಮಂತಿ ಸ್ವಕರ್ಮಣಾ
ಮಾನುಷ್ಯಂ ದುರ್ಲಭಂ ಯೇಷಾಂ ತೇಭ್ಯ ಪಿಂಡಂ ದದಾಮ್ಯಹಂ

ಸಹಸ್ರಾರು ಜಾತ್ಯಂತರಗಳಲ್ಲಿ ತಮ್ಮ ದುಷ್ಕರ್ಮದಿಂದ ಯಾರು ಜನ್ಮ ಮರಣಗಳಿಂದ ಸುತ್ತುತ್ತಿರುತ್ತಾರೆಯೋ, ಯಾರಿಗೆ ಮನುಷ್ಯ ಜನ್ಮವನ್ನು ಪಡೆಯುವುದೇ ದುರ್ಲಭವೋ ಅವರಿಗೆ ಈ ಪಿಂಡವನ್ನು ಕೊಡುತ್ತೇನೆ.

ದಿವ್ಯಂತರಿಕ್ಷಭೂಮಿಷ್ಠಾಃ ಪಿತರೋ ಬಾಂಧವಾದಯಃ
ಅಸಂಸ್ಕೃತಾ ಮೃತಾ ಯೇ ಚ ತೇಭ್ಯಃ ಪಿಂಡಂ ದದಾಮ್ಯಹಂ

ಸಂಸ್ಕಾರ ರಹಿತರಾಗಿ ಮೃತರಾಗಿ, ಆಕಾಶದಲ್ಲಿ ಅಂತರಿಕ್ಷದಲ್ಲಿ, ಭೂಮಿಯಲ್ಲಿ ಯಾವ ಪಿತೃಗಳಿರುವರೋ, ಬಂಧುಗಳಿರುವರೋ, ಅವರಿಗೋಸ್ಕರ ಈ ಪಿಂಡವನ್ನು ಕೊಡುತ್ತೇನೆ.

ಯೇ ಕೇಚಿತ್ ಪ್ರೇತರೂಪೇಣ ವರ್ತಂತೇ ಪಿತರೋ ಮಮ
ತೇ ಸರ್ವೇ ತೃಪ್ತಿಮಾಯಾಂತು ಪಿಂಡೇನಾನೇನ ಸರ್ವದಾ

ಯಾರು ಯಾರು ನನ್ನ ಪಿತೃಗಳು ಪ್ರೇತರೂಪದಿಂದ ಇದಾರೆಯೋ ಅವರೆಲ್ಲರೂ ಸರ್ವದಾ ಈ ಪಿಂಡದಿಂದ ತೃಪ್ತಿಯನ್ನು ಹೊಂದಲಿ.

ಯೇ ಬಾಂಧವಾಽಬಾಂಧವಾ ವಾ ಯೇಽನ್ಯಜನ್ಮನಿ ಬಾಂಧವಾ
ತೇಷಾಂ ಪಿಂಡೋ ಮಯಾದತ್ತೋ ಹ್ಯಕ್ಷಯ್ಯ ಮುಪತಿಷ್ಠತಾಂ

ಯಾರು ನನಗೆ ಬಂಧುಗಳೊ, ಯಾರು ಅಬಂಧುಗಳೋ ಬಂಧುಗಳಲ್ಲವೋ, ಅಥವಾ ಬೇರೆ ಜನ್ಮದಲ್ಲಿ, ಜನ್ಮಾಂತರದಲ್ಲಿ ಯಾರು ಬಂಧುಗಳೋ ಅವರಿಗೆ ಈ ಪಿಂಡವು ನನ್ನಿಂದ ಕೊಡಲ್ಪಟ್ಟಿದೆ. ಇದು ಅವರಿಗೆ ಅಕ್ಷಯ್ಯವಾದ ತೃಪ್ತಿಯನ್ನುಂಟುಮಾಡಲಿ.

ಪಿತೃವಂಶೇ ಮೃತಾಯೇ ಚ ಮಾತೃವಂಶೇ ಚ ಯೇ ಮೃತಾಃ
ಗುರುಶ್ವಶುರ ಬಂಧೂನಾಂ ಯೇ ಚಾನ್ಯೇ ಬಾಂಧವಾ ಮೃತಾಃ
ಯೇ ಮೇ ಕುಲೇ ಲುಪ್ತಪಿಂಡಾಃ ಪುತ್ರದಾರವಿವರ್ಜಿತಾಃ
ಕ್ರಿಯಾಲೋಪಗತಾ ಯೇ ಚ ಜಾತ್ಯಂಧಾಃ ಪಂಗವಶ್ಚ ಯೇ
ವಿರೂಪಾ ಆಮಗರ್ಭಾಶ್ಚ ಜ್ಞಾತಾಜ್ಞಾತಾಃ ಕುಲೇ ಮಮ
ತೇಷಾಂ ಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತಾಂ ॥

ತಂದೆಯ ವಂಶದಲ್ಲಿ ಮೃತರಾದವರು ಯಾರೋ, ತಾಯಿಯ ವಂಶದಲ್ಲಿ ಮೃತರಾದವರಾರಿದ್ದಾರೆಯೋ, ಗುರುಗಳು, ಮಾವಂದಿರು, ಬಂಧುಗಳು. ಬಾಂಧವರುಗಳು ಯಾರು ಯಾರು ನಮ್ಮ ಕುಲದಲ್ಲಿ ಪಿಂಡೋದಕಗಳಲ್ಲದೆ, ಮಕ್ಕಳಿಲ್ಲದೆ, ಹೆಂಡಿತಿಯರಿಲ್ಲದೆ, ಕ್ರಿಯಾಲೋಪಗಳುಳ್ಳವರೂ, ಹುಟ್ಟು ಕುರುಡರು, ಕುಂಟರು, ವಿರೂಪರಾದವರೂ, ಆಮಗರ್ಭರು. (ಗರ್ಭದಲ್ಲೇ ಸತ್ತವರು) ಮತ್ತು ಕುಲದಲ್ಲಿ ಜ್ಞಾತರು, ಅಜ್ಞಾತರು, ನಮಗೆ ತಿಳಿಯದಿದ್ದವರು ಯಾರಿದಾರೆಯೋ ಅವರೆಲ್ಲರಿಗೂ ನನ್ನಿಂದ ಕೊಡಲ್ಪಡುವ ಈ ಪಿಂಡವು ಅವರಿಗೆ ಅಕ್ಷಯ್ಯವಾಗಲಿ, ತೃಪ್ತಿಯನ್ನುಂಟುಮಾಡಲಿ.

ಆಬ್ರಹ್ಮಣೋ ಯೇ ಪಿತೃವಂಶಜಾತಾ
ಮಾತುಸ್ತಥಾ ವಂಶಭವಾ ಮದೀಯಾಃ ।
ಕುಲದ್ವಯೇ ಯೇ ಮಮ ಸಂಗತಾಶ್ಚ
ತೇಭ್ಯಃ ಸ್ವಧಾ ಪಿಂಡಮಹಂದದಾಮಿ ॥

ಬ್ರಹ್ಮನನ್ನು ಪ್ರಾರಂಭಿಸಿ ಯಾರು (ನನ್ನ) ಪಿತೃವಂಶದಲ್ಲಿ ಉತ್ಪನ್ನರಾಗಿದಾರೆಯೋ, ಮತ್ತು ಹಾಗೆಯೇ ನನ್ನ ಸಂಬಂಧಿಗಳು ಮತ್ತು ಮಾತೃ (ತಾಯಿ) ವಂಶದಲ್ಲಿ ಹುಟ್ಟಿದವರೋ, ಹೀಗೆ ಎರಡು ಕುಲಗಳಲ್ಲೂ, ನನ ಸಂಬಂಧವುಳ್ಳವರಾರಿರುವರೋ ಅವರೆಲ್ಲರಿಗೂ ಈ ಪಿಂಡವನ್ನು ಕೊಡುತ್ತೇನೆ. ಆ ಪಿತೃಗಳಿಗೆ ಸ್ವಧಾಕಾರ ತೃಪ್ತಿಯಾಗಲಿ.

ಗಯಾ ಯಾತ್ರೆಯಲ್ಲಿ ಸಾಕ್ಷಿಗಳು

ಸಾಕ್ಷಿಣಃ ಸಂತು ಮೇ ದೇವಾಃ ಬ್ರಹ್ಮೇಶಾನಾದಯಸ್ತಥಾ.
ಮಯಾ ಗಯಾಂ ಸಮಾಸಾದ್ಯ ಪಿತೄಣಾಂ ನಿಷ್ಕೃತಿಃ ಕೃತಾ ॥
ಆಗತೋಽಸ್ಮಿ ಗಯಾಂ ದೇವ ಪಿತೃಕಾರ್ಯೇ ಗದಾಧರ
ತ್ವಮೇವ ಸಾಕ್ಷೀ ಭಗವನ್ನನೃಣೋಽಹಮೃಣತ್ರಯಾತ್ ॥

ಬ್ರಹ್ಮರುದ್ರಾದಿ ಸರ್ವ ದೇವತೆಗಳೂ ನನಗೆ ಸಾಕ್ಷಿಗಳಾಗಿರಲಿ, ನಾನು ಗಯಾ ಕ್ಷೇತ್ರಕ್ಕೆ ಬಂದು ಪಿತೃಗಳ ಕರ್ಮವನ್ನು ಮಾಡಿ (ಪಿತೃಯಜ್ಞದಿಂದ) ಅವರ ನಿಷ್ಕೃತಿಯನ್ನು ಆಚರಿಸಿರುವೆನು.

ಹೇ, ಗದಾಧರ ದೇವನೇ, ಪಿತೃಕಾರ್ಯಕ್ಕಾಗಿ, ಪಿತೃಯಜ್ಞ ಮಾಡಲು, ಗಯಾ (ಕ್ಷೇತ್ರ)ಕ್ಕೆ ಬಂದಿದೇನೆ. ನಾನು ಋಣತ್ರಯದ (ಪಿತೃಋಣ, ಋಷಿಋಣ, ದೇವಋಣಗಳ) ದೆಶೆಯಿಂದ ಮುಕ್ತನಾಗಿದ್ದೇನೆಂಬುದಕ್ಕೆ ಎಲೆ ಭಗವಂತನೇ, ನೀನೇ ಸಾಕ್ಷಿಯು.

ಪ್ರೇತಪರ್ವತದಲ್ಲಿ

ಎರಡನೆ (ಮುಂದಿನ) ದಿನ ಶೌಚ ಸ್ನಾನಾದಿಗಳಿಂದ ಶುಚಿರ್ಭೂತನಾಗಿ ಪ್ರೇತಪರ್ವತಕ್ಕೆ ಹೋಗಬೇಕು, ಅಲ್ಲಿ ಬ್ರಹ್ಮಕುಂಡದಲ್ಲಿ ಸ್ನಾನಮಾಡಿ, ಬುದ್ಧಿವಂತನಾದ, ಧೀಮಂತನು ದೇವಾದಿ (ದೇವರ್ಷಿಪಿತೃ) ತರ್ಪಣವನ್ನು ಮಾಡಬೇಕು.

ಆ ಪ್ರೇತಪರ್ವತದಲ್ಲಿ ಯತ್ನಮಾಡಿ, ಶಾಂತಮನಸ್ಕನಾಗಿ ಪಿತೃಗಳನ್ನು ಆಹ್ವಾನಮಾಡಿ ಕರೆದು ಪೂರ್ವದಂತೆಯೇ ಸಂಕಲ್ಪಮಾಡಿ, ಪಿಂಡಗಳನ್ನು ಹಾಕ (ಕೊಡ) ಬೇಕು. ಸ್ವಶಾಖೋಕ್ತ ತನ್ನ ಮಂತ್ರಗಳಿಂದ ಪೂಜ್ಯರಾದ ಪಿತೃಗಳನ್ನು ಭಕ್ತಿಯಿಂದ ಪೂಜಿಸ (ಅರ್ಚಿಸ) ಬೇಕು.

ಪುರುಷರಿಂದ ಪಿತೃಕರ್ಮದಲ್ಲಿ ಎಷ್ಟು ಎಳ್ಳು ತೆಗೆದುಕೊಡಲ್ಪಡುತ್ತದೆಯೋ, ಅಷ್ಟು ಸಂಖ್ಯಾತರಾದ ಅಸುರರು ಭೀತರಾಗಿ, ಗರುಡನನ್ನು ಕಂಡರೆ ಸರ್ಪಗಳು ಹೊರಟುಹೋಗುವಂತೆ, ಓಡಿಹೋಗುತ್ತಾರೆ.

(ಇಲ್ಲಿ ಪಿತೃಗಳನ್ನು ಉದ್ದೇಶಮಾಡಿ ಬಗಿಸೆಯಲ್ಲಿ (ಅಂಜಲಿತುಂಬ) ತಿಲ (ಎಳ್ಳನ್ನು) ವನ್ನು ತೆಗೆದುಕೊಂಡು ಮೇಲಕ್ಕೆ ಅಂತರಿಕ್ಷಕ್ಕೆ, ಭಕ್ತಿಯಿಂದ, ಎಸೆದು, ಹಾರಿಸಿದರೆ, ಒಂದು ಕಾಳೂ ಕೆಳಕ್ಕೆ ಬೀಳದಿರುವುದನ್ನು ಮಹಾತ್ಮರನೇಕರು, ಕೆಳಗೆ, ಭೂಮಿ ಮೇಲೆ, ಶುಭ್ರವಾದ ಬಿಳೀ ಬಟ್ಟೆಯನ್ನು ಹಾಸಿ, ನಿದರ್ಶನದಿಂದ ಪರೀಕ್ಷಿಸಿ, ಆಶ್ಚರ್ಯಾದ್ಭುತಗಳನ್ನು ಕಂಡ ಮಹಾನುಭಾವರ ಅನುಭವದ, ಉಕ್ತಿಗಳನ್ನು ಅನೇಕರು ಕೇಳಿರುವರು ; ನೋಡಿರುವರು.)

ಅಲ್ಲಿಯೂ ಸಹ ಪೂರ್ವದಂತೆಯೇ ಸಕಲ ಪಿತೃಕರ್ಮಗಳನ್ನೂ ಮಾಡಬೇಕು, ತಿಲಮಿಶ್ರವಾದ ಸಕ್ತುಗಳಿಂದ ಪ್ರೇತಪರ್ವತದಲ್ಲಿ—

ಯೇ ಕೇಚಿತ್ ಪ್ರೇತರೂಪೇಣ ವರ್ತಂತೇ ಪಿತರೋ ಮಮ,
ತೇ ಸರ್ವೇ ತೃಪ್ತಿಮಾಯಾಂತು ಸಕ್ತುಭಿಸ್ತಿಲಮಿಶ್ರಿತೃಃ
ಆಬ್ರಹ್ಮಸ್ತಂಬಪರ್ಯಂತಂ ಯತ್ಕಿಂಚಿತ ಚರಾಚರರ
ಮಯಾ ದತ್ತೇನ ಪಿಂಡೇನ ತೃಪ್ತಿಮಾಯಾಂತು ಸರ್ವಶಃ ॥

ನನ್ನ ಯಾವ ಪಿತೃಗಳು ಯಾರೇ ಆಗಲಿ ಪ್ರೇತರೂಪದಿಂದ ಇರುವರೋ ಅವರೆಲ್ಲರೂ ಈ ತಿಲಮಿಶ್ರಿತ. ಸಕ್ತು ಪಿಂಡಗಳಿಂದ ತೃಪ್ತಿಯನ್ನು ಹೊಂದಲಿ.

ಬ್ರಹ್ಮನನ್ನು ಪ್ರಾರಂಭಿಸಿ ತೃಣಜೀವನ ವರೆವಿಗಿರುವ ಸರ್ವ ಚರಾಚರ ಪ್ರಾಣಿಗಳೂ, ನನ್ನಿಂದ ಕೊಡಲ್ಪಟ್ಟ ಪಿಂಡದಿಂದ ಸರ್ವಶಃ (ಸಂಪೂರ್ಣವಾಗಿ) ತೃಪ್ತರಾಗಲಿ" ಎಂದು ಪ್ರಾರ್ಥಿಸಬೇಕು.

ಮೊದಲು ಪಂಚತೀರ್ಥಗಳಲ್ಲಿ ಅನಂತರ ಉತ್ತರ ಮಾನಸದಲ್ಲಿ ವಿಧಿಯು. ಆಚಮನಮಾಡಿ ಕುಶಹಸ್ತನಾಗಿ, ಪವಿತ್ರವನ್ನು ಧರಿಸಿ, ಉದಕದಿಂದ ಶಿರಸ್ಸಿನಲ್ಲಿ ಪ್ರೋಕ್ಷಿಸಿಕೊಂಡು, ಉತ್ತರ ಮಾನಸಕ್ಕೆ ಹೋಗಿ ಮಂತ್ರಪೂರ್ವಕ ಸ್ನಾನವನ್ನು ಮಾಡಬೇಕು.

ಉತ್ತರೇ ಮಾನಸೇ ಸ್ನಾನಂ ಕರೋಮ್ಯಾತ್ಮವಿಶುದ್ಧಯೇ
ಸೂರ್ಯಲೋಕಾದಿ ಸಂಪ್ರಾಪ್ತಿಸಿದ್ಧಯೇ ಪಿತೃಮುಕ್ತಯೇ

ಎಂಬ ಈ ಶ್ಲೋಕ ಮತ್ತು "ಆತ್ಮ ವಿಶುದ್ಧ್ಯರ್ಥವಾಗಿಯೂ, ಸೂರ್ಯಾದಿಗಳ ಉತ್ತಮ ಲೋಕವನ್ನು ಹೊಂದುವುದಕ್ಕೂ, ಪಿತೃಗಳಿಗೆ ಮುಕ್ತಿಯಾಗುವುದಕ್ಕಾಗಿಯೂ ಸ್ನಾನ ಮಾಡುತ್ತೇನೆ." ಎಂದು ಶ್ಲೋಕಾರ್ಥಾನುಸಂಧಾನ ಪೂರ್ವಕ ಸ್ನಾನ ಮಾಡಬೇಕು. ಸ್ನಾನ ಮಾಡಿದ ನಂತರ ದೇವಾದಿಗಳಿಗೆ ವಿಧ್ಯುಕ್ತರೀತಿಯಿಂದ ತರ್ಪಣವನ್ನು ಮಾಡಿ.

ಆ ಬ್ರಹ್ಮಸ್ತಂಬಪರ್ಯಂತಂ ದೇವರ್ಷಿಪಿತೃಮಾನವಾಃ ।
ತೃಪ್ಯಂತು ಪಿತರಃ ಸರ್ವೇ ಮಾತೃಮಾತಾಮಹಾದಯಃ ॥
ಅತೀತಕುಲಕೋಟೀನಾಂ ಸಪ್ತದ್ವೀಪನಿವಾಸಿನಾಂ
ಆ ಬ್ರಹ್ಮಭುವನಾಲ್ಲೋಕಾನಿದಮಸ್ತು ತಿಲೋದಕಂ

ಬ್ರಹ್ಮನನ್ನಾರಂಭಿಸಿ ಸ್ತಂಬ (ತೃಣ) ಜೀವರವರೆಗಿರುವ, ದೇವತೆಗಳು ಋಷಿಗಳು, ಮಾನವರು, ಸರ್ವಪಿತೃಗಳೂ, ಮಾತೃ ಮಾತಾಮಹ ಮೊದಲಾ

ದವರೆಲ್ಲರೂ, ತೃಪ್ತಿಯನ್ನು ಹೊಂದಲಿ, ಸಪ್ತದ್ವೀಪಗಳಲ್ಲಿ ವಾಸಮಾಡು ತ್ತಿರುವ, ಕಳೆದುಹೋದ (ಅತೀತ) ಕುಲಕೋಟಿಗಳಲ್ಲಿರುವ, ಬ್ರಹ್ಮ (ಸತ್ಯ) ಲೋಕವನ್ನಾರಂಭಿಸಿ ಎಲ್ಲ ಲೋಕಗಳಲ್ಲಿ ವಾಸಿಸುವ, ಸರ್ವಪಿತೃಗಳಿಗೂ ಈ ತಿಲೋದಕವು ತೃಪ್ತಿಯನ್ನು ಕೊಡಲೆಂದು (ಎಳ್ಳು ನೀರಿನಿಂದ) ತರ್ಪಣ ಬಿಡ ಬೇಕು. ನಂತರ ತನ್ನ ಶಾಖೋ (ಸೂತ್ರೋ) ಕ್ತ ವಿಧಾನದಿಂದ ಪಿಂಡಸಹಿತ ಶ್ರಾದ್ಧವನ್ನು ಪಿತೃಗಳಿಗೋಸ್ಕರ ಮಾಡಬೇಕು.

ಅಷ್ಟಕಾಗಳಲ್ಲಿ, ವೃದ್ಧಿಯಲ್ಲಿ, ಗಯಾದಲ್ಲಿ ಕ್ಷಯದಿವಸ (ಕ್ಷಯೇಹನಿ-ಮೃತದಿವಸ)ದಲ್ಲಿ ಮಾತೃಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು, ಅನ್ಯತ್ರ ಆಕೆಯ ಸ್ವಾಮಿಯೊ (ಗಂಡನೊ) ಡನೆ ಎಂದರೆ ತಂದೆಯೊಂದಿಗೆ ತಾಯಿಯ ಶ್ರಾದ್ಧವನ್ನು ಮಾಡಬೇಕು.

ಓಂ ನಮೋಸ್ತು ಭಾನವೇ ಭರ್ತ್ರೇ ಸೋಮ ಭೌಮ ಜ್ಞರೂಪಿಣೇ
ಜೀವಭಾರ್ಗವಶನ್ಯೈಶ್ಚರರಾಹುಕೇತು ಸ್ವರೂಪಿಣೇ ||

"ಪ್ರಣವ ಪ್ರತಿಪಾದ್ಯನಾದ ಸ್ವಾಮಿಯಾದ, ಸೂರ್ಯಾಂತರ್ಗತ ನಾರಾ ಯಣ. ಭಾನು ಚಂದ್ರ, ಅಂಗಾರಕ, ಬುಧಸ್ವರೂಪಿ, ಗುರು, ಶುಕ್ರ, ಶನೈಶ್ಚರ ರಾಹು, ಕೇತುಸ್ವರೂಪಿ, ಭಗವಂತನಿಗೆ ನಮಸ್ಕಾರ"ವೆಂದು ಮಂತ್ರೋಚ್ಚಾರಣೆ ಪೂರ್ವಕ ಸೂರ್ಯನಿಗೆ ನಮಸ್ಕರಿಸಿ, ಅರ್ಚಿಸಿ, ಪಿತೃಗಳನ್ನು ಸೂರ್ಯಲೋಕಕ್ಕೆ ಕಳುಹಿಸಿ ತಲಪಿಸಬೇಕು.

ಇಲ್ಲಿ ಮಾನಸ ಸರೋವರವು; ಆದರಿಂದ ಉತ್ತರಕ್ಕೆ ಉತ್ತರ ಮಾನ ಸವು. ಉತ್ತರ ಮಾನಸದ ದೆಶೆಯಿಂದ ಮೌನಿಯು ಮಾತನಾಡದೆ ಮೌನ ದಿಂದಲೇ, ಮುನಿ ಚರ್ಯೆಯಿಂದ ದಕ್ಷಿಣ ಮಾನಸಕ್ಕೆ ಹೋಗಬೇಕು. ಅಲ್ಲಿ ಉದೀಚೀತೀರ್ಥವೆಂದು ಇದೆ.

ಅಲ್ಲಿಂದ ವಿಮುಕ್ತಿಪ್ರದವಾದ ಉದೀಚಿಯಲ್ಲಿ ಉತ್ತರದಿಕ್ಕಿನಲ್ಲಿರುವ ಮುಂಡಪೃಷ್ಠದಲ್ಲಿ ದೇವರ್ಷಿ ಪಿತೃತರ್ಪಣಗಳನ್ನು ಮಾಡಬೇಕು.

ಮಧ್ಯದಲ್ಲಿ ಕನಖಲತೀರ್ಥವೆಂದು ಪಿತೃಗಳಿಗೆ ಸದ್ಗತಿ ಪ್ರದವಾದುದಿದೆ. ಅದರಲ್ಲಿ ಸ್ನಾನ ಮಾಡುವುದರಿಂದ ಬಂಗಾರದಂತೆ ಸುವರ್ಣವರ್ಣ ಹೊಂದಿ.

ನರನು ಪವಿತ್ರನಾಗುತ್ತಾನೆ. ಆದುದರಿಂದಲೇ ಲೋಕದಲ್ಲಿ ಇದು **ಕನಖಲ ತೀರ್ಥವೆಂದು** ಅಸದೃಶ ಉತ್ತಮ ಖ್ಯಾತಿಯನ್ನು ಪಡೆದಿದೆ.

ಅಲ್ಲಿಂದ ದಕ್ಷಿಣ ಭಾಗದಲ್ಲಿ **ದಕ್ಷಿಣ ಮಾನಸವೆಂಬ** ತೀರ್ಥವಿದೆ, ಹೀಗೆ ದಕ್ಷಿಣ ಮಾನಸದಲ್ಲಿ ಮೂರು ತೀರ್ಥಗಳಿರುವುವು, ಅವುಗಳಲ್ಲಿ ಸ್ನಾನಮಾಡಿ ಪ್ರತ್ಯೇಕಪ್ರತ್ಯೇಕವಾಗಿ ವಿಧ್ಯುಕ್ತ ರೀತಿಯಿಂದ ಶ್ರಾದ್ಧಗಳನ್ನು ಮಾಡಬೇಕು.

ದಿವಾಕರ ಕರೋಮೀಹ ಸ್ನಾನಂ ದಕ್ಷಿಣಮಾನಸೇ
ಬ್ರಹ್ಮಹತ್ಯಾದಿ ಪಾಪೌಘಘಾತನಾಯ ವಿಮುಕ್ತಯೇ ॥

ಎಲೈ ದಿವಾಕರ (ಸೂರ್ಯ) ನೇ, ಇಲ್ಲಿ ಈ ದಕ್ಷಿಣ ಮಾನಸ ತೀರ್ಥದಲ್ಲಿ ಬ್ರಹ್ಮಹತ್ಯಾದಿ ಸಕಲ ಪಾಪ ಸಮೂಹಗಳು ನಾಶವಾಗಲು, ಪಾಪಗಳಿಂದ ಮುಕ್ತನಾಗಲು, ಸ್ನಾನ ಮಾಡುತ್ತೇನೆಂದು ಹೇಳಿ, ಸ್ನಾನಮಾಡಿ ಪೂಜಾದಿ ಮುಗಿಸಿ, ಪಿಂಡ ಪ್ರದಾನ ಪೂರ್ವಕ ಶ್ರಾದ್ಧವನ್ನು ಮಾಡಬೇಕು, ಪಿತೃಗಳನ್ನು ದಾಟಿಸಿ ಸದ್ಗತಿ ಕೊಡುವುದಕ್ಕೂ, ಪುತ್ರ ಪೌತ್ರ, ಧನ, ಐಶ್ವರ್ಯ, ಆಯುಸ್ಸು, ಆರೋಗ್ಯವೃದ್ಧಿಗೋಸ್ಕರವೂ, ಪಿತೃಗಳ ತೃಪ್ತ್ಯರ್ಥವಾಗಿ ಸೂರ್ಯನನ್ನ ನಮಸ್ಕರಿಸುತ್ತೇನೆ ಎಂಬ ಅರ್ಥವುಳ್ಳ.

ನಾಮಾಮಿ ಸೂರ್ಯಂ ತೃಪ್ತ್ಯರ್ಥಂ ಪಿತೃಣಾಂ ತಾರಣಾಯ ಚ ।
ಪುತ್ರಪೌತ್ರ ಧನೈಶ್ವರ್ಯ ಆಯುರಾರೋಗ್ಯವೃದ್ಧಯೇ ।

ಎಂದು ಹೇಳಿ, ನಮಸ್ಕರಿಸಬೇಕು.

ಮೀನಾರ್ಕ (ಮೀನಮಾಸ—ಮೀನರಾಶಿಯಲ್ಲಿರುವ ಸೂರ್ಯ) ನನ್ನು ನೋಡಿ ಭಕ್ತಿಯಿಂದ ಪೂಜಿಸಿ ಈ ಶ್ಲೋಕವನ್ನು ಹೇಳಬೇಕು,

ಕವ್ಯವಾಡಾದಯೋ ಯೇ ಚ ಪಿತೃಣಾಂ ದೇವತಾಸ್ತಥಾ ॥
ಮದೀಯೈಃ ಪಿತೃಭಿಃ ಸಾರ್ಧಂ ತರ್ಪಿತಾಸ್ಥ ಸ್ವಧಾಭುಜಃ ॥

"ಕವ್ಯವಾಡಾದಿ ಯಾರು ಪಿತೃಗಳಿಗೆ ದೇವತೆಗಳಿದ್ದಾರೆಯೋ, ಸ್ವಧಾ ಭೋಜನ ಮಾಡುವವರು ಯಾರು ಅವರೆಲ್ಲರು ನನ್ನ ಪಿತೃಗಳೊಡನೆ ತೃಪ್ತಿಯನ್ನು ಹೊಂದುವವರಾಗಲಿ," ಎಂದು ಪ್ರಾರ್ಥಿಸಬೇಕು,

ಅಲ್ಲಿಂದ ಸರ್ವ ತೀರ್ಥೋತ್ತಮವಾದ **ಫಲ್ಗುತೀರ್ಥಕ್ಕೆ** ಹೋಗಬೇಕು. ಅಲ್ಲಿ ಸದಾ ಪಿತ್ರ್ಯುದ್ದೇಶದಿಂದ ಶ್ರಾದ್ಧ ಮಾಡುವುದರಿಂದ

ಪಿತೃಗಳಿಗೂ, ಕರ್ತನಿಗೂ, ಸಹ ಮುಕ್ತಿಯು ಲಭಿಸುತ್ತದೆ. ಇಲ್ಲಿ ಪೂರ್ವದಲ್ಲಿ ಬ್ರಹ್ಮನಿಂದ ಪ್ರಾರ್ಥಿತನಾದ ವಿಷ್ಣುವು ಫಲ್ಗುಕನಾದನು ದಕ್ಷಿಣಾಗ್ನಿಯಲ್ಲಿ ಮಾಡಿದ ಯಜ್ಞದಲ್ಲಿ ಉತ್ಪನ್ನವಾದುದೇ ಫಲ್ಗು ತೀರ್ಥವು. ಈ ಫಲ್ಗುವಿನಲ್ಲಿ, ಕಾಮಧೇನು ಗೋವು, ಜಲವೂ, ಭೂಮಿಯೂ, ಸೃಷ್ಟಿಯಲ್ಲಿ ಅಂತರ್ಗತವಾಗಿ ಮಹಾ ಫಲಗಳನ್ನು ಕೊಡುವುದಾಗಿದೆ. ಇಲ್ಲಿ ಆಚರಿಸಿದ ಸತ್ಕರ್ಮಗಳು ಎಂದಿಗೂ ನಿಷ್ಫಲವಾಗುವುದಿಲ್ಲವು.

ಭೂಲೋಕದಲ್ಲಿ ಎಷ್ಟು ತೀರ್ಥಗಳಿವೆಯೋ ಆ ಸರ್ವ ತೀರ್ಥಾಭಿಮಾನಿ ದೇವತೆಗಳು ಈ ಫಲ್ಗು ತೀರ್ಥಕ್ಕೆ ಸ್ನಾನಕ್ಕಾಗಿ ತಪ್ಪದೆ ಆದರ, ಭಕ್ತಿ, ಶ್ರದ್ಧೆಗಳಿಂದ, ಬಂದು ಸ್ನಾನಮಾಡುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲವು.

ಗಂಗೆಯು ವಿಷ್ಣುವಿನ ಪಾದೋದಕವು, ಫಲ್ಗುವು ಆದಿ ಗದಾಧರನು ಹಿಮವು ದ್ರವರೂಪದಿಂದ (ನದಿಯಾಗಿ) ಪ್ರವಹಿಸಿ ಬರುವುದರಿಂದ ಈ ಫಲ್ಗುವನ್ನು ಗಂಗೆಗಿಂತಲೂ ಅಧಿಕವಾದುದೆಂದು ಜ್ಞಾನಿಗಳು ತಿಳಿಯುತ್ತಾರೆ. ಫಲ್ಗು ಜಲದಲ್ಲಿ ಸ್ನಾನಮಾಡುವುದರಿಂದ ಸಹಸ್ರ ಅಶ್ವಮೇಧ ಯಾಗವನ್ನು ಮಾಡುವುದರಿಂದ ಬರಬಹುದಾದ ಫಲಕ್ಕಿಂತಲೂ ಅಧಿಕ ಫಲವು ಬರುವುದು.

ಫಲ್ಗುತೀರ್ಥೇ ವಿಷ್ಣುಜಲೇ ಕರೋಮಿ ಸ್ನಾನಮದ್ಯ ವೈ ।
ಪಿತೃಣಾಂ ವಿಷ್ಣುಲೋಕಾಯ ಭುಕ್ತಿಮುಕ್ತಿಪ್ರಸಿದ್ಧಯೇ ॥

ವಿಷ್ಣುಜಲವಾದ ಈ ಫಲ್ಗು ತೀರ್ಥದಲ್ಲಿ, ಪಿತೃಗಳೆಲ್ಲರಿಗೂ ವಿಷ್ಣುಲೋಕ ಪ್ರಾಪ್ತಿಗೂ, ಭುಕ್ತಿ ಮತ್ತು ಮುಕ್ತಿ ಲಭಿಸುವುದಕ್ಕಾಗಿಯೂ ಈಗಲೇ ನಾನು ಸ್ನಾನ ಮಾಡುತ್ತಿರುವೆನೆಂದು ಪ್ರಾರ್ಥಿಸಿ, ಸ್ನಾನ ಮಾಡಬೇಕು. ಮಾನವನು ಫಲ್ಗು ತೀರ್ಥದಲ್ಲಿ ಸ್ನಾನಮಾಡಿ ತನ್ನ ಶಾಖಾ (ಸೂತ್ರ–ಆಶ್ವಲಾಯನ–ಆಪಸ್ತಂಬ) ಅನುಗುಣವಾಗಿ ತರ್ಪಣ ಮತ್ತು ಶ್ರಾದ್ಧವನ್ನು ಪಿಂಡಪ್ರದಾನ ಪೂರ್ವಕ ಆಚರಿಸಿ ಪಿತಾಮಹನನ್ನು ನಮಸ್ಕರಿಸಬೇಕು.

ನಮಃ ಶಿವಾಯ ದೇವಾಯ ಈಶಾನಪುರುಷಾಯ ಚ
ಅಘೋರ ವಾಮದೇವಾಯ ಸದ್ಯೋಜಾತಾಯ ಶಂಭವೇ ॥

ಎಂಬ ಈ ಮಂತ್ರದಿಂದ ಪಿತಾಮಹನಿಗೆ ನಮಸ್ಕರಿಸಿ ಪೂಜೆಯನ್ನು ಮಾಡಬೇಕು. ಹೀಗೆ ನರನು ಫಲ್ಗು ತೀರ್ಥದಲ್ಲಿ ಸ್ನಾನಮಾಡಿ, ಗದಾಧರ

ದೇವನನ್ನು ದರ್ಶನಮಾಡಿ, ಭಕ್ತಿಯಿಂದ ನಮಸ್ಕರಿಸಿ, ಪಿತೃಗಳೊಡನೆ ತಾನು ಅವರನ್ನು ವೈಷ್ಣವ ಪದಕ್ಕೆ ಒಯ್ದು ತಲಪಿಸಬೇಕು.

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ
ಪ್ರದ್ಯುಮ್ನಾಯಾನಿರುದ್ಧಾಯ ಶ್ರೀಧರಾಯ ಚ ವಿಷ್ಣವೇ ॥

ಪ್ರಣವಪ್ರತಿಪಾದ್ಯನಾದ, ವಾಸುದೇವನಿಗೆ ನಮಸ್ಕಾರ, ಮತ್ತು ಸಂಕರ್ಷಣನಿಗೆ, ಅನಿರುದ್ಧನಿಗೆ, ಸರ್ವತ್ರವ್ಯಾಪ್ತನಾದ, ಶ್ರೀಧರನಾಮಕ ವಿಷ್ಣುವಿಗೆ ನಮಸ್ಕಾರವೆಂದು ಹೇಳಿ ಪಂಚ (ಐದು) ತೀರ್ಥಗಳಲ್ಲಿ ಮನುಜನು ಸ್ನಾನ ಮಾಡಿ ಪಿತೃಗಳಿಗೆ ಬ್ರಹ್ಮ(ಸತ್ಯ) ಲೋಕಕ್ಕೆ ಭಗವತ್ ಪ್ರಾರ್ಥನೆಯಿಂದು ಒಯ್ದು ತಲಪಿಸಬೇಕು.

ಪಂಚಾಮೃತಗಳಿಂದ ಗದಾಪಾಣಿಗೆ ಅಭಿಷೇಕ ಮಾಡಿಸಿ, ಪುಷ್ಪ ವಸ್ತ್ರಾದಿಗಳಿಂದ ಅಲಂಕರಿಸಿ ಯಾವನು ವಿಧ್ಯುಕ್ತ ರೀತಿ ಷೋಢಶೋಪಚಾರ ಪೂಜಾದಿಗಳನ್ನು ಮಾಡುವುದಿಲ್ಲವೋ, ಅಂಥವನು ಆಚರಿಸಿದ ಶ್ರಾದ್ಧವು ಫಲ ಪುಲವಾಗದೆ ನಿರರ್ಥಕವಾಗುವುದು.

ನಾಗಕೂಟದ ದೆಶೆಯಿಂದ, ಗೃಧ್ರಕೂಟದ ದೆಶೆಯಿಂದ, ವಿಷ್ಣುವಿನ ಉತ್ತರ ಮಾನಸದ ದೆಶೆಯಿಂದ ಇದು ಗಯಾ ಶಿರವೆನಿಸಿದೆ, ಅದನ್ನೇ ಫಲ್ಗುತೀರ್ಥವೆನ್ನುತ್ತಾರೆ.

ಮುಂಡಪೃಷ್ಠ (ನಗ) ಬೆಟ್ಟದ ಕೆಳಭಾಗದಲ್ಲಿ ಅನುತ್ತಮ ಫಲ್ಗು ತೀರ್ಥವಿರುವಲ್ಲಿ ಈ ಸ್ಥಳದಲ್ಲಿ ಶ್ರಾದ್ಧಾದಿಗಳನ್ನು ಮಾಡುವುದರಿಂದ ಸರ್ವ ಪಿತೃಗಳೂ ಮೋಕ್ಷವನ್ನು ಕಾಲಾಂತರದಲ್ಲಿ ಪಡೆಯುವರು. (ಸದ್ಯಃ ಪಾಪ ಗಳಿಂದ ಮುಕ್ತರಾಗಿ ಬ್ರಹ್ಮಲೋಕಕ್ಕೆ ಹೋಗಿ ಸೌಖ್ಯದಿಂದ ಅಲ್ಲಿ ಹರ್ಷಿತ ರಾಗಿ ವಾಸಿಸುತ್ತಿರುವರು. ಶಮೀಪತ್ರಪ್ರಮಾಣೇನ ಪಿಂಡಂ ದದ್ಯಾ ದ್ಗಯಾಶಿರೇ ॥ ಶಮೀ ಪತ್ರವೆನಿಸಿದ (ಮಯೂರಾಂಡ) ಪ್ರಮಾಣದ ಪಿಂಡ ವನ್ನು ಗಯಾ ಶಿರದಲ್ಲಿ ಭಕ್ತಿಯಿಂದ ಪಿತೃಗಳಿಗೆ ಹಾಕಬೇಕು.

ಯಾವನು ಯಾವ ತನ್ನ ಪಿತೃಗಳ ನಾಮವನ್ನು ಉಚ್ಚರಿಸಿ, ಅಲ್ಲಿ ಪಿಂಡವನ್ನು ಕೊಡುತ್ತಾನೆಯೋ, ಅಂಥವನನ್ನು ಶಾಶ್ವತವಾದ ಬ್ರಹ್ಮಲೋ ಕಕ್ಕೆ ಅದು ಒಯ್ದು (ನಯನ ಮಾಡಿ) ಸೇರಿಸುತ್ತದೆ.

ಅವ್ಯಕ್ತರೂಪಿಯಾದ ಯಾವ ದೇವನು ಮುಂಡಪೃಷ್ಠ (ಅದ್ರಿ) ರೂಪ ದಿಂದ ಇರುವನೋ, ಅವನೇ ಫಲ್ಗು ತೀರ್ಥಾದಿ ರೂಪದಿಂದ, ಗದಾಧರ ರೂಪ ದಿಂದ, ನಮಸ್ಕರಿಸಲ್ಪಡುತ್ತಾನೆ, ಶಿಲಾ, ಪರ್ವತ, ಫಲ್ಗು ಮೊದಲಾದ ರೂಪ ದಿಂದ ಅವ್ಯಕ್ತರೂಪನಾಗಿಯೂ, ಗದಾಧರಾದಿ ರೂಪದಿಂದ ಆದಿಧರನಾಗಿಯೂ ವ್ಯಕ್ತನಾಗಿರುವನು.

ಅಲ್ಲಿಂದ ಧರ್ಮನು ವ್ಯವಸ್ಥಿತನಾಗಿರುವ ಧರ್ಮಾರಣ್ಯಕ್ಕೆ ಹೋಗ ಬೇಕು. ಮತಂಗವಾಪಿಯಲ್ಲಿ ಸ್ನಾನಮಾಡಿ, ತರ್ಪಣವನ್ನೂ ಶ್ರಾದ್ಧವನ್ನೂ ಆಚರಿಸಬೇಕು. ಮತಂಗೇಶನಲ್ಲಿ ಹೋಗಿ ನಮಸ್ಕರಿಸಿ ಈ ರೀತಿ ಮಂತ್ರ ವನ್ನು ಹೇಳಬೇಕು.

ಪ್ರಮಾಣಂ ದೇವತಾಃ ಶಂಭುರ್ಲೋಕಪಾಲಾಶ್ಚ ಸಾಕ್ಷಿಣಃ ।
ಮಯಾಗತ್ಯ ಮತಂಗೇಽಸ್ಮಿನ್ ಪಿತೄಣಾಂ ನಿಷ್ಕೃತಿಃ ಕೃತಾ ॥

ನಾನು ಈ ಮಾತಂಗೇಶನ ಕ್ಷೇತ್ರಕ್ಕೆ ಬಂದು, ಪಿತೃಯಜ್ಞವನ್ನು ಮಾಡಿ (ಮುಕ್ತ) ಕೃತಕೃತ್ಯನಾಗಿ, ಪಿತೃಋಣದಿಂದ ಮುಕ್ತನಾಗಿದೇನೆಂಬ ವಿಷಯ ದಲ್ಲಿ ಸರ್ವದೇವತೆಗಳೂ ಪ್ರಮಾಣವು. ಶಂಭುವು (ಮತಂಗೇಶನು) ಲೋಕ ಪಾಲಕರೂ ಸಾಕ್ಷಿಗಳು.

ಪೂರ್ವದಲ್ಲಿ ಬ್ರಹ್ಮತೀರ್ಥದಲ್ಲಿಯೂ ಕೂಪದಲ್ಲಿಯೂ ಸ್ನಾನಮಾಡಿ ಶ್ರಾದ್ಧಾದಿ (ತರ್ಪಣ ಮೊದಲಾದುವು) ಗಳನ್ನು ಮಾಡಬೇಕು. ಆ ಕೂಪ ಯೂಪಗಳ ಮಧ್ಯದಲ್ಲಿ ಈ ರೀತಿ ಶ್ರಾದ್ಧ ಮತ್ತು ತರ್ಪಣಾದಿಗಳನ್ನು ಮಾಡುವುದರಿಂದ ಪಿತೃಗಳನ್ನು ದಾಟಿಸಿ, ರಕ್ಷಿಸುತ್ತಾನೆ. ಧರ್ಮನನ್ನೂ ಧರ್ಮೇಶ್ವರನನ್ನೂ, ನಮಸ್ಕರಿಸಿ ಮಹಾ ಬೋಧಿವೃಕ್ಷವನ್ನು ನಮಸ್ಕರಿಸ ಬೇಕು.

ಈ ರೀತಿಯಾಗಿ ಎರಡನೆಯ ದಿವಸ, ಸ್ನಾನ, ತರ್ಪಣ, ಪಿಂಡಪ್ರದಾನ ಅರ್ಚನ, ನಮಸ್ಕಾರಾದಿಗಳಿಂದ ಪಿತೃಗಳಿಗೆ ಸುಖವು ಉಂಟಾಗುವುದೆಂದು ಹೇಳಲ್ಪಟ್ಟಿದೆ. ಹೀಗೆ ಗಯಾ ಮಾಹಾತ್ಮ್ಯದಲ್ಲಿ ಪಿಂಡದಾನ ವಿಧಿಯು ಉಕ್ತವಾಗಿದೆ.

ಗಯಾ ಸಂಗ ಫಲಪ್ರದವೂ ಭುಕ್ತಿ ಮುಕ್ತಿ ಪ್ರದಾಯಕವೂ ಆದ ಪೂರನೆಯ ದಿವಸದಲ್ಲಿ ಆಚರಿಸಬೇಕಾದ ಕಾರ್ಯವು ಈ ರೀತಿ ಇರುವುದು.

ಬ್ರಹ್ಮಸರಸ್ಸಿನಲ್ಲಿ ಸ್ನಾನವನ್ನು ಮಾಡಿ ಪಿಂಡಪ್ರದಾನ ಪೂರ್ವಕ ಪಿತೃಶ್ರಾದ್ಧಯನ್ನು ಮಾಡಬೇಕು.

"ಸ್ನಾನಂ ಕರೋಮಿ ತೀರ್ಥೇऽಸ್ಮಿನ್ ಋಣತ್ರಯವಿಮುಕ್ತಯೇ ॥
ಶ್ರಾದ್ಧಾಯ ಪಿಂಡದಾನಾಯ ತರ್ಪಣಾಯಾರ್ಥಸಿದ್ಧಯೇ" ॥

ಎಂದು, "ಶ್ರಾದ್ಧವನ್ನು ಮಾಡಲಿಕ್ಕೂ, ಪಿತೃಗಳಿಗೆ ಪಿಂಡದಾನ ಮಾಡುವುದಕ್ಕೂ, ತರ್ಪಣವನ್ನು ಕೊಡಲಿಕ್ಕೂ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಸಿದ್ಧಿಸುವುದಕ್ಕೂ, ಮತ್ತು ಪಿತೃಋಣ, ದೇವಋಣ, ಋಷಿಋಣಗಳೆಂಬ ಋಣತ್ರಯದಿಂದ ಮುಕ್ತನಾಗಲಿಕ್ಕೂ, ಈ ಬ್ರಹ್ಮಸರಸ್ಸಿನಲ್ಲಿ ಸ್ನಾನ ಮಾಡುತ್ತೇನೆಂದು" ಸಂಕಲ್ಪಮಾಡಬೇಕು. ಆ ಕೂಪ ಮತ್ತು ಯೂಪ ಸ್ತಂಭಮಧ್ಯದಲ್ಲಿ ಈ ರೀತಿ, ಅನುಷ್ಠಾನ ಮಾಡುವುದರಿಂದ ಪಿತೃಗಳನ್ನು ಉದ್ಧೃತರನ್ನಾಗಿ ಮಾಡು (ದಾಟಿಸು) ತ್ತಾನೆ, ಸ್ನಾನಮಾಡಿ ಎದ್ದು ಬೃಹ್ಮದೇವರ ಯೂಪವನ್ನು ಪ್ರಾರ್ಥಿಸಿ ಬ್ರಹ್ಮತೀರ್ಥದಲ್ಲಿ ಶ್ರಾದ್ಧವನ್ನುಮಾಡಿ, ಪಿತೃಗಳನ್ನು ಬ್ರಹ್ಮಲೋಕಕ್ಕೆ ಕರ್ತನು ಕಳುಹಿಸುತ್ತಾನೆ. ಗೋಪ್ರಚಾರದ ಸಮೀಪದಲ್ಲಿರುವ ಆಮ್ರ (ಮಾವಿನ) ಗಳು ಬೃಹ್ಮದೇವರಿಂದ ಸೃಜಿಸಲ್ಪಟ್ಟವು. (ಹಾಕಿ, ಬೆಳೆಸಿದವು.) ಅವುಗಳಿಗೆ ನೀರನ್ನು ಸೇಚನ ಮಾಡುವ ಮಾತ್ರದಿಂದಲೇ ಪಿತೃಗಳು ಮೋಕ್ಷಕ್ಕೆ ಹೋಗುವರು.

ಆಮ್ರಂ ಬ್ರಹ್ಮಸರೋದ್ಭೂತಂ ಸರ್ವದೇವಮಯಂ ವಿಭುಂ
ವಿಷ್ಣುರೂಪಂ ಪ್ರಸಿಂಚಾಮಿ ಪಿತೃಣಾಃ ಚೈವ ಮುಕ್ತಯೇ ॥

ಬ್ರಹ್ಮಸರಸ್ಸಿನಲ್ಲಿ ಉದ್ಭವಿಸಿದ, ಸರ್ವದೇವ (ಮಯ) ತೆಗಳ ಸಮೂಹ ಸನ್ನಿಧಾನದಿಂದ ಕೂಡಿದ ಸರ್ವಸಮರ್ಥನೂ ಪ್ರಭುವೂ ಆದ ವಿಷ್ಣುರೂಪಿಯಾದ (ಮಾವಿನಮರ) ಆಮ್ರ ವೃಕ್ಷವನ್ನು ಪಿತೃಗಳಿಗೆ ಮುಕ್ತಿಯಾಗುವುದಕ್ಕೋಸ್ಕರ ಸೇಚನೆ ಮಾಡುತ್ತೇನೆ.)

ಏಕೋ ಮುನಿಃ ಕುಂಭಕುಶಾಗ್ರಹಸ್ತಃ
ಆಮ್ರಸ್ಯ ಮೂಲೇ ಸಲಿಲಂ ದದಾತಿ ।
ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ
ಏಕಾ ಕ್ರಿಯಾ ದ್ವ್ಯರ್ಥಕರೀ ಪ್ರಸಿದ್ಧಾ ॥

ಒಬ್ಬ ಮುನಿಯು, ದರ್ಭಪಾಣಿ (ಪವಿತ್ರವನ್ನು ಧರಿಸಿ) ಯಾಗಿ, ಕೈಲಿ ಉದಕ ಕಲಶವನ್ನು ಹಿಡಿದು, ಆಮ್ರವೃಕ್ಷದ ಬುಡ (ಮೂಲ) ದಲ್ಲಿ ಪಿತೃಗಳನ್ನು ಉದ್ದೇಶಮಾಡಿ ಸಲಿಲ (ತರ್ಪಣ) ವನ್ನು ಕೊಡುತ್ತಾನೆ. ಇದರಿಂದ ಮಾವಿನ ಮರಗಳಿಗೂ ನೀರೆರೆದಂತಾಯಿತು, ಪಿತೃಗಳೂ ತೃಪ್ತರಾದರೆಂಬುವುದರಿಂದ ತರ್ಪಣಮಾಡಿದನೆಂಬ ಒಂದೇ ಕ್ರಿಯೆಯಾದರೂ, ವೃಕ್ಷಕ್ಕೆ ನೀರು ಹಾಕಿದ್ದು, ಪಿತೃ ಸಂತೃಪ್ತಿ ಎಂಬೆರಡು ಕಾರ್ಯಗಳು ಒಟ್ಟಿಗೆ ನೆರವೇರಿತೆಂಬುದು ಪ್ರಸಿದ್ಧವಾಗಿದೆ. ಆಚಮನಮಾಡಿ, ಸಂಕಲ್ಪಪೂರ್ವಕ ಆಮ್ರಮೂಲದಲ್ಲಿ ತರ್ಪಣೋದಕವನ್ನು ಕೊಟ್ಟ, ಮನುಷ್ಯನು ದೇವತೆಗಳಿಂದ ಉಪೇಕ್ಷೆ ಮಾಡಲ್ಪಡ ತಕ್ಕದ್ದಲ್ಲವು. ಖಂಡಿತ ಅದು ನಿರರ್ಥಕವಾಗದೆ ಸಫಲವೇ ಆಗುವುದು. ಈ ರೀತಿ ಯೂಪವನ್ನು ಪ್ರದಕ್ಷಿಣೆ ಮಾಡುವುದರಿಂದ ವಾಜಪೇಯ ಯಾಗ ಮಾಡಿದ ಫಲವನ್ನು ಪಡೆಯುವನು.

ಬ್ರಹ್ಮನಿಗೂ ನಮಸ್ಕರಿಸಿ, ಪಿತೃಗಳನ್ನು ಬ್ರಹ್ಮಪುರವೆನಿಸಿದ ಸತ್ಯ ಲೋಕಕ್ಕೆ ಒಯ್ದು ತಲಪಿಸುವನು.

ಓಂ ನಮೋ ಬ್ರಹ್ಮಣೇಽಜಾಯ ಜಗಜ್ಜನ್ಮಾದಿ ಕಾರಿಣೇ
ಭಕ್ತಾನಾಂ ಚ ಪಿತೄಣಾಂ ಚ ತಾರಕಾಯ ನಮೋ ನಮಃ ॥

ಸಮಸ್ತ ಗುಣಪೂರ್ಣನೂ, ಪ್ರಣವಪ್ರತಿಪಾದ್ಯನೂ, ಉತ್ಪತ್ತ್ಯಾದಿ ದೋಷದೂರನೂ, ಸಕಲ ಚರಾಚರ ಪ್ರಪಂಚಕ್ಕೂ, ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನಪ್ರದ, ಅಜ್ಞಾನನಾಶಕ, ಸಂಸಾರ ಬಂಧನದಲ್ಲಿಡುವುದು, ಬಂಧನದಿಂದ ಬಿಡುಗಡೆಮಾಡಿ ಮೋಕ್ಷಪ್ರದಾನ ಮಾಡುವುದೆಂಬ ಸೃಷ್ಟ್ಯಾದ್ಯಷ್ಟ ಕರ್ತನೂ, ಸರ್ವಕರ್ತನೂ, ಸರ್ವಸ್ವಾಮಿಯೂ ಆದ ಬ್ರಹ್ಮ ಶಬ್ದ ವಾಚ್ಯನಾದ ವಿಷ್ಣುವಿಗೆ, ಭಕ್ತರಿಗೂ, ಪಿತೃಗಳಿಗೂ ಭವಬಂಧನದಿಂದ ದಾಟಿಸಿ, ಸ್ವಸ್ವರೂಪಾನಂದಾವಿರ್ಭಾವ ಲಕ್ಷಣವಾದ ದುಃಖ ಲವಲೇಶ

ಸಂಬಂಧವಿಲ್ಲದ, ಪರಮಾನಂದಾವಾಪ್ತಿರೂಪ ಸುಖವನ್ನು ಕೊಡುವ ಶ್ರೀಹರಿಗೆ ನಮೋ ನಮಃ, ನಮಸ್ಕಾರ ನಮಸ್ಕಾರವೆಂದು ಭಕ್ತಿಯಿಂದ ಪ್ರಾರ್ಥಿಸಬೇಕು.

ಅನಂತರ—ಯಮ ಮತ್ತು ಧರ್ಮರಿಗೆ ಬಲಿಪ್ರದಾನವು.

ಯಮರಾಜಧರ್ಮರಾಜೌ ನಿಶ್ಚಲಾರ್ಥಾ ಇತಿ ಸ್ಥಿತೌ ॥
ತಾಭ್ಯಾಂ ಬಲಿಂ ಪ್ರಯಚ್ಛಾಮಿ ಪಿತೃಣಾಂ ಮುಕ್ತಿಹೇತವೇ ।

"ಇಲ್ಲಿ ಸ್ಥಿತರಾಗಿರುವ ಯಮರಾಜ ಧರ್ಮರಾಜರಿಬ್ಬರಿಗೂ, ಪಿತೃಗಳಿಗೆ ಮುಕ್ತಿ ಲಭಿಸುವ ಉದ್ದೇಶ್ಯದಿಂದ ಬಲಿಯನ್ನು ಕೊಡುತ್ತೇನೆಂದು" ಹೇಳಿ ಬಲಿಯನ್ನು ಅರ್ಪಿಸಬೇಕು.

ಈ ಕೆಳಗೆ ಕಂಡ ಮಂತ್ರದಿಂದ ಶ್ವಾನಬಲಿಯನ್ನು ಕೊಡಬೇಕು. ಆ ಮೇಲೆ ಮನಃಪೂರ್ವಕ ಕಾಕಬಲಿಯನ್ನು—

ಐಂದ್ರವಾರುಣವಾಯವ್ಯಾಯಾಮ್ಯಾ ವೈ ನೈಋತಾಸ್ತಥಾ
ವಾಯಸಾಃ ಪ್ರತಿಗೃಹ್ಣಂತು ಭೂಮೌ ಪಿಂಡಂ ಮಯಾರ್ಪಿತಂ

"ಪೂರ್ವ, ಪಶ್ಚಿಮ, ವಾಯುವ್ಯ, ದಕ್ಷಿಣ, ನೈಋತ್ಯ ದಿಕ್ಕುಗಳಲ್ಲಿರುವ ವಾಯಸ (ಕಾಗೆ)ಗಳು ನನ್ನಿಂದ ಭೂಮಿಯಲ್ಲಿ ಕೊಟ್ಟಿರುವ ಪಿಂಡವನ್ನು ತೆಗೆದುಕೊಳ್ಳಲಿ" ಎಂದು ಹೇಳಿ, ಕೊಡಬೇಕು.

ಅನಂತರ ದರ್ಭಪಾಣಿ (ಪವಿತ್ರವನ್ನು ಧರಿಸಿ) ಯಾಗಿ ಬ್ರಹ್ಮತೀರ್ಥ ದಲ್ಲಿ ಸ್ನಾನ ಮಾಡಬೇಕು. ಈ ರೀತಿ ಮೂರನೆಯ ದಿವಸದ ಕಾರ್ಯ ವನ್ನು ಸುಧೀಮಂತನು ಮುಗಿಸಿ, ಗದಾಧರನಿಗೆ ನಮಸ್ಕರಿಸಿ, ಬ್ರಹ್ಮಚರ್ಯಪರ ನಾಗಿ ವಾಸಿಸಬೇಕು.

ನಾಲ್ಕನೆಯ ದಿನ ಫಲ್ಗುತೀರ್ಥದಲ್ಲಿ ಸ್ನಾನಾದಿಗಳನ್ನು ಆಚರಿಸಿ, ಗಯಾ ಶಿರಸ್ಸಿನಲ್ಲಿ ಶ್ರಾದ್ಧವನ್ನು ಮಾಡಿ ವಿಷ್ಣುಪದದಲ್ಲಿ ಪಿಂಡವನ್ನರ್ಪಿಸ ಬೇಕು. ಅಲ್ಲಿ ಸಾಕ್ಷಾದ್ಗಯಾ ಸಿರಸ್ಸು ಫಲ್ಗುತೀರ್ಥವನ್ನಾಶ್ರಯಿಸಿರು ವುದು.

ಕ್ರೌಂಚಪಾದವನ್ನಾರಂಭಿಸಿ ಫಲ್ಗುತೀರ್ಥದವರೆವಿಗೆ ಸಾಕ್ಷಾದ್ಗಯಾ ಶಿರಸ್ಸು. ಗಯಾಶಿರದಲ್ಲಿ ನಗಾದಿ (ಪರ್ವತ ಮೊದಲಾದವು) ಗಳು ಸಾಕ್ಷಾ

ತ್ಫಲ್ಗು ತೀರ್ಥವು. ಗಯಾಸುರನ ಮುಖವೇ ಇದು. ಅಲ್ಲಿ ಸ್ನಾನಮಾಡಿ ಶ್ರಾದ್ಧವನ್ನಾಚರಿಸಬೇಕು.

ಮೊದಲನೆಯವನಾದ ಗದಾಧರದೇವನು, ವ್ಯಕ್ತಾವ್ಯಕ್ತ ರೂಪನಾಗಿ ವಿಷ್ಣುಪದ ಮೊದಲಾದ ಪದರೂಪದಿಂದ ಪಿತೃಗಳಿಗೆ ಮುಕ್ತಿಯನ್ನು ಕೊಡಲು ಸ್ಥಿತನಾಗಿರುವನು.

1. ಅದರಲ್ಲಿ ದಿವ್ಯವಾದ ವಿಷ್ಣುಪದವು ದರ್ಶನಮಾತ್ರದಿಂದ ಪಾಪಗಳನ್ನು ಪರಿಹರಿಸುವುದು. ಅದನ್ನು ಸ್ಪರ್ಶ ಮಾಡುವುದರಿಂದಲೂ, ಪೂಜಿಸುವುದರಿಂದಲೂ ಪಿತೃಗಳಿಗೆ ಮೋಕ್ಷವನ್ನು ಕೊಡುವುದು. ಇಲ್ಲಿ ಪಿಂಡ ಪ್ರದಾನದಿಂದ ಶ್ರಾದ್ಧಮಾಡಿದ ಮಾನವನು ತನ್ನ ಸಹಸ್ರಕುಲವನ್ನು ಉದ್ಧರಿಸಿ, ವಿಷ್ಣುಲೋಕಕ್ಕೆ ತಲಪಿಸಿ ವಿಷ್ಣುಪದವೆನಿಸಿದ ವೈಕುಂಠಕ್ಕೆ ಮುಟ್ಟಿಸುವನು.
2. ರುದ್ರಪದದಲ್ಲಿ—ಶ್ರಾದ್ಧಮಾಡಿದ ಮನುಜನು ೧೦೦ ಕುಲವನ್ನು ಶಿವಪುರವೆನಿಸಿದ ಕೈಲಾಸಕ್ಕೆ ಒಯ್ಯುತ್ತಾನೆ.
3. ಬ್ರಹ್ಮಪದದಲ್ಲಿ — ಶ್ರಾದ್ಧಮಾಡಿದ ಮಹಾತ್ಮನು ಮಂಗಳಕರವಾದ ಬ್ರಹ್ಮಪುರಕ್ಕೆ ಪಿತೃಗಳನ್ನು ಕರೆದೊಯ್ಯುವನು
4. ದಕ್ಷಿಣಾಗ್ನಿಪದದಲ್ಲಿ—ಶ್ರಾದ್ಧ ಮಾಡಿದವನು ವಾಜಪೇಯಯಾಗ ಫಲವನ್ನು ಪಡೆಯುತ್ತಾನೆ.
5. ಗಾರ್ಹಪತ್ಯಪದದಲ್ಲಿ—ಶ್ರಾದ್ಧಮಾಡಿದವನು ರಾಜಸೂಯಯಾಗ ಮಾಡಿದಷ್ಟು ಫಲವನ್ನು ಹೊಂದುತ್ತಾನೆ.
6. ಚಂದ್ರಪದದಲ್ಲಿ—ಶ್ರಾದ್ಧ ಮಾಡಿದವನು ಅಶ್ವ (ವಾಜಿ) ಮೇಧ ಫಲವನ್ನು ಪಡೆಯುತ್ತಾನೆ.
7. ಸತ್ಯಪದದಲ್ಲಿ—ಶ್ರಾದ್ಧ ಮಾಡಿದವನು ಜ್ಯೋತಿಷ್ಟೋಮ ಫಲವನ್ನು ಹೊಂದುತ್ತಾನೆ.
8. ಆವಸಥ್ಯಪದದಲ್ಲಿ—ಶ್ರಾದ್ಧ ಮಾಡುವನು ಸೋಮಲೋಕವನ್ನು ಹೊಂದುತ್ತಾನೆ.

9. ಚಂದ್ರಪದದಲ್ಲಿ — ಶ್ರಾದ್ಧ ಮಾಡಿದವನು ತನ್ನ ಪಿತೃಗಳನ್ನು ಶಕ್ರ (ಇಂದ್ರ) ಲೋಕಕ್ಕೆ ಒಯ್ದು ಪ್ರವೇಶಮಾಡಿಸುತ್ತಾನೆ.

10. ಇತರ ಪದಗಳಲ್ಲಿ—ಶ್ರಾದ್ಧ ಮಾಡುವವನು ಪಿತೃಗಳನ್ನು ಬ್ರಹ್ಮಲೋಕಕ್ಕೆ ತಲಪಿಸುತ್ತಾನೆ,

11. ಸೂರ್ಯಪದದಲ್ಲಿ—ಶ್ರಾದ್ಧ ಮಾಡಿದವನು, ಪಾಪಿಗಳನ್ನೂ ಸಹ ಶುದ್ಧರನ್ನುಮಾಡಿ ಸೂರ್ಯಲೋಕಕ್ಕೆ ಕಳುಹಿಸುವನು.

12. ಕಾರ್ತಿಕೇಯುಪದದಲ್ಲಿ—ಶ್ರಾದ್ಧ ಮಾಡಿದವನು ತನ್ನ ಪಿತೃಗಳನ್ನು ಶಿವಲೋಕವನ್ನು ತಲಪಿಸುವನು.

13. ಅಗಸ್ತ್ಯಪದದಲ್ಲಿ — ಶ್ರಾದ್ಧಮಾಡಿ ತನ್ನ ಪಿತೃಗಳನ್ನು ಬ್ರಹ್ಮಲೋಕಕ್ಕೆ ಒಯ್ದು ತಲಪಿಸುವನು.

14. ಕಾಸ್ಯವಪದವು—ಸರ್ವಶ್ರೇಷ್ಠವೆನಿಸಿದೆ. ಅಲ್ಲಿ ವಿಷ್ಣುಪದ, ರುದ್ರಪದ, ಬಹ್ಮಪದಗಳು, ಸರ್ವಶ್ರೇಷ್ಠಗಳೆನಿಸಿವೆ.

ಪ್ರಾರಂಭದಲ್ಲೂ, ಸಮಾಪ್ತಿಯಲ್ಲೂ, ಅವುಗಳಲ್ಲಿ ಅನ್ಯತಮಗಳೆನಿಸಿವೆ. ಅಲ್ಲಿ ಶ್ರಾದ್ಧ ಮಾಡುವವನಿಗೆ ಶ್ರೇಯಸ್ಸು ಉಂಟಾಗುವುದು.

ಪೂರ್ವದಲ್ಲಿ ಭರದ್ವಾಜ ಋಷಿಗಳು ದಿವ್ಯವಾದ ಕಾಶ್ಯಪ ಪದದಲ್ಲಿ ಶ್ರಾದ್ಧವನ್ನು ವಿಧ್ಯುಕ್ತ ರೀತಿಯಲ್ಲಿ ಮಾಡಿ, ಪಿತ್ರಾದಿಗಳಿಗೆ ಪಿಂಡವನ್ನು ಕೊಡಲು ಉದ್ಯುಕ್ತರಾದರು. ಆಗ ಆ ಪದವನ್ನು ಭೇದಿಸಿಕೊಂಡು ಬಿಳಿಯ ಮತ್ತು ಕರಿಯ ಎರಡು ಕೈಗಳು ಹೊರಹೊರಟು ಬಂದವು. ಆ ಎರಡು ಹಸ್ತಗಳನ್ನು ಕಂಡು ಪಿತೃ ವಿಷಯದಲ್ಲಿ ಸಂಶಯವುಂಟಾಯಿತು. ಆಗ ತನ್ನ ತಾಯಿಯಾದ ಶಾಂತಾದೇವಿಯನ್ನು ಕುರಿತು: ಭರದ್ವಾಜರು "ತಾಯಿಯೇ, ಅಮ್ಮಾ, ಈ ಕಶ್ಯಪ ಪದದಲ್ಲಿ, ಶುಕ್ಲ ಹಸ್ತದಲ್ಲಿ ಅಥವಾ ಕೃಷ್ಣ ಹಸ್ತದಲ್ಲಿ ಇವುಗಳಲ್ಲಿ ಯಾವುದರಲ್ಲಿ ನಾನು ಪಿಂಡವನ್ನು ಕೊಡಬೇಕು ? ತಾಯಿಯೇ, ನಿನಗೆ ತಿಳಿದಿದೆ. ನನ್ನ ತಂದೆ ಯಾರು ಹೇಳು." ಎಂಬ ಈ ರೀತಿಯಾದ ಧೀಮಂತನಾದ ಮಗನಾದ ಭರದ್ವಾಜನ ಮಾತನ್ನು ಕೇಳಿ.

ಶಾಂತಾ ದೇವಿಯು — (ಪ್ರಸನ್ನ ಮುಖದಿಂದ ನಗುತ್ತಾ ಶ್ರಾದ್ಧ ಪ್ರದಾನ ಮಾಡುತ್ತಿದ್ದ ಮಗನನ್ನು ಕುರಿತು)

"ಎಲೈ ಮಹಾಪ್ರಾಜ್ಞನೇ, ಭೋ ಭರದ್ವಾಜ, ಪಿಂಡವನ್ನು ಕೃಷ್ಣವರ್ಣ ವುಳ್ಳವ (ನಕ್ಕೈಲಿ) ನಿಗೆ ಕೊಡು" ಎಂದಳು.

ಆಗ ಭರಧ್ವಾಜನು ಪಿಂಡ ಕೊಡಲು ಉದ್ಯುಕ್ತನಾಗಲು, ಶ್ವೇತ (ಶುಕ್ಲ) ನು ಪ್ರತ್ಯಕ್ಷನಾಗಿ ದರ್ಶನ ಕೊಟ್ಟು, ಮಗನನ್ನು ಕುರಿತು, "ಪುತ್ರ, ನೀನು ನನ್ನ ಔರಸ ಪುತ್ರನು ; ನನಗೆ ಕೊಡು" ಎಂದನು. ಕೃಷ್ಣನು "ನೀನು ನನ್ನ ಕ್ಷೇತ್ರಜನು, ಆದುದರಿಂದ, ನನಗೆ ಪಿಂಡವನ್ನು ಕೊಡು" ಎಂದನು. ಶುಕ್ಲನು "ಈಕೆಯು ಸ್ವೈರಿಣಿಯು" ಆದುದರಿಂದ ನೀನು ನನ್ನ ಔರಸನು" ಎಂದು ಹೇಳಿದನು.

ಸ್ವೈರಿಣಿಯಿಂದ ಜನಿಸಿದವನು ಮೊದಲು ಕ್ಷೇತ್ರಿಗೂ, ಅನಂತರ ಬೀಜಿ ನಿಗೂ ಪಿಂಡವನ್ನು ಕೊಟ್ಟನು. ಅನಂತರ ಭಕ್ತಿಯಿಂದ ಮಹಾಮತಿಯಾದ ಭರದ್ವಾಜನು ಪಿಂಡಗಳನ್ನು ಅವರಿಬ್ಬರಿಗೂ ಕೊಟ್ಟು, ಅವರು (ಪಿತೃಗಳು) ಪ್ರತ್ಯಕ್ಷ ಭಾಷಣ ಮಾಡಿದುದರಿಂದ (ಮಾತನಾಡಿದುದರಿಂದ,) ತಾನು ಕೃತ ಕೃತ್ಯನಾದೆನೆಂದು ತಿಳಿದನು.

ಭೀಷ್ಮಾಚಾರ್ಯರು ವಿಷ್ಣುಪದದಲ್ಲಿ ಶ್ರಾದ್ಧದಲ್ಲಿ ತನ್ನ ಪಿತೃಗಳನ್ನು ಆಹ್ವಾನಿಸಿ (ಕರೆದು) ವಿಧ್ಯುಕ್ತ ರೀತಿಯಲ್ಲಿ ಶ್ರಾದ್ಧವನ್ನು ಮಾಡಿ ಪಿಂಡ ಕೊಡಲು ಉದ್ಯುಕ್ತರಾಗಲು ತಂದೆಯಾದ ಶಂತನುವಿನ (ಹಸ್ತಗಳೆರಡೂ) ಗಯಾ ಶಿರಸ್ಸಿನಲ್ಲಿ ಹೊರಬಂದವು. ಭೀಷ್ಮರು–ಕೈಲಿ ಕೊಡುವ ಅಧಿಕಾರವಿಲ್ಲ ವಾಗಿ ಪಿಂಡವನ್ನು ಭೂಮಿಯಲ್ಲಿ ಕೊಟ್ಟರು. ಆಗ ಶಂತನು ಚಕ್ರವರ್ತಿಯು ಸಂತುಷ್ಟನಾಗಿ "ನೀನು ಶಾಸ್ತ್ರಾರ್ಥದಲ್ಲಿ ದೃಢಮತಿಯುಳ್ಳವನು. ಆದುದರಿಂದ ತ್ರಿಕಾಲಜ್ಞಾನಿಯಾಗು. ನಿನಗೆ ಕೊನೆಗಾಲದಲ್ಲಿ ವಿಷ್ಣುವೇ ಗತಿಪ್ರದನಾಗುವ ನಾಗಿ ನಿನಗೆ ಸ್ವೇಚ್ಛಾ ಮರಣ (ನೀನು ಇಚ್ಛಿಸಿದಾಗ ಮರಣ) ವಾಗಲಿ" ಎಂದು ಹೇಳಿ ಮುಕ್ತನಾದನು.

ಶ್ರೀರಾಮನು ರಮ್ಯವಾದ ರುದ್ರಪದದಲ್ಲಿ ಪಿಂಡವನ್ನು ಅರ್ಪಿಸಲು ಉದ್ಯುಕ್ತನಾದಾಗ, ತಂದೆಯಾದ ದಶರಥನು ತನ್ನ ಕೈಯನ್ನು ಸ್ವರ್ಗದಿಂದ

ಚಾಚಿ ಅಲ್ಲಿಗೆ ಬಂದನು. ರಾಮನು ಪಿಂಡವನ್ನು ಕೈಲಿ ಕೊಡಲಿಲ್ಲವು. ರುದ್ರ ಪದದಲ್ಲಿ ಕೊಟ್ಟನು. ಶಾಸ್ತ್ರಾರ್ಥದ ಅತಿಕ್ರಮದಿಂದ ಭೀತನಾದ ದಶರಥನು ರಾಮನನ್ನು ಕುರಿತು "ನಾನು ನಿನ್ನಿಂದ ತಾರಿತನಾದೆನು. ಪಾರಾಗಿ ರುದ್ರಪದ ದಲ್ಲಿ ಪಿಂಡಪ್ರದಾನ ಮಾಡಿದ್ದರಿಂದ ನನಗೆ ರುದ್ರಲೋಕವು ಲಭಿಸಿತು. ಹಸ್ತ ದಲ್ಲಿ ಪಿಂಡವನ್ನು ಕೊಟ್ಟರೆ ಸ್ವರ್ಗಗತಿಯೂ ಇಲ್ಲವು, ನೀನು ಬಹುಕಾಲ ರಾಜ್ಯಭಾರಮಾಡಿ, ನಿನ್ನ ನಿಜ ಜನರನ್ನು ಧರ್ಮದಿಂದ ಪಾಲನೆ ಮಾಡುತ್ತಾ, ಸದಕ್ಷಿಣಾಕ ಸರ್ವಸ್ವದಾನದಿಂದ ಯಜ್ಞಗಳನ್ನು ಮಾಡಿ, ಕೊನೆಗೆ ವಿಷ್ಣು ಲೋಕಕ್ಕೆ ಹೋಗುವಿ, ಅಯೋಧ್ಯೆಯ ಜನರೊಂದಿಗೆ ಸಕಲ ಕ್ರಿಮಿಕೀಟಾದಿ ಗಳಿಂದ ಕೂಡಿ ಸರ್ವರೊಡನೆ ಪರಂಧಾಮಕ್ಕೆ ತೆರಳಿ, ಅವರಿಗೆಲ್ಲ ಮುಕ್ತಿಪ್ರದ ನಾಗುವಿ." ಎಂದು ಹೇಳಿ ಆ ದಶರಥರಾಜನು ಉತ್ತಮವಾದ ರುದ್ರ ಲೋಕಕ್ಕೆ ಹೊರಟು ಹೋದನು.

ಕನಕೇಶನನ್ನು ಕೇದಾರೇಶ, ನಾರಸಿಹ್ಮ, ವಾಮನರನ್ನು ರಥ ಮಾರ್ಗದಲ್ಲಿ ಭಕ್ತಿಯಿಂದ ಪೂಜಿಸಿದವರು ಸರ್ವ ಪಿತೃಗಳನ್ನೂ ದಾಟಿಸಿ ಉದ್ಧಾರ ಮಾಡುತ್ತಾರೆ.

ಯಾವನು ಗಯಾಶಿರಸ್ಸಿನಲ್ಲಿ ಯಾರ ಹೆಸರು ಗೋತ್ರಗಳನ್ನು ಉಚ್ಚರಿಸಿ ಉದ್ದೇಶಪೂರ್ವಕವಾಗಿ ಪಿಂಡವನ್ನು ಹಾಕುತ್ತಾನೆಯೋ, ಅಂಥವನ ಪಿತೃಗಳು ನರಕದಲ್ಲಿದ್ದವರು ಸ್ವರ್ಗಕ್ಕೂ, ಸ್ವರ್ಗದಲ್ಲಿದ್ದವರು ಮೋಕ್ಷಕ್ಕೂ ಹೋಗು ತ್ತಾರೆ.

ಗಯಾ ಶಿರಸ್ಸಿನಲ್ಲಿ ಯಾವನು ಶಮೀಪತ್ರ (ಮಯೂರಾಂಡ) ಪ್ರಮಾಣ ದಿಂದ ಪಿಂಡವನ್ನು ಕೊಡುತ್ತಾರೆಯೋ ಕಂದಮೂಲ ಫಲಾದಿಗಳಿಂದಲಾದರೂ ಯಾರು ಪಿತೃಗಳಿಗೆ ಕೊಡುತ್ತಾರೆಯೋ ಅವರು ಪಿತೃಗಳಿಗೆ ಸ್ವರ್ಗಪ್ರದರಾಗು ವರು. ಅವರ ಪಿತೃಗಳು ಸ್ವರ್ಗಕ್ಕೆ ಹೋಗುತ್ತಾರೆ. ವಿಷ್ಣುಪದವೇ ಮೊದ ಲಾದ ಯಾವ ಪಾದಗಳು ಅಲ್ಲಿ ಕಾಣುತ್ತವೆಯೋ ಆಯಾ ಪದದಲ್ಲಿ ಶ್ರಾದ್ಧ ಮಾಡುವುದರಿಂದ ಆಯಾ ಹೆಸರಿನ ಲೋಕಗಳಿಗೆ ಕರ್ತನು ತನ್ನ ಪಿತೃಗಳನ್ನು ಒಯ್ದು ತಲಪಿಸುವನು.

ಅಲ್ಲಿ ಸರ್ವತ್ರ ಮುಂಡ ಪೃಷ್ಠಾದ್ರಿಯ ಈ ಪದಗಳಿಂದ ಲಕ್ಷಿತವಾ ಗಿದೆ ಅಲ್ಲಿ ಪೂಜಿತರಾದ ಪಿತೃಗಳು ಬ್ರಹ್ಮಪದಕ್ಕೆ ಹೋಗುತ್ತಾರೆ.

ಗಯಾಸುರನ ಶಿರಸ್ಸು ಗದೆಯಿಂದ ಹೊಡೆದು ಎರಡು ಭಾಗವಾಗಿ ಮಾಡಲ್ಪಟ್ಟ ನಂತರದ ಗದೆಯು ತೀರ್ಥದಲ್ಲಿ ಕ್ಷಾಲಿತವಾದ್ದ (ತೊಳೆಯಲ್ಪಟ್ಟದ್ದ) ರಿಂದ ಅದು ಗದಾಲೋಲವೆನಿಸಿ ಸ್ಮೃತವಾಗಿದೆ.

ಮುನಿಯು ಕ್ರೌಂಚ (ಪಕ್ಷಿ) ರೂಪದಿಂದ ಮುಂಡಪೃಷ್ಠದಲ್ಲಿ ತಪಸ್ಸನ್ನಾಚರಿಸಿದ್ದರಿಂದ ಆತನ ಪಾದದ (ಚಿಹ್ನೆ) ಅಂಕವುಳ್ಳದ್ದಾಗಿ ಕ್ರೌಂಚಪಾದವೆಂದು ಸ್ಮೃತವಾಯಿತು.

ವಿಷ್ಣ್ವಾದಿ ಪಾದಗಳು, ಎಲ್ಲಿ ಲಿಂಗರೂಪವಾಗಿ (ಚಿಹ್ನಿತವಾಗಿ) ಸ್ಥಿತಗಳಾಗಿವೆಯೋ, ಅಲ್ಲಿ ದೇವಾದಿ ತರ್ಪಣಗಳನ್ನು ಮಾಡಿ, ರುದ್ರಪದಾದಿಗಳಲ್ಲಿ ಶ್ರಾದ್ಧವನ್ನು ಮಾಡಬೇಕು. ಹೀಗೆ ಗಯಾದಲ್ಲಿ 4 ನೇ ದಿವಸ ಕೃತ್ಯವು. ಹಾಗೆ ಆಚರಿಸಿದ ಕರ್ಮಾಧಿಕಾರಿಯು ಪರಿಶುದ್ಧನಾಗಿ ಶ್ರಾದ್ಧಮಾಡಿದ್ದರಿಂದ ಬ್ರಹ್ಮಲೋಕವನ್ನು ಹೊಂದಲು ಭಾಗಿಯಾ (ಅರ್ಹನಾ) ಗುತ್ತಾನೆ.

ಶಿಲಾಸ್ಥಿತಗಳಾದ ತೀರ್ಥಗಳಲ್ಲಿ ಸ್ನಾನಮಾಡಿ, ತರ್ಪಣಕೊಟ್ಟು ಪಿಂಡಪ್ರದಾನ ಪೂರ್ವಕ ಶ್ರಾದ್ಧವನ್ನು ಯಾರನ್ನು ಉದ್ದೇಶಿಸಿ ಮಾಡುತ್ತಾನೆಯೋ ಅಂಥವರು ಬ್ರಹ್ಮ (ಸತ್ಯ) ಲೋಕಕ್ಕೆ ಹೋಗುತ್ತಾರೆ. ಮತ್ತು ಅಲ್ಲಿ.

" ಸ್ಥಾಸ್ಯಂತಿ ಚ ರಮಿಷ್ಯಂತಿ ಯಾವದಾಭೂತಸಂಪ್ಲವಂ "

ಮಹಾಪ್ರಳಯವಾಗುವವರೆವಿಗೂ, ಇದ್ದು ವಾಸಿಸುತ್ತಾ ಸದಾ ಆನಂದದಿಂದ ಭಗವತ್ಸೇವಾದಿಗಳಿಂದ ರಮಿಸುತ್ತಿರುವರು. ಸಂತೋಷದೀದ ಕ್ರೀಡಿಸುವರು.

ದೇಹಂ ತ್ಯಕ್ತ್ವಾ ಶಿಲಾಪೃಷ್ಠೇ ಸ್ವೇದಜಾಂಡಜರಾಯುಜಾಃ ।
ಗಚ್ಛಂತಿ ವಿಷ್ಣುಸಾಯುಜ್ಯಂ ಕುಲೈಃ ಸಪ್ತಶತೈಃ ಸಹ ॥

ಗಯಾ ಶಿರಸ್ಸಿನಲ್ಲಿ ಶಿಲಾ ಪೃಷ್ಠದಲ್ಲಿ ದೇಹವನ್ನು ತ್ಯಜಿಸಿ ಮೃತಿಹೊಂದಿದ ಸ್ವೇದಜವೆನಿಸಿದ ಹೇನು, ತಗಣಿ, ಸೊಳ್ಳೆ ಮೊದಲಾದ ಪ್ರಾಣಿಗಳೂ, ಅಂಡಜವೆನಿಸಿದ ಪಕ್ಷಿಜಾತಿ ಪ್ರಾಣಿಗಳೂ, ಜರಾಯುಜರೆನಿಸಿದ ಮನುಷ್ಯ ಪಶು ಮೊದಲಾದ ಸರ್ವಜೀವರೂ, ತಮ್ಮ ಏಳುನೂರು ಕುಲಗಳೊಂದಿಗೆ ವಿಷ್ಣುಸಾಯುಜ್ಯವನ್ನು ಪಡೆಯುವರು.

ಯಾತ್ರೆಯ ಐದನೆಯ ದಿವಸ "ಗದಾಲೋಲತೀರ್ಥ"ದಲ್ಲಿ ಸ್ನಾನಾದಿಗಳನ್ನು ಪೂರ್ವದಂತೆ ಮಾಡಿ, ಪಿಂಡದಾನ ಪೂರ್ವಕ ಶ್ರಾದ್ಧವನ್ನು ಮಾಡಬೇಕು. ಆಮೇಲೆ ಅಕ್ಷಯವಟದಲ್ಲಿ ಮನುಜನು ಶ್ರಾದ್ಧಾದಿಗಳನ್ನು ಮಾಡಿ ಪಿತೃಗಳನ್ನು ಬ್ರಹ್ಮಪುರಕ್ಕೆ ಒಯ್ದು ತಲಪಿಸುವನು. ಅನಂತರ ಬ್ರಹ್ಮನಿಂದ ಕಲ್ಪಿತರಾದ ವಿಪ್ರರಿಗೆ ಪೂಜೆಮಾಡಿ ಭೋಜನವನ್ನು ಮಾಡಿಸಬೇಕು. ಅಕ್ಷಯವಟದಲ್ಲಿ ಪ್ರಯತ್ನಪೂರ್ವಕವಾಗಿ ಶ್ರಾದ್ಧವನ್ನು ಮಾಡಿ ವಟೇಶನನ್ನು ಸಮಾಹಿತಮನಸ್ಕನಾಗಿ ದರ್ಶನಮಾಡಿ, ಭಕ್ತಿಯಿಂದ ಪೂಜಿಸಿ, ಸನಾತನವೂ, ಅಕ್ಷಯವೂ ಆದ ಬ್ರಹ್ಮಪುರಕ್ಕೆ ಪಿತೃಗಳನ್ನು ಕಳುಹಿಸಬೇಕು.

ಗದಾಲೋಲೇ ಮಹಾತೀರ್ಥೇ ಗದಾಪ್ರಕ್ಷಾಳನೇ ವರೇ ।
ಸ್ನಾನಂ ಕರೋಮಿ ಶುದ್ಧ್ಯರ್ಥಮಕ್ಷಯ್ಯಾಯ ಸ್ವರಾಪ್ತಯೇ

ಏಕಾಂತರೇ ವಟಸ್ಯಾಗ್ರೇ ಯಃ ಶೇತೇ ಯೋಗನಿದ್ರಯಾ
ಬಾಲರೂಪಧರಸ್ತಸ್ಮೈ ನಮಸ್ತೇ ಯೋಗಶಾಯಿನೇ ॥

ಸಂಸಾರವೃಕ್ಷಶಸ್ತ್ರಾಯಾ ಶೇಷಪಾಪಕ್ಷಯಾಯ ಚ
ಅಕ್ಷಯ್ಯಬ್ರಹ್ಮದಾತ್ರೇ ಚ ನಮೋಽಕ್ಷಯ್ಯ ವಟಾಯ ವೈ

ಗದಾಯುಧವನ್ನು ತೊಳೆದುದರಿಂದ ಉತ್ಪನ್ನವಾದ ಉತ್ಕೃಷ್ಟವಾದ ಗದಾಲೋಲವೆಂಬ ಮಹಾತೀರ್ಥದಲ್ಲಿ ಶುದ್ಧನಾಗಿ ಅಕ್ಷಯವಾದ, ನಾಶರಹಿತವಾದ ಸ್ವಲೋಕ (ವೈಕುಂಠ) ಪ್ರಾಪ್ತಿಗಾಗಿ ಸ್ನಾನ ಮಾಡುತ್ತೇನೆ, ಪ್ರಲಯದಲ್ಲಿ ಏಕಾಂತರಾಗಿ ವಟವೃಕ್ಷದ ಅಗ್ರದಲ್ಲಿ ಯಾವನು ಯೋಗನಿದ್ರೆಯಿಂದ ಮಲಗಿರುವನೋ ಅಂಥಾ "ಬಾಲರೂಪವನ್ನು ಧರಿಸಿದ ಯೋಗಶಾಯಿಯಾದ ಮುಕುಂದನೇ, ನಿನಗೆ ನಮಸ್ಕಾರವು. ಸಂಸಾರವೆಂಬ ವೃಕ್ಷವನ್ನು ಕತ್ತರಿಸಲು ಶಸ್ತ್ರದಂತಿರುವ, ಅಶೇಷ ಪಾಪಗಳನ್ನೂ ನಿಶೇಷವಾಗಿ ನಾಶಮಾಡಿ, ಅಕ್ಷಯ್ಯವಾದ ಬ್ರಹ್ಮಪದವನ್ನು ಕೊಡುವ, ಅಂಥ ಅಕ್ಷಯ್ಯ (ಶಾಶ್ವತ) ವಟರೂಪಿಯಾದ ನಿನಗೆ ನಮಸ್ಕಾರವು.

ಕಲೌ ಮಾಹೇಶ್ವರಾಲೋಕಾ ಯೇನ ತಸ್ಮಾದ್ಗದಾಧರಃ
ಲಿಂಗರೂಪೋಽಭವತ್ತಂ ಚ ವಂದೇ ತ್ವಾಂ ಪ್ರಪಿತಾಮಹಂ

ಕಲಿಯುಗದಲ್ಲಿ ಲೋಕವೇ (ಜನರೆಲ್ಲ) ಮಾಹೇಶರು ಎಂದರೆ ಮಹೇಶನ ಅನುಯಾಯಿ ಭಕ್ತರಾದುದರಿಂದ ಗದಾಧರನು ಲಿಂಗರೂಪನಾದನು. ಅಂಥ

ಪ್ರಪಿತಾಮಹ (ಪಿತಾಮಹ-ಬ್ರಹ್ಮ-ಅವನ ತಂದೆ ಪ್ರಪಿತಾಮಹ-ವಿಷ್ಣು ಪ್ರ ಗದಾಧರನ) ನನ್ನು ವಂದಿಸುತ್ತೇನೆ. ಅಂಥ ಪ್ರಪಿತಾಮಹನನ್ನು ನಮ ಸ್ಕರಿಸಿ, ಪಿತೃಗಳನ್ನು ರುದ್ರಪದಕ್ಕೆ ತಲಪಿಸಬೇಕು.

ಹೇತಿ ಎಂಬ ಅಸುರನನ್ನು ಗದೆಯಿಂದ ಶಿರಸ್ಸಿನಲ್ಲಿ ಹೊಡೆ ಎರಡು ಭಾಗವಾಗಿ ಸೀಳಿದ ನಂತರ ಆ ಗದೆಯು ಯಾವ ಪ್ರಭುವಿನಿಂದ (ಕ್ಷಾಲಿತ) ತೊಳೆಯಲ್ಪಟ್ಟಿತೋ, ಅದೇ ತೀರ್ಥವೇ ಗದಾಲೋಲ ಎಂದು ಸರ್ವತೀರ್ಥ ಗಳಲ್ಲಿ ಅತ್ಯಂತ ಶ್ರೇಷ್ಠವಾದುದೆಂದು ಪ್ರಖ್ಯಾತವಾಗಿದೆ.

ಪೂರ್ವದಲ್ಲಿ ಬ್ರಹ್ಮಪುತ್ರನಾದ ಹೇತಿಯು ಅದ್ಭುತವೂ, ಮಹತ್ತರವೂ ಆದ ಅಗಾಧ ತಪಸ್ಸನ್ನು ಮಾಡಿದನು. ತಪಸ್ಸಿನಿಂದ ಬ್ರಹ್ಮಾದಿಗಳನ್ನು ಸಂತೋಷಪಡಿಸಿ, ವರಪ್ರದರಿಂದ ವರವನ್ನು, ವರಿಸಿ ಪ್ರಾರ್ಥಿಸಿದನು. ದೈತ್ಯಾದಿ ಗಳಿಂದಲೂ, ಶಸ್ತ್ರಾದಿಗಳಿಂದಲೂ, ವಿವಿಧಗಳಾದ ಮನುಜರಿಂದಲೂ, ಕೃಷ್ಣ, ಈಶಾನ ಮೊದಲಾದ ಚಕ್ರಾದಿಗಳಿಂದಲೂ ನಾನು ವಧ್ಯನಾಗಬಾರದು, ನನಗೆ ಮರಣವಾಗಕೂಡದು" ಎಂದು ಪ್ರಾರ್ಥಿಸಿ ಮಹಾ ಬಲವುಳ್ಳವನಾದನು. ಅವ ಮಗಳು "ತಥಾಸ್ತು" ಹಾಗೆಯೇ ಆಗಲಿ ಎಂದು ಹೇಳಿ ಅದೇ ಪತಗಳಲ್ಲ ಅಂತರ್ಧಾನ ಹೊಂದಿದರು. ಅನಂತರ ಹೇತಿಯು ದೇವತೆಗಳನ್ನೆಲ್ಲಾ ಪರಾ ಜಿತರನ್ನಾಗಿ ಮಾಡಿ, ಸರ್ವರನ್ನೂ ಗೆದ್ದು, ಜಯಿಸಿದನು. ಹೇತಿಗೆ ಎಲ್ಲ ದೇವತೆಗಳೂ ಸೇರಿ ಇಂದ್ರತ್ವವನ್ನು ಅರ್ಪಿಸಿಕೊಟ್ಟರು. ಆಗ, ಬ್ರಹ್ಮರುದ್ರಾದಿ ಗಳೆಲ್ಲರೂ ಶ್ರೀಹರಿಯನ್ನು ಶರಣುಹೊಂದಿ "ಹೇತಿಯನ್ನು ನಿಗ್ರಹಿಸಿ ಗೆಲ್ಲು" ಎಂದು ಪ್ರಾರ್ಥಿಸಿದರು. ಅವರನ್ನು ಕುರಿತು ಶ್ರೀಹರಿಯು ಎಲೈ ದೇವತೆಗಳಿರಾ, "ಈ ಹೇತಿಯು, ಸುರಾಸುರರಿಂದಲೂ ಅವಧ್ಯನು ಅವನನ್ನು ಸಂಹರಿಸಲು ನನಗೆ ನೀವು ಬ್ರಹ್ಮಾಸ್ತ್ರವನ್ನು ಕೊಡಿ ಅದರಿಂದ ಸಂಹರಿಸುವೆನು" ಎಂದು ಹೇಳಲು, ಆ ದೇವತೆಗಳು ವಿಷ್ಣುವಿಗೆ ಗದೆಯನ್ನು ಕೊಟ್ಟರು. "ಉಪೇಂದ್ರನೇ ನೀನು ಈ ಹೇತಿಯನ್ನು ಇದರಿಂದ ನಿಗ್ರಹಿಸಿ ಗೆಲ್ಲು" ಎಂದು ಬ್ರಹ್ಮಾದಿ ದೇವತೆಗಳು ನುಡಿದರು. ಹೀಗೆ ದೇವತೆಗಳಿಂದ ಪ್ರಾರ್ಥಿತನಾದ ಗದಾಧರನು ಆ ಗದೆಯನ್ನು ಧರಿಸಿ ಯುದ್ಧದಲ್ಲಿ ಇ ಹೇತಿನಾಮಕ ಅಸುರನನ್ನು ಹೊಡೆದು ಸಂಹರಿಸಿ ಸ್ವರ್ಗಾಧಿಪತ್ಯವನ್ನು ದೇವತೆಗಳಿಗೆ ಕೊಟ್ಟನು.

ಉಪವಾಸಮಾಡಿ ಮಹಾನದಿಯಲ್ಲಿರುವ ಗಾಯತ್ರೀ ತೀರ್ಥದಲ್ಲಿ ಗಾಯತ್ರಿಯ ಮುಂಭಾಗದಲ್ಲಿ ಸ್ನಾನಮಾಡಿ ಸಂಧ್ಯಾವಂದನೆಯನ್ನು ಆಚರಿಸಬೇಕು. ಪಿಂಡದಾನ ಪೂರ್ವಕ ಶ್ರಾದ್ಧವನ್ನು ಮಾಡಿ ಕುಲವನ್ನು ಬ್ರಾಹ್ಮಣತ್ವವನ್ನು ಹೊಂದಿಸಬೇಕು.

ಸಮುದ್ಯತ ತೀರ್ಥದಲ್ಲಿ ಸ್ನಾನಮಾಡಿ ಸಾವಿತ್ರಿಯ ಮುಂಭಾಗದಲ್ಲಿ ಮನುಜನು ಸಂಧ್ಯಾ (ಮಾಧ್ಯಾಹ್ನಿಕ) ಉಪಾಸನೆ ಮಾಡಿ ಪಿತೃಗಳನ್ನು ಬ್ರಹ್ಮನ ಮಂದಿರ (ಸತ್ಯಲೋಕ)ಕ್ಕೆ ಕಳುಹಿಸಬೇಕು.

ಪ್ರಾಚೀ (ಪೂರ್ವ) ಸರಸ್ವತಿಯಲ್ಲಿ ಸ್ನಾನಮಾಡಿ, ಸರಸ್ವತಿಯ ಮುಂಭಾಗದಲ್ಲಿ ಸಾಯಂಕಾಲ ಸಂಧ್ಯಾವಂದನೆ ಮಾಡಿದವನು ತನ್ನ ಕುಲವನ್ನು ಸರ್ವಜ್ಞತ್ವವನ್ನು ಹೊಂದಿಸುವನು. ಇವುಗಳಿಂದ ಬಹು ಜನ್ಮಗಳಲ್ಲಿ ಸಂಧ್ಯಾವಂದನೆ ಮಾಡದಿರುವ ಲೋಪದಿಂದ ಜನಿಸುವ ಸರ್ವ ಪಾಪಗಳೂ ನಾಶವಾಗಿ ಮಾನವನು ವಿಶುದ್ಧನಾಗುತ್ತಾನೆ.

ಲೀಲೆಹಾನ ತೀರ್ಥದಲ್ಲಿ, ಭರತಾಶ್ರಮದಲ್ಲಿ ವಿಷ್ಣುಪಾದದಿಂದ ಚಿನ್ಹಿತವಾಗಿರುವ ಗದಾಧರನ ಸಮೀಪದಲ್ಲಿ ಮುಂಡಪೃಷ್ಟದಲ್ಲಿ ಆಕಾಶ ಗಂಗಾ ತೀರ್ಥದಲ್ಲಿ ಗಿರಿಕರ್ಣಿ ಮುಖಗಳಲ್ಲಿ ಶ್ರಾದ್ಧಮಾಡಿ ಪಿಂಡ ಹಾಕಿದವನು ಪಿತೃಗಳನ್ನು ಬ್ರಹ್ಮಲೋಕಕ್ಕೆ ತಲಪಿಸುವನು.

ಗೋದಾವೈತರಣ್ಯೆಯಲ್ಲಿ ಸ್ನಾನ ಮಾಡಿದವನು ಏಳು ಕುಲಗಳನ್ನು ಉದ್ಧರಿಸುವನು. ದೇವನದಿಯಲ್ಲಿ ಗೋಪ್ರಚಾರದಲ್ಲಿ ಮತ್ತು ಮಾನಸ ಪದದಲ್ಲಿ, ಪುಷ್ಕರಿಣಿಯಲ್ಲಿ ಗದಾಲೋಲ ತೀರ್ಥದಲ್ಲಿ ಹಾಗೆಯೇ ಅಪುರಕ ತೀರ್ಥದಲ್ಲಿ ಕೋಟಿ ತೀರ್ಥ ರುಕ್ಮಿ ಕುಂಡಗಳಲ್ಲಿ ಪಿಂಡ ಪ್ರದಾನಮಾಡಿದ ಪಿತೃತಾರಕನು ತನ್ನ ಪಿತೃಗಳನ್ನು ಸ್ವರ್ಗಕ್ಕೆ ಒಯ್ದು ಕಳುಹಿಸುವನು.

"ಮಾರ್ಕಂಡೆಯೇಶ ಕೋಟೀಶರಬ್ಬರಿಗೂ ನಮಸ್ಕರಿಸಿ "ಪುಣ್ಯಪ್ರದವಾದ ಪಾಂಡುಶಿಲೆಯ ದರ್ಶನಮಾತ್ರದಿಂದ ಸಂಪೂರ್ಣವಾಗಿ ಪೂತಾತ್ಮರಾಗಿ ನರಕದಲ್ಲಿರುವವರನ್ನು ಸ್ವರ್ಗಕ್ಕೆ ಕಳುಹಿಸುತ್ತಾರೆಂದು" ಹೇಳಿ ಪಾಂಡುರಾಜನು ಶಾಶ್ವತವೂ ನಾಶರಹಿತವೂ ಆದ ಸ್ಥಾನಕ್ಕೆ ಹೋದನು.

ಘೃತಕುಲ್ಯಾ, ಮಧುಕುಲ್ಯಾ, ದೇವಿಕಾ ಎಂಬ ಮಹಾನದಿಯು ಅಲ್ಲಿ ಶಿಲೆಯಲ್ಲಿ ಸಂಗತವಾಗಿ ಕೂಡಿ, ಮಧುಶ್ರವಾ ಎಂದು ಪ್ರಕೀರ್ತಿತವಾಗಿದೆ. ಇಲ್ಲಿ ಸ್ನಾನ ಮಾಡುವುದರಿಂದ ಮಾನವನು ಹತ್ತು ಸಹಸ್ರ ಅಶ್ವಮೇಧ ಯಾಗ ಮಾಡಿದ ಫಲವನ್ನು ಪಡೆಯುತ್ತಾನೆ. ಪಿತೃಗಣಗಳಿಗೆ ತರ್ಪಣಮಾಡಿ ಪಿಂಡಪ್ರದಾನ ಶ್ರಾದ್ಧಗಳನ್ನು ಮಾಡಿದ ಮನುಜನು ಸಹಸ್ರ ಕುಲವನ್ನು ಉದ್ಧರಿಸಿ ವಿಷ್ಣುಪುರವೆನಿಸಿದ ವೈಕುಂಠಕ್ಕೆ ಕಳುಹಿಸಿ ತಲಪಿಸುವನು. ಉದ್ಭಿಜ (ಸಸ್ಯ,ಮರ ಗಿಡ)ಗಳು ಸ್ವೇದಜ ಅಂಡಜ ಮತ್ತು ಜರಾಯುಜ ಸಕಲ ಪ್ರಾಣಿಗಳೂ ಮಧುಶ್ರವವನ್ನು ಆಶ್ರಯಿಸಿ ಹೊಂದಿ ಮೃತರಾಗಿ, ವಿಷ್ಣು ಪದಕ್ಕೆ ಹೋಗುವರು.

ದಶಾಶ್ವಮೇಧಿಕ ಮತ್ತು ಹಂಸತೀರ್ಥದಲ್ಲಿ ಶ್ರಾದ್ಧಮಾಡುವುದರಿಂದ ಸ್ವರ್ಗಲೋಕಕ್ಕೆ ಹೋಗುತ್ತಾರೆ. ಹಾಗೆಯೇ ದಶಾಶ್ವಮೇಧ ಹಂಸರುಭಯರನ್ನು ನಮಸ್ಕರಿಸಿದವರು ಶಿವಪುರ (ಕೈಲಾಸ)ಕ್ಕೆ ಹೋಗುತ್ತಾರೆ.

ಮತಂಗನ ಪದದಲ್ಲಿ ಶ್ರಾದ್ಧಕರ್ತನು ಬ್ರಹ್ಮಪುರ (ಸತ್ಯಲೋಕ)ದಲ್ಲಿ ವಾಸಿಸುತ್ತಾನೆ.

ಬ್ರಹ್ಮನು ವಿಷ್ಣು ಮೊದಲಾದವರೊಡಗೂಡಿ ಶಮೀಗರ್ಭವ (ಅರಣಿಯ)ನ್ನು ಮಥನಮಾಡಿದ ಸ್ಥಳದಲ್ಲಿ ಮುಂಥೊಕುಂಡವೆಂಬ ತೀರ್ಥವು ಉತ್ಪನ್ನವಾಯಿತು. ಅದು ಪಿತೃಗಳಿಗೆ ಮುಕ್ತಿಕಾರಕವು, ಅಲ್ಲಿ ತರ್ಪಣ ಮಾಡುವುದರಿಂದಲೂ ಪಿಂಡದಾನ ಮತ್ತು ಶ್ರಾದ್ಧ ಮಾಡುವುದರಿಂದಲೂ ಸ್ನಾನ ಮಾಡುವುದರಿಂದಲೂ, ಮುಕ್ತಿಯನ್ನು ಪಡೆಯುವನು.

ರಾಮೇಶ ಮತ್ತು ಕರಕೇಶ್ವರರಿಂಬ್ಬರಿಗೂ ನಮಸ್ಕರಿಸಿದವನು ಪಿತೃಗಳನ್ನು ಸ್ವರ್ಗಕ್ಕೆ ತಲಪಿಸುವನು.

ಗಯಾಕೂಪದಲ್ಲಿ ಪಿಂಡದಾನ ಮಾಡುವುದರಿಂದ, ಅಶ್ವಮೇಧಯಾಗ ಫಲವನ್ನು ಹೊಂದುತ್ತಾನೆ.

ಭಸ್ಮಕುಂಡದಲ್ಲಿ ಭಸ್ಮಲೇಪನಮಾಡಿಕೊಂಡು ಭಸ್ಮಸ್ನಾನ ಮಾಡಿದವನು ಪಿತೃಗಳನ್ನು ದಾಟಿಸಿ ಉದ್ಧರಿಸುತ್ತಾನೆ.

ನಿಃಕ್ಷೀರಾ ಮತ್ತು ಧೌತಪಾಪ ಸಂಗಮದಲ್ಲಿ ಸ್ನಾನಮಾಡಿದ ನರನು ಪಾಪದಿಂದ ಮುಕ್ತನಾಗುತ್ತಾನೆ.

ರಾಮಪುಷ್ಕರಿಣಿಯಲ್ಲಿ ಶ್ರಾದ್ಧಮಾಡಿದವನು ಪಿತೃಗಳನ್ನು ಬ್ರಹ್ಮ ಲೋಕಕ್ಕೆ ಒಯ್ಯುವನು.

ಸುಷುಮ್ನಾ ಮಹಾನದಿಯಲ್ಲಿ ಸ್ನಾನಮಾಡಿದವನು ತನ್ನ 21 ಕುಲ ಗಳನ್ನು ಉದ್ಧರಿಸುವನು. ವಶಿಷ್ಠೇಸ್ವರನನ್ನು ದರ್ಶನಮಾಡಿ, ನಮಸ್ಕರಿಸಿ ವಶಿಷ್ಟತೀರ್ಥದಲ್ಲಿ ಸ್ನಾನಮಾಡಿದವನು ಅಶ್ವಮೇಧಯಾಗಫಲಕ್ಕೆ ಭಾಗಿ ಯಾಗುವನು. ಧೇನುಕಾರಣ್ಯದಲ್ಲಿ ಪಿಂಡಪ್ರದಾನ ಮಾಡಿದವನೂ ಕಾಮ ಧೇನುಪದಗಳಲ್ಲಿ ಸ್ನಾನಮಾಡಿ ಧೇವರಿಗೆ ನಮಸ್ಕರಿಸಿದವನು ಪಿತೃಗಳನ್ನು ಬ್ರಹ್ಮಲೋಕಕ್ಕೆ ಒಯ್ದು ತಲಪಿಸುವನು.

ಮುಂಡಪೃಷ್ಟ ಸಮೀಪದಲ್ಲಿ ಕರ್ದಮಾಲೆಯಲ್ಲಿ ಗಯಾನಾಭಿ ಯಲ್ಲಿ ಸ್ನಾನಮಾಡಿ ಶ್ರಾದ್ಧಮಾಡಿದವನು ಪಿತೃಗಳನ್ನು ಸ್ವರ್ಗಕ್ಕೆ (ನಯನ ಮಾಡಿ) ಕಳುಹಿಸುವನು. ಚಂಡಿಕೆಗೆ ನಮಸ್ಕರಿಸಿ, ಫಲ್ಗುಚಂಡೀಶ ನಾಮಕನಾದ ಸಂಗಮಾಧೀಶನನ್ನು ಭಕ್ತಿಯಿಂದ ಅರ್ಚಿಸಿ.

ಗಯಾ ಗಜೋ ಗಯಾದಿತ್ಯೋ ಗಾಯತ್ರೀ ಚ ಗದಾಧರಃ ।
ಗಯಾ ಗಯಾಶಿರಶ್ಚೈವ ಷಡ್ಗಯಾ ಮುಕ್ತಿದಾಯಿಕಾಃ ॥

ಗಯಾಗಜ, ಗಯಾದಿದ್ಯ, ಗಾಯತ್ರೀ, ಗದಾಧರ, ಗಯಾ ಗಯಾ ಶಿರವೆಂಬ ಈ ಈ ಆರೂ ಮುಕ್ತಿಯನ್ನು ಕೊಡುವುವು.

ಗಯಾದಲ್ಲಿ ವೃಷೋತ್ಸರ್ಗ ಮಾಡುವುದು (ಹೋರಿಗರುವನ್ನು ಗೂಳಿ ಬಿಡುವುದು) 21 ಕುಲಗಳನ್ನು ಉದ್ಧರಿಸುವುದು.

ಎಲ್ಲೆಲ್ಲಿ ವಿಪ್ರನು ವಿಜೀತೇಂದ್ರಿಯನಾಗಿ ವಾಸಿಸುತ್ತಿರುವನೋ ಅಲ್ಲಿ ಮೊದಲು ಗದಾಧರನನ್ನು ಧ್ಯಾನಿಸಿ ಶ್ರಾದ್ಧವನ್ನು ಪಿಂಡಪ್ರದಾನವನ್ನು ಮಾಡ ಬೇಕು, ಹಾಗೆ ಆಚರಿಸಿದರೆ ಒಂದುನೂರು ಕುಲಗಳನ್ನು ಉದ್ಧರಿಸಿ ಅವ ರನ್ನು ಬ್ರಹ್ಮಲೋಕಕ್ಕೆ ಒಯ್ದು ತಲಪಿಸುವನು.

ಅನಂತರ ಜನಾರ್ದನ ದೇವನನ್ನು ವಿಧ್ಯುಕ್ತರೀತಿಯಲ್ಲಿ ಭಕ್ತಿಯಿಂದ ಅರ್ಚಿಸಿಪೂಜಿಸಿ ದಧ್ಯೋದನ (ಉತ್ತಮ ಮೊಸರು ಅನ್ನ) ದಿಂದ ನೈವೇದ್ಯ

ವನ್ನು ಮಾಡಿ, ಆ ನೈವೇದ್ಯಶೇಷದಿಂದಲೇ ಪಿಂಡಗಳನ್ನು, ಗಯಾಸುರನ ಮುಂಡ ಪೃಷ್ಠದಲ್ಲಿ ಸ್ಥಿತವಾದ (ವಿಷ್ಣುಪಾದ) ಶಿಲಾದಲ್ಲಿ, ನಿಕ್ಷೇಪಮಾಡಿ ಹಾಕಬೇಕು. ಆ ಮುಂಡಪೃಷ್ಠಾದ್ರಿಯು ಪಿತೃಗಳಿಗೆ ಬ್ರಹ್ಮಲೋಕಪ್ರದವಾಗುವುದು.

ರಾಮನು ವನಕ್ಕೆ ಹೋಗಲು ಭರತನು ಗಯಾಶಿಲೆಯನ್ನು ಆರೋಹಣ ಮಾಡಿ (ಹತ್ತಿ) ಸ್ಥಿತನಾಗಿ ಪಿತೃವಿಗೆ ಪಿಂಡಾದಿಗಳನ್ನು ಕೊಟ್ಟು ಅಲ್ಲೇ ರಾಮೇಶನನ್ನು ಸ್ಥಾಪನೆಮಾಡಿ, ಸ್ನಾನಮಾಡಿ, ರಾಮೇಶನನ್ನೂ ರಾಮನನ್ನೂ ಸೀತಾದೇವಿಯನ್ನೂ ಸಮಾಹಿತನಾಗಿ ನಮಸ್ಕಾರ ಮಾಡಿ ಶ್ರಾದ್ಧವನ್ನೂ ಪಿಂಡಪ್ರದಾನವನ್ನೂ ಮಾಡಿ, ವಿಷ್ಣುಪುರಕ್ಕೆ (ವೈಕುಂಠಕ್ಕೆ) ಹೋದನು.

ಧರ್ಮಾತ್ಮನು ಪಿತೃಗಳೊಡನೆ ನೂರು ನೂರು ಕುಲದಿಂದ ಕೂಡಿ, ಕುಂಡಪೃಷ್ಠದಲ್ಲಿ ಸ್ಥಾಪಿತವಾದ ಶಿಲಾ ದಕ್ಷಿಣ ಹಸ್ತದಲ್ಲಿ ಶ್ರಾದ್ಧಾದಿಗಳಿಂದ ಸರ್ವಪಿತೃಗಳನ್ನೂ ಪೂಜಿಸಿ ಬ್ರಹ್ಮಪುರಕ್ಕೆ ಸೀತಾದ್ರಿಯ ದಕ್ಷಿಣ (ಪರ್ವತ) (ಬೆಟ್ಟ) ದಲ್ಲಿ ಕುಂಡನೆಂಬ ಋಷಿಯಿಂದ ತಪಸ್ಸು ಮಾಡಿದ ಸ್ಥಳದಲ್ಲಿಯೂ, ಹಾಗೆಯೇ ಮತಂಗನ ಪುಣ್ಯಪದದಲ್ಲಿ ಪಿಂಡದಾನ ಶ್ರಾದ್ಧ ಮಾಡಿದವನು ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುವನು.

ಶಿಲೆಯ ವಾಮಹಸ್ತದಲ್ಲಿ ಅಂತಕ ಗಿರಿಯು ಧರಿಸಲ್ಪಟ್ಟಿದೆ. ಮಹಾತ್ಮರಾದ ಅಗಸ್ತ್ಯಋಷಿಗಳಿಂದ ಇಲ್ಲಿಗೆ ಉದಯಾದ್ರಿಯು ತರಲ್ಪಟ್ಟು ಸ್ಥಾಪಿತವಾಗಿದೆ. ಅಲ್ಲಿ ಶ್ರಾದ್ಧಮಾಡಿ ಪಿಂಡಪ್ರದಾನ ಮಾಡಿದವನು ಪಿತೃಗಳನ್ನು ಬ್ರಹ್ಮಪುರಕ್ಕೆ ಒಯ್ಯುವನು. ಅವರು ತನ್ನ ತಪಸ್ಸಿನಲ್ಲಿ ಕೃತವಾದ ಉದ್ಯಂತಕ ಕುಂಡವನ್ನು ಅಲ್ಲಿಯೇ ಸ್ಥಾಪಿಸಿರುವರು. ಇಲ್ಲಿ ಚತುರ್ಮುಖ ಬ್ರಹ್ಮನೂ ಸಾವಿತ್ರಿಯು ಕುಮಾರರುಗಳಿಂದ ಕೂಡಿ ಸ್ಥಿತರಾಗಿರುವರು. ಹಾಹಾ, ಹೂಹೂ ಮೊದಲಾದ ಗಂಧರ್ವರು ಗೀತವನ್ನೂ ವಾದ್ಯಗಳನ್ನೂ ನುಡಿಸಿದರು. ಇಂಥಾ ಅಗಸ್ತ್ಯ ಕ್ಷೇತ್ರದಲ್ಲಿ ಮಧ್ಯಾಹ್ನ ಸ್ನಾನಮಾಡಿ ಸಾವಿತ್ರಿ (ಗಾಯತ್ರಿ) ಜಪವನ್ನು ಭಕ್ತಿಯಿಂದ ಉಪಾಸನೆ ಮಾಡಿದರೆ ಒಂದು ಕೋಟಿ ಜನ್ಮದಲ್ಲಿ ಧನಾಢ್ಯನೂ, ವೇದಪಾರಂಗತನೂ ಆದ ವಿಪ್ರನಾಗಿರುವನು. ಗಯಾ ಕುಮಾರನನ್ನು ನಮಿಸಿ ಮಾನವನು

ಬ್ರಾಹ್ಮಣ್ಯವನ್ನು ಪಡೆಯುವನು. ಸೋಮಕುಂಡಾಭಿಷೇಕಾದಿಗಳಿಂದ ಪಿತೃಗಳನ್ನು ಸೋಮಲೋಕಕ್ಕೆ ಕಳುಹಿಸುವನು.

ಅಗಸ್ತ್ಯಪದದಲ್ಲಿ ಸ್ನಾನಮಾಡಿ ತನ್ನ ಪಿತೃಗಳಿಗೆ ಪಿಂಡದಾನ ಶ್ರಾದ್ಧ ಮಾಡಿದವನು ತನ್ನ ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುತ್ತಾನೆ. ಬ್ರಹ್ಮ ಯೋಗಿನಿಯನ್ನು ಪ್ರವೇಶ ಮಾಡಿ ಈಚೆಗೆ ಹೊರಬಂದವನು ಇಹಲೋಕದಲ್ಲಿ ಯೋನಿ ಸಂಕಟದಿಂದ ಮುಕ್ತನಾಗಿ ಜನನ ಮರಣಾದಿಗಳಿಲ್ಲದೆ ಪರಬ್ರಹ್ಮನನ್ನು ಹೊದುತ್ತಾನೆ.

ಕಾಕಶಿಲೆಯಲ್ಲಿ ಕಾಗೆಗಳಿಗೆ ಬಲಿಯನ್ನು ಪ್ರಧಾನ ಮಾಡುವುದು ತಕ್ಷಣ ಮೋಕ್ಷಪ್ರದವು. ಸಕಲಪಾಪಗಳನ್ನೂ ಪರಿಹರಿಸುವುದು.

ಸ್ವರ್ಗದ್ವಾರೇಶ್ವರನಿಗೆ ನಮಸ್ಕರಿಸಿ ಸ್ವರ್ಗದಶೆಯಿಂದ ಪಿತೃಗಳನ್ನು ಬ್ರಹ್ಮಪುರಕ್ಕೆ ಒಯ್ದು ತಲಪಿಸುವರು.

ವೋಮ (ಆಕಾಶ) ಗಂಗೆಯಲ್ಲಿ ಪಿಂಡಪ್ರದಾನ ಮಾಡಿದವನು ಸ್ವಯಂ ನಿರ್ಮಲನೂ ಶುಚಿರ್ಭೂತನೂ ಆಗಿ ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುವನು.

ಧರ್ಮನು ಶಿಲೆಯ ದಕ್ಷಿಣ (ಬಲಗೈಲಿ) ಹಸ್ತದಲ್ಲಿ ಭಸ್ಮಕೂಟವನ್ನು ಧರಿಸಿರುವನು. ಆದುದರಿಂದ ಹರನು ಅದಕ್ಕೆ ಧರ್ಮಶಿಲೆಯೆಂದು ನಾಮಕರಣ ಮಾಡಿರುವನು. ಅಲ್ಲಿ ಈ ಭಸ್ಮಕೂಟಾದ್ರಿಯು ಭಸ್ಮನಾಮಕವಾಗಿರುವುದು. ಅಲ್ಲಿ ಪ್ರಪಿತಾಮಹನು ವಟವೂ, ವಟೇಶ್ವರನೂ ಆಗಿ ಸ್ಥಿತವಾಗಿರುವನು. ಅದರ ಮುಂಭಾಗದಲ್ಲಿ ರುಕ್ಮಿಣೀ ಕುಂಡವೂ ಪಶ್ಚಿಮ (ಹಿಂಭಾಗ)ದಲ್ಲಿ ಕಪಿಲಾ ನದಿಯೂ ನದೀ ತೀರದಲ್ಲಿ ಕಪಿಲೇಶ್ವರನೂ ಉಮಾ ಸೋಮ ಸಮಾಗಮವೂ ಇರುವುದು. ಕಪಿಲಾ ನದಿಯಲ್ಲಿ ಸ್ನಾನಮಾಡಿ ಕಪಿಲೇಶನಿಗೆ ನಮಸ್ಕರಿಸಿ, ಪೂಜಿಸಿ ಮಹೇಶ ಕುಂಡದಲ್ಲಿ ಶ್ರಾದ್ಧ ಮಾಡಿದವನು ಸ್ವರ್ಗಭಾಗಿಯಾಗುವನು.

ಗೌರೀ ಮತ್ತು ಸರ್ವ ಸೌಭಾಗ್ಯ ಕೊಡುವ ಮಂಗಳಾದೇವತೆಗಳು ಅಲ್ಲಿರುವರು. ಅವರನ್ನು ಅರ್ಚಿಸಬೇಕು. ಭಸ್ಮಕೂಟದಲ್ಲಿ ಇರುವ ಜನಾರ್ದನನ ಕೈಲ್ಲಿ ಪಿಂಡವನ್ನು ಕೊಟ್ಟು ತನಗೆ ಮತ್ತು ಇತರರಿಗೂ

ತಿಲವಿಲ್ಲದೆ ಈ ಕೆಳಕಂಡ ಮಂತ್ರದಿಂದ ದಧಿ ಮಿಶ್ರವಾದ ಪಿಂಡವನ್ನು ಯಾ
ಕೊಡುತ್ತಾರೆಯೋ ಅವರೆಲ್ಲರೂ ವಿಷ್ಣುಲೋಕಕ್ಕೆ ಹೋಗಿ ವಾಸಿಸುವರು.

"ಏಷ ಪಿಂಡೋ ಮಯಾ ದತ್ತಸ್ತವ ಹಸ್ತೇ ಜನಾರ್ದನ ।
ಗಯಾಶ್ರಾದ್ಧೇ ತ್ವಯಾ ದೇಯೋ ಮಹ್ಯಂ ಪಿಂಡೋ ಮೃತೇ ಮಯಿ ॥
ತುಭ್ಯಂ ಪಿಂಡೋ ಮಯಾ ದತ್ತೋ ಯಮುದ್ದಿಶ್ಯ ಜನಾರ್ದನ ।
ದೇಹಿ ದೇವ ಗಯಾಶೀರ್ಷೇ ತಸ್ಮೈ ತಸ್ಮೈ ಮೃತೇ ತತಃ ॥
ಜನಾರ್ದನ ನಮಸ್ತುಭ್ಯಂ ನಮಸ್ತೇ ಪಿತೃರೂಪಿಣೇ ।
ಪಿತೃಪಾತ್ರ ನಮಸ್ತುಭ್ಯಂ ನಮಸ್ತೇ ಮುಕ್ತಿಹೇತವೇ ॥
ಗಯಾಯಾಂ ಪಿತೃರೂಪೇಣ ಸ್ವಯಮೇವ ಜನಾರ್ದನಃ ।
ತಂ ದೃಷ್ಟ್ವಾ ಪುಂಡರೀಕಾಕ್ಷಂ ಮುಚ್ಯತೇ ಚ ಋಣತ್ರಯಾತ್ ॥
ನಮಸ್ತೇ ಪುಂಡರೀಕಾಕ್ಷ ಋಣತ್ರಯ ವಿಮೋಚನ ।
ಲಕ್ಷ್ಮೀಕಾಂತ ನಮಸ್ತೇಽಸ್ತು ನಮಸ್ತೇ ಪಿತೃಮೋಕ್ಷದ ॥"

ಹೇ ಜನಾರ್ದನನೇ, ಈ ಪಿಂಡವು ನಿನ್ನ ಕೈಲಿ ನನ್ನಿಂದ ಕೊಡ
ಟ್ಟಿದೆ. ನಾನು ಮೃತನಾದ ನಂತರ ಈ ಪಿಂಡವು ನನಗೆ ಗಯಾ ಶ್ರಾದ್ಧ
ನಿನ್ನಿಂದ ಕೊಡಲ್ಪಡಬೇಕು. ಹೇ ಜನಾರ್ದನನೇ, ಯಾರ ಯಾರ
ಉದ್ದೇಶಮಾಡಿ, ನನ್ನಿಂದ ನಿನ್ನ ಕೈಲಿ ಪಿಂಡವು ಕೊಡಲ್ಪಟ್ಟಿದೆಯೋ ಅ
ವರಿಗೆ ಅವುಗಳನ್ನು ಅವರು ಮೃತರಾದನಂತರ ನಿನ್ನಿಂದಲೇ ಗಯಾ ಶಿ
ನಲ್ಲಿ ಅವು ಕೊಡಲ್ಪಡಲಿ. ಎಲೈ ಜನಾರ್ದನನೆ, ನಿನಗೆ ನಮಸ್ಕಾರವು, ಪಿ
ರೂಪಿಯಾದ ನಿನಗೆ ನಮಸ್ಕಾರವು, ಪಿತೃಪಾತ್ರನೇ, ನಿನಗೆ ನಮಸ್ಕಾರ
ಮುಕ್ತಿ ಕೊಡುವುದಕ್ಕಾಗಿ ನಿನಗೆ ನಮಸ್ಕಾರವು. ಗಯಾದಲ್ಲಿ ಸ್ವ
ಜನಾರ್ದನನು ಪಿತೃರೂಪದಿಂದ ಇರುವನು. ಆ ಪುಂಡರೀಕಾಕ್ಷನನ್ನು ಭ
ಯಿಂದ ದರ್ಶನ ಮಾಡಿದವನು ಋಣತ್ರಯದಿಂದ ಮುಕ್ತನಾಗುತ್ತಾ
ಹೇ ಪ್ರಸನ್ನನಾದ ಪುಂಡರೀಕಾಕ್ಷನೇ, ಜನಾರ್ದನನೇ, ಋಣತ್ರಯಗ
ವಿಮುಕ್ತಿಪ್ರದನೇ, ಎಲೈ ಲಕ್ಷ್ಮೀಕಾಂತನೇ, ನಿನಗೆ ನಮಸ್ಕಾರವು, ನಿ
ಪುನಃ ನಮಸ್ಕಾರವು, ಪಿತೃಗಳಿಗೆ ಮೋಕ್ಷಪ್ರದನೇ, ನಿನಗೆ ನಮಸ್ಕಾರವು.

ಪುಂಡರೀಕಾಕ್ಷನಾದ ಜನಾರ್ದನನನ್ನು ಭಕ್ತಿಯಿಂದ ವಿಧ್ಯುಕ್ತ
ಯಲ್ಲಿ ಪೂಜಿಸಿ, ಸ್ವರ್ಗವನ್ನು ಪಡೆಯುವನು. ಎಡದ ಮೊಳಕಾಲನ್ನು

ಬಗ್ಗಿಸಿ ಭೂಮಿಯಲ್ಲಿಟ್ಟು ಜನಾರ್ದನನಿಗೆ ನಮಸ್ಕರಿಸಿ, ಪಿಂಡದಾನದಿಂದ ಶ್ರಾದ್ಧವನ್ನು ಸಹೋದರರೊಡನೆ ಮಾಡಿದವನು ವಿಷ್ಣುಲೋಕವನ್ನು ಹೊಂದಲು ಭಾಗಿಯಾಗುವನು.

ಶಿಲೆಯ ವಾಮ (ಎಡ) ಪಾದದಲ್ಲಿ **ಪ್ರೇತಕೂಟವೆಂಬ** ಗಿರಿಯು ಧರ್ಮರಾಜನಿಂದ ಧರಿಸಲ್ಪಟ್ಟಿದೆ. ಇದು ಪಾಪದಿಂದ ಕೂಡಿರುವುದರಿಂದ ಈ ಗಿರುವ ಪ್ರೇತ ಶೀಲಾಮಯುವೆನಿಸಿದೆ. ಶಿಲೆಯ ಪಾದಭಾರದಿಂದ ಪಾದದಿಂದ ದೂರಕ್ಕೆ ಎಸೆಯಲ್ಪಟ್ಟಿತಾದ್ದರಿಂದ, ಪ್ರೇತಗಳು ಧಾನುಷ್ಕರೂಪದಿಂದ ಕರ ಗ್ರಹಣ ಕಾರಕಗಳಾಗಿ, ಪ್ರತ್ಯೇಕ ಪ್ರತ್ಯೇಕವಾಗಿದ್ದುಕೊಂಡು, ಪಿತೃಗಳ ವಿಮುಕ್ತ್ಯರ್ಥವಾಗಿ ಶ್ರಾದ್ಧಾದಿಗಳನ್ನು ಮಾಡುವ ಮನುಜರಿಗೆ ಇವು ಬಹು ವಿಘ್ನಗಳನ್ನು ಮಾಡುವುವು.

ತೀರ್ಥಸ್ನಾನಮಾಡಿ ಪಿತ್ರ್ಯಾದ್ದೇಶದಿಂದ ಶ್ರಾದ್ಧಮಾಡಲು ಶಿಲಾದ್ರಿ ಸಂಪರ್ಕದ ದೆಶೆಯಿಂದ **ಪ್ರೇತಕೂಟವು** ಪವಿತ್ರೆಯನ್ನು ಪಡೆಯಿತು. ಅಲ್ಲಿಯೇ **ಪ್ರೇತಕುಂಡವೆಂಬುದು** ಇರುವುದು. ಅಲ್ಲಿ ಪದಗಳಿಂದ ದೇವತೆಗಳು ಸ್ಥಿತರಾಗಿರುವರು. ಸ್ನಾನಮಾಡಿ, ಶ್ರಾದ್ಧ ಪಿಂಡಾದಿಗಳನ್ನು ಕೊಟ್ಟವನು ಪಿತೃಗಳನ್ನು ಪ್ರೇತತ್ವದಿಂದ ಬಿಡುಗಡೆ ಮಾಡಿ ಮುಕ್ತರನ್ನು ಮಾಡುತ್ತಾನೆ.

ಕೀಕಟೇಷು ಗಯಾ ಪುಣ್ಯಾ ಪುಣ್ಯಂ ರಾಜಗೃಹಂ ವನಂ ।
ಚ್ಯವನಸ್ಯಾಶ್ರಮಃ ಪುಣ್ಯೋ ನದೀ ಪುಣ್ಯಾ ಪುನಃ ಪುನಾ ॥

ಕೀಕಟ ದೇಶದಲ್ಲಿ ಗಯಾಕ್ಷೇತ್ರವು ಪುಣ್ಯಕರವಾದುದು. ರಾಜಗೃಹ ವನವೂ ಪುಣ್ಯಪ್ರದವು. ಚವನ ಋಷಿಗಳ ಆಶ್ರಮವೂ ಪುಣ್ಯಕರವು ಫಲ್ಗು ನದಿಯು ಪವಿತ್ರವನ್ನು ಮಾಡುವ ಪುಣ್ಯಕರವಾದ ಮಹಾನದಿಯು. ಇಲ್ಲಿ ವೈಕುಂಠವು ಲೋಹದಂಡವು, ಶೋಣದಲ್ಲಿರುವ ಗಿರಿಕೂಟವೂ ಶ್ರೇಷ್ಟವಾಗಿವೆ. ಅಲ್ಲಿ (ಪಿಂಡಾದಿಗಳಿಂದ) ಶ್ರಾದ್ಧವನ್ನು ಮಾಡುವನು. ಪಿತೃಗಳಿಗೆ ಬ್ರಹ್ಮಲೋಕಕ್ಕೆ ಹೋಗಲು ಸಾಧಕನಾಗುವನು.

ಶಿಲೆಯ ದಕ್ಷಿಣ (ಬಲದ) ಪಾದದಲ್ಲಿ ಧರ್ಮರಾಜನಿಂದ **ಗೃಧ್ರಕೂಟವೆಂಬ** ಗಿರಿಯು ಧರಿಸಲ್ಪಟ್ಟಿದೆ. ತನ್ನಸ್ಥಿತಿಯಿಂದ ಆಶು ಪವಿತ್ರಮಾಡಲು ಕಾರಣನಾಗಿ ಅಲ್ಲಿ ಧರ್ಮರಾಜನೇ ಸನ್ನಿಹಿತನಾಗಿ ಇರುವನು. ಅನೇಕ ಮಹರ್ಷಿಗಳು

ಇಲ್ಲಿ ಗೃಧ್ರ (ಹದ್ದಿನ) ರೂಪದಿಂದ ತಪಸ್ಸನ್ನಾಚರಿಸಿ ಸಂಸಿದ್ಧರಾಗಿದ್ದಾರೆ. ಆದುದರಿಂದ ಆ ಗಿರಿಗೆ ಗೃಧ್ರಕೂಟವೆಂದು ಹೆಸರು. ಅಲ್ಲಿ ಶಿವನು ಗೃಧ್ರೇಶ್ವರ ನಾಮದಿಂದ ಇರುವನು, ಗೃಧ್ರೇಶ್ವರನ ದರ್ಶನಮಾಡಿ ಅಲ್ಲಿ ಸ್ನಾನಮಾಡಿದ ನರನು ಶಂಭುವಿನ ಪುರವಾದ ಕೈಲಾಸಕ್ಕೆ ಹೋಗುವನು. ಅಲ್ಲಿಯೂ ಗೃಧ್ರ ಪುರಕ್ಕೆ ಹೋಗಿ ಕಾಲಾಂತರದಲ್ಲಿ, ಪ್ರಾಪ್ತಕಾಲದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ. ಶಿವನನ್ನು ಕಂಡು ಋಣಮುಕ್ತನೂ, ಪಾಪಗಳಿಂದ ಮುಕ್ತನೂ ಆಗಿ ಶಿವನನ್ನು ಹೊಂದುವನು.

ಗಿರಿಯ ಆದಿ ಪಾದದಿಂದ ಶಿಲೋದಕವು ಸಮಾಕ್ರಾಂತವಾಗಿದೆ ಅಲ್ಲಿ ವಿಘ್ನನಾಶಕನಾದ ವಿಘ್ನೇಶನು ಗಜರೂಪದಿಂದ ಇರುವನು. ಅವನ ದರ್ಶನ ಮಾಡಿದವನು ವಿಘ್ನಗಳಿಂದ ಮುಕ್ತನಾಗಿ ನಿರ್ವಿಘ್ನವಾಗಿ ಪಿತೃ ಗಳನ್ನು ಶಿವಪುರಕ್ಕೆ ತಲಪಿಸುವನು.

ಗಾಯತ್ರಿಯನ್ನೂ ಗಯಾದಿತ್ಯನನ್ನು, ಆಯಾತೀರ್ಥಗಳಲ್ಲಿ ಸ್ನಾನ ಮಾಡಿ ದರ್ಶನ ಮಾಡಿದವನೂ ಸ್ವರ್ಗಕ್ಕೆ ಹೋಗುತ್ತಾನೆ.

ಆದಿಪಾದ ಸ್ಥಿತದಾದ ಬ್ರಹ್ಮನನ್ನು ದರ್ಶನ ಮಾಡಿದವನು ಪಿತೃ ಗಳಿಗೆ ತಾರಕನಾಗುತ್ತಾನೆ.

ನಾಭಿ (ಸ್ಥಾನ, ತೀರ್ಥದ)ಯಲ್ಲಿ ಶ್ರಾದ್ಧ ಪಿಂಡಪ್ರದಾನ ಮಾಡಿದವನು ಪಿತೃಗಳನ್ನು ಬ್ರಹ್ಮಪುರ (ಸತ್ಯಲೋಕ)ಕ್ಕೆ ಒಯ್ದು ತಲಪಿಸುತ್ತಾನೆ.

ಮುಂಡಪೃಷ್ಠದ ಶೋಭಾರ್ಥವಾಗಿ ಆದರಲ್ಲಿ ಉತ್ಕೃಷ್ಟವಾದ ಅರ ವಿಂದವು ಉತ್ಪನ್ನವಾಯಿತು. ಈ ಮುಂಡಪೃಷ್ಠಾರವಿಂದಗಳನ್ನು ದರ್ಶನ ಮಾಡಿದವನು ಪಾಪಗಳಿಂದ ಮುಕ್ತನಾಗುತ್ತಾನೆ.

ಕೊಂಬುಳ್ಳ ಪ್ರಾಣಿಗಳೊಡನೆ, ಹಲ್ಲುಗಳುಳ್ಳ ವ್ಯಾಘ್ರ ಸಿಂಹ ಚಿರತಾದಿ ಗಳು, ಸರ್ಪಗಳು, ವಿಷ, ಅಗ್ನಿ, ಸ್ತ್ರೀಯರು ಜಲಗಳಿಂದ ಬಹು ದೂರವಿರಬೇಕು ಅವರುಗಳೊಡನೆ ಕ್ರೀಡಿಸಿ ಯಾವನು ಮೃತನಾಗುತ್ತಾನೆಯೋ, ಸರ್ಪಗ ಳೊಡನೆ, ಆನೆಯೊಡನೆ ಅವುಗಳಿಗೆ ಅಪ್ರಿಯವನ್ನು ಉಂಟುಮಾಡಿ ವಿರುದ್ಧ ವಾಗಿ ನಡೆದವನೂ, ಮಿಂಚು, ಸಿಡಲುಗಳಿಂದ ಮೃತನಾದವನೂ, ಶ್ವಚಿಕ

ಕಳ್ಳತನ ಮೊದಲಾದ ದುಷ್ಕರ್ಮಗಳಿಗಾಗಿ ರಾಜನಿಂದ, ದಂಡಿಸಲ್ಪಟ್ಟ ನಿಗೃಹೀತನಾದವನೂ, ಪರಸ್ತ್ರೀಯರಲ್ಲಿ ರಮಣ, ರತಿಯುಳ್ಳವನಾಗಿ ಅಂಥವರ ಗಂಡಂದಿರಿಂದ ಹೊಡಸಿ, ಬಡಿಸಿ ಕೊಂದು ಹತರಾದವರೂ, ಅಸಮಾನರೂ, ಸಂಕೀರ್ಣ ಜಾತಿಯ ವರ್ಣಾವರರು, ಚಂಡಾಲರುಗಳೊಡನೆ ವ್ಯಾಜ್ಯವನ್ನು ಮಾಡಿ ಅವರಿಂದ ಹೊಡೆಯಿಸಿಕೊಂಡು ಮೃತರಾದವರೂ, ಚಂಡಾಲ ಮೊದಲಾದ ವರ್ಣ ಬಾಹ್ಯರನ್ನು ಆಶ್ರಯ ಮಾಡಿದವರೂ, ಗೋವು, ಅಗ್ನಿ ವಿಷಗಳನ್ನು ಕೊಟ್ಟವರು ಪಾಖಂಡಿಗಳು, ಕ್ರೂರಬುದ್ಧಿಯುಳ್ಳವರೂ, ಕ್ರೋಧದಿಂದ, ವಿಷವನ್ನು ಅಗ್ನಿಯ, ಇಟ್ಟವರು, ಶಸ್ತ್ರದಿಂದ ಹೊಡೆದವರು, ಜಲ ವೃಕ್ಷ, ಗಿಡ, ಮರಗಳಿಂದ ಭೂಮಿಕಿ ಕೆಳಕ್ಕೆ ಬಿದ್ದು ಪ್ರಾಣವನ್ನು ಕಳೆದುಕೊಂಡ ನರಾಧಮರು, ಕುಶಿಲ್ಪ (ಕುಚ್ಛಿತವಾದ ಹೀನ ಕೈಗಾರಿಕೆ) ಯಿಂದ ಜೀವಿಸುವರು ಪಂಚಸೂನಾಧಿಕಾರಿಗಳು, ಯಜ್ಞದಲ್ಲಿ, ಸಭೆಗಳಲ್ಲಿ ಹೀನರು, ದೀನಪ್ರಾಯರು ಕೆಲವು ನಪುಂಸಕರು, ಬ್ರಹ್ಮ (ಶಾಪ) ದಂಡದಿಂದ ಹತರಾದವರು ಮತ್ತು ಬ್ರಾಹ್ಮಣರಿಂದ ಹತರಾದವರು ಯಾರು ಮಹಾ ಪಾತಕಿಗಳೋ, ಅವರೆಲ್ಲರೂ ಪಾತಕಿಗಳೆಂದೇ ಪ್ರಕೀರ್ತಿತರಾಗಿದ್ದಾರೆ, ಅಂಥವರೆಲ್ಲರೂ ಗಯಾಕೂಪದಲ್ಲಿ ಕೂಪದ ಭಸ್ಮ (ಲೇಪನ) ದಿಂದ ಸ್ನಾನಮಾಡುವುದರಿಂದ ಶುದ್ಧಿಯನ್ನು ಹೊಂದುವರು. ಪಾಪಗಳಿಂದ ರಹಿತರಾಗಿ ಪವಿತ್ರರಾಗುವರು.

ಈ ಉತ್ತಮವಾದ ಗಯಾ ಮಾಹಾತ್ಮೆಯು—

ಸರ್ವಪಾಪಪ್ರಶಮನಂ ಪಿತೃಣಾಂ ಮುಕ್ತಿದಾಯಕಂ ।
ಯಃ ಶೃಣೋತಿ ನರೋ ಭಕ್ತ್ಯಾ ಶ್ರಾದ್ಧೇ ಪರ್ವಣಿ ವಾಽಪ್ಯಹಂ ॥

ಸರ್ವ ಪಾಪಗಳನ್ನೂ ನಾಶಮಾಡಿ ಪಿತೃಗಳಿಗೆ ಮುಕ್ತಿಯನ್ನು ಕೊಡುತ್ತದೆ. ಯಾವ ಮಾನವನು ಭಕ್ತಿಯಿಂದ ಇದನ್ನು ಶ್ರಾದ್ಧಕಾಲದಲ್ಲಿ, ಪರ್ವಕಾಲದಲ್ಲಿ ಅಥವಾ ನಿರಂತರ ಶ್ರವಣ ಮಾಡುತ್ತಾನೆಯೋ, ಅಥವ ಪಠನೆ ಶ್ರವಣವನ್ನು ಮಾಡಿಸುತ್ತಾನೆಯೋ, ಅಂಥವನೂ ಸಹಾ "ಸೋಽಪಿಸ್ಯಾದ್ಬ್ರಹ್ಮಲೋಕಭಾಕ್" ಬ್ರಹ್ಮಲೋಕಕ್ಕೆ ಹೋಗಲು ಭಾಗಿಯಾಗುತ್ತಾನೆ.

ಇದಂ ಸ್ವಸ್ತ್ಯಯನಂ ಪುಣ್ಯಂ ಧನ್ಯಂ ಸ್ವರ್ಗತಿದಂ ನೃಣಾಂ ।
ಯಶಸ್ಯಮಪಿ ಚಾಯುಷ್ಯಂ ಪುತ್ರಪೌತ್ರವಿವರ್ಧನಂ ॥

ಈ ಮಾಹಾತ್ಮ್ಯೆಯು, ಮಂಗಳ ಪ್ರದವು, ಪುಣ್ಯಪ್ರದವು ಪರಮಧನ್ಯವಾದುದು, ಮನುಜರಿಗೆ ಸ್ವರ್ಗಪ್ರದವಾದುದು, ಯಶಸ್ಸು, ಆಯುಸ್ಸುಗಳನ್ನು ಕೊಡುವುದು, ಮಕ್ಕಳು ಮೊಮ್ಮಕ್ಕಳ ಸಂತಾನವನ್ನು ವೃದ್ಧಿಪಡಿಸುವುದು.

ಬೃಹನ್ನಾರದೀಯ ಪುರಾಣದಲ್ಲಿ ಗಯಾಮಾಹಾತ್ಮ್ಯೆಯು, ಸಂಪೂರ್ಣವು.

ಶ್ರೀಗುರುಭ್ಯೋನಮಃ ಹರಿಃ ಓಂ

ಸಮಾಹಿತನಾಗಿ ಬ್ರಹ್ಮಚರ್ಯದಿಂದ ಗಯಾಕ್ಕೆ ಹೋಗಬೇಕು. ಅಲ್ಲಿ ಹೋಗೋಣಮಾತ್ರದಿಂದ ಅಶ್ವಮೇಧ ಯಾಗ ಮಾಡಿದ ಫಲವನ್ನು ಪಡೆಯುತ್ತಾನೆ.

ಅಲ್ಲಿ ತ್ರಿಲೋಕವಿಶ್ರುತವಾದ ಅಕ್ಷಯ ವಟವೃಕ್ಷವಿರುವುದು. ಪಿತೃಗಳ ಉದ್ದೇಶದಿಂದ ಅಲ್ಲಿ ಪಿಂಡಾದಿಗಳು ಕೊಟ್ಟದ್ದು ಅಕ್ಷಯವಾಗುವುದು.

ಫಲ್ಗು ಮಹಾನದಿಯಲ್ಲಿ ಸ್ನಾನಮಾಡಿ ಪಿತೃದೇವತೆಗಳಿಗೆ ತರ್ಪಣ ಮಾಡಬೇಕು. ಇದರಿಂದ ಶಾಶ್ವತಗಳಾದ ಅಕ್ಷಯಗಳಾದ ಲೋಕಗಳಿಗೆ ಪಿತೃಗಳು ಹೋಗುವರು. ಕರ್ತನು ತನ್ನ ಕುಲವನ್ನೇ ಉದ್ಧರಿಸುವನು.

ಅಲ್ಲಿಂದ ಬ್ರಹ್ಮಾರಣ್ಯದಲ್ಲಿರುವ ಬ್ರಹ್ಮಸರಸ್ಸಿಗೆ ಹೋಗಬೇಕು. ಅಲ್ಲಿ ಸ್ನಾನಾದಿಗಳನ್ನು ಮಾಡುವುದರಿಂದ ರಾತ್ರಿ ಕಳೆದು ಹಗಲು ಆಗುವಂತೆ ಸಕಲ ಪಾಪಕರ್ಮಗಳು ಹೋಗಿ ಶುದ್ಧನಾಗುವನು ಮಾತ್ರವಲ್ಲದೆ ಪುಂಡರೀಕ ಯಾಗ ಮಾಡಿದ ಫಲವನ್ನು ಹೊಂದುತ್ತಾನೆ.

ಆ ಸರೋವರದಲ್ಲಿ ಬ್ರಹ್ಮನಿಂದ ಯೂಪಸ್ತಂಭವು ಸ್ಥಾಪಿತವಾಗಿರುವುದು. ಉನ್ನತವಾಗಿರುವ ಆ ಯೂಪವನ್ನು ಪ್ರದಕ್ಷಿಣೆ ಮಾಡುವುದರಿಂದ ವಾಜಪೇಯ ಯಜ್ಞಫಲವನ್ನು ಪಡೆಯುವನು.

ಮುಂದೆ ಲೋಕವಿಖ್ಯಾತವಾದ ಧೇನುಕಕ್ಕೆ ಹೋಗಿ ಅಲ್ಲಿ ಒಂದು ರಾತ್ರಿ ವಾಸಮಾಡಿ ತಿಲಧೇನುವನ್ನು ದಾನಮಾಡಿ, ಸರ್ವ ಪಾಪಗಳಿಂದ ಮುಕ್ತನೂ ವಿಶುದ್ಧಾತ್ಮನೂ ಆಗಿ ಸೋಮಲೋಕಕ್ಕೆ ಖಂಡಿತವಾಗಿಯೂ ಹೋಗುತ್ತಾನೆ.

ಅಲ್ಲಿ ಆ ಧೇನುಕ ಪರ್ವತದಲ್ಲಿ ಕಪಿಲಾ (ಗೋವು) ಕರುವಿನಿಂದ ಸಹಿತ ವಾಗಿ ಸಂಚರಿಸುತ್ತಿರುವುದು. ಆ ಸಂಚಾರದ ಗೋ ಮತ್ತು ವತ್ಸದ ಹೆಜ್ಜೆ ಗಳು ಅದ್ಯಾಪಿ ಕಾಣಿಸುವುವು.

ಆ ಸ್ಥಳಗಳಲ್ಲಿ ಗೋವತ್ಸ ಚಿನ್ಹದಲ್ಲಿ ಸ್ನಾನಮಾಡಿ, ಅವುಗಳನ್ನು ಸ್ಪರ್ಶ ಮಾಡುವುದರಿಂದ ಸರ್ವ ಪಾಪಗಳು ಯತ್ಕಿಂಚಿತ್ ಅಶುಭ ಪಾಪವಿದ್ದರೂ ಅದೂ ನಿಶ್ಶೇಷವಾಗಿ ನಾಶವಾಗುವುದು. ಈ ವಿಷಯದಲ್ಲಿ ಸಂಶಯ ಬೇಡ.

ಅಲ್ಲಿಂದ ಶೂಲಪಾಣಿಯಾದ ಮಹೇಶನ ಸ್ಥಾನವಾದ ಗೃಧ್ರವಟಕ್ಕೆ ಹೋಗಿ ವೃಷಭಧ್ವಜನನ್ನು ಕಂಡು ಭಸ್ಮ (ಲೇಪನ ಮಾಡಿಕೊಂಡು) ಸ್ನಾನ ವನ್ನು ಮಾಡಬೇಕು. ಬ್ರಾಹ್ಮಣನಿಂದ ದ್ವಾದಶ ವಾರ್ಷಿಕ ವ್ರತ ಮಾಡಿದ ಪುಣ್ಯವು ಇದರಿಂದ ಸಂಪಾದಿಸಲ್ಪಡುವುದು. ಇತರ ವರ್ಣದವರ ಸರ್ವ ಪಾಪಗಳೂ ತಪ್ಪದೆ ಸಂಪೂರ್ಣವಾಗಿ ನಾಶವಾಗುವುವು.

ಅನಂತರ ಗೀತವಾದಿತ್ರಗಳ ಧ್ವನಿಯಿಂದ ಕೂಡಿದ ಉದ್ಯಂತ ಪರ್ವ ತಕ್ಕೆ ಹೋಗಿ ಸಾವಿತ್ರೀಪದವನ್ನು ದರ್ಶನಮಾಡಬೇಕು. ಅಲ್ಲಿ ಬ್ರಾಹ್ಮಣನು ಶಂಸಿತವ್ರತನಾಗಿ, ಸಮಾಹಿತನಾಗಿ ಸಂಧ್ಯಾವಂದನೆಯನ್ನು ಮಾಡಬೇಕು. ಅಂಥಾ ಸಂಧ್ಯೋಪಾಸನೆಯಿಂದ ಹನ್ನೆರಡು ವರ್ಷ ಅನುಷ್ಠಾನಮಾಡಿದ ಸಂಧ್ಯಾ ಫಲವು ಬರುತ್ತದೆ.

ಅಲ್ಲಿಯೇ ಯೋನಿದ್ವಾರವೆಂಬುದು ವಿಶ್ರುತವಾಗಿದೆ. ಅದರಲ್ಲಿ ಪ್ರವೇಶ ಮಾಡಿ ಬಂದವನು ಯೋನಿ ಸಂಕಟದಿಂದ ಮುಕ್ತನಾಗುತ್ತಾನೆ.

ಯಾವ ಮನುಜನು ಗಯಾ ಕ್ಷೇತ್ರದಲ್ಲಿ, ಶುಕ್ಲ ಮತ್ತು ಕೃಷ್ಣಪಕ್ಷಗ ಳೆರಡರಲ್ಲೂ ಒಂದು ತಿಂಗಳು ವಾಸಿಸುತ್ತಾನೆಯೋ ಅಂಥವನು ನಿಃಸಂಶಯ ವಾಗಿ ಏಳು ಕುಲವನ್ನು ಉದ್ಧರಿಸುತ್ತಾನೆ.

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್
ಯಜೇತ ವಾಶ್ವಮೇಧೇನ ನೀಲಂ ವಾ ವೃಷ ಮುತ್ಸೃಜೇತ್ ॥

ಅನೇಕ ಮಕ್ಕಳಾಗಲೆಂದು ಇಚ್ಛಿಸಿ ಅದಕ್ಕಾಗಿ ಭಗವತ್ಪೂಜಾಖ್ಯ ಯಜ್ಞ ವನ್ನು ಮಾಡಬೇಕು. ಅವರಲ್ಲಿ ಒಬ್ಬನಾದರೂ ಗಯಾಕ್ಕೆ ಹೋಗುತ್ತಾನೆ, ಅಶ್ವಮೇಧಯಾಗವನ್ನು ಮಾಡಿಯಾನು. ಕಪಿಲ ವೃಷವ (ಗೂಳಿಯು) ನ್ನು

ಬಿಟ್ಟಾನು. ಅದರಿಂದ ನಾನು ಉದ್ಧೃತನಾಗುತ್ತೇನೆಂದು ಇಚ್ಛಿಸಬೇಕು. ಗಯಾಯಾತ್ರೆಯೂ ಅಲ್ಲಿ ಅನುಷ್ಠಾನಗಳೂ ಪಿತೃಗಳಿಗೆ ತಾರಕವು. ಮತ್ತು ಸದ್ಗತಿಪ್ರದವು. ಮತ್ತು ಆಮೇಲೆ ಅಲ್ಲಿಂದ ಫಲ್ಗುನದಿಗೆ ಹೋಗಿ ತೀರ್ಥಸ್ನಾನ ಮಾಡುವುದರಿಂದ ಅಶ್ವಮೇಧ ಫಲವನ್ನು ಪಡೆಯುತ್ತಾನೆ. ಅಲ್ಲದೆ ಪರಮಸಿದ್ಧಿಯನ್ನು ಹೊಂದುತ್ತಾನೆ.

ಮುಂದೆ ಧರ್ಮದೇವನು ಸನ್ನಿಹಿತನಾಗಿ ನಿತ್ಯವಾಸಿಸುತ್ತಿರುವ ಧರ್ಮಪೃಷ್ಠಕ್ಕೆ ಸಮಾಹಿತನಾಗಿ ಹೋಗಬೇಕು. ಅಲ್ಲಿ ಸ್ನಾನಾದಿ ಧರ್ಮಕಾರ್ಯಗಳನ್ನು ಮಾಡಿ ವಾಜಿಮೇಧ ಫಲವನ್ನು ಪಡೆಯುತ್ತಾನೆ. ಅನಂತರ ಬ್ರಹ್ಮತೀರ್ಥಕ್ಕೆ ಹೋಗಿ ಸ್ನಾನಮಾಡಿ ನಿಯತವ್ರತನಾಗಿ ಬ್ರಹ್ಮನನ್ನು ಉತ್ತಮ ರೀತಿಯಲ್ಲಿ ಅರ್ಚಿಸಿದರೆ, ರಾಜಸೂಯ ಮತ್ತು ಅಶ್ವಮೇಧಯಾಗಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಅಲ್ಲಿಂದ ಮುಂದೆ ರಾಜಗೃಹಕ್ಕೆ ಹೋಗಿ ತೀರ್ಥಸೇವನೆ ಮಾಡುವುದರಿಂದ ತೀರ್ಥಸ್ನಾನ ಮಾತ್ರದಿಂದಲೇ ಕಕ್ಷೀವಂತನಂತೆಯೇ ಆನಂದಪಡುತ್ತಾನೆ. ಅಲ್ಲಿ ಯಕ್ಷಿಣಿಯು ನಿತ್ಯವಾದ ಪ್ರಾಗಗ್ನಿಯು, ಶುಚಿರ್ಭೂತ ಪುರನು ಇರುವರು. ಅಗ್ನಿಪೂಜೆಯಿಂದ ಯಕ್ಷಿಣಿಯ ಪ್ರಸಾದದಿಂದ ಪುರುಷನು ಬ್ರಹ್ಮಹತ್ಯೆ ಪಾಪದಿಂದ ಮುಕ್ತನಾಗುತ್ತಾನೆ.

ಆಮೇಲೆ ಮಣಿನಾಗಕ್ಷೇತ್ರಕ್ಕೆ ಹೋಗುವುದರಿಂದ ಸಹಸ್ರ ಗೋದಾನ ಫಲವನ್ನು ಪಡೆಯುವನು. (ಮಣಿನಾಗನ) ನೃತ್ಯಕಭುಂಜಿಸಿದ ಮಾನವನು ಸರ್ಪ ಕಚ್ಚಿದ ವಿಷಬಾಧೆ ಇಲ್ಲದೆ, ವಿಷವು ದೇಹದಲ್ಲಿ ಏರದೆ ಸುಖದಿಂದಿರುವನು. ಅಲ್ಲಿ ಒಂದು ರಾತ್ರಿ ವಾಸಮಾಡಿದವನು ಸರ್ವ ಪಾಪಗಳಿಂದ ಮುಕ್ತನಾಗುತ್ತಾನೆ.

ಅಲ್ಲಿಂದ ಬ್ರಹ್ಮರ್ಷಿ ಗೌತಮರ ವನಕ್ಕೆ ಹೋಗಬೇಕು. ಅಹಲ್ಯೆಯ ಹ್ರದದಲ್ಲಿ ಸ್ನಾನಮಾಡಿದವನು ಪರಮಗತಿಯನ್ನು ಹೊಂದುತ್ತಾನೆ.

ಶ್ರೀ ಕ್ಷೇತ್ರಕ್ಕೆ ಹೋಗಿ ಅಲ್ಲಿ ಸ್ನಾನ ಪಾನ, ಅನುಷ್ಠಾನ ಮಾಡಿದವನು ಸಂಪತ್ತನ್ನು ಪಡೆಯುತ್ತಾನೆಂಬುದು ಮೂರು ಲೋಕದಲ್ಲೂ ವಿಶ್ರುತವಾಗಿದೆ.

ಆವಶ್ಯಕವಾಗಿ ಅಲ್ಲಿ ಅಭಿಷೇಕ (ಸ್ನಾನ)ವನ್ನು ಮಾಡಬೇಕು. ಇದರಿಂದ ವಾಜಿಮೇಧ ಫಲವನ್ನು ಪಡೆಯುತ್ತಾನೆ.

ರಾಜರ್ಷಿ ಜನಕ (ರಾಜರ ಕೂಪ) ತೀರ್ಥವೆಂಬುದು ದೇವತೆಗಳಿಂದ ಪೂಜಿತವಾಗಿದೆ. ಅಲ್ಲಿ ಸ್ನಾನ ಮಾಡುವುದರಿಂದ ವಿಷ್ಣುಲೋಕಕ್ಕೆ ಹೋಗುತ್ತಾನೆ.

ಅನಂತರ ಸರ್ವಪಾಪ ಪ್ರಮೋಚನವಾದ ವಿನಾಶ ತೀರ್ಥಕ್ಕೆ ಹೋಗಿ ಸ್ನಾನ ಮಾಡುವುದರಿಂದ ವಾಜಪೇಯ ಯಜ್ಞಫಲವನ್ನು ಪಡೆದು ಸೋಮ (ಚಂದ್ರ) ಲೋಕಕ್ಕೆ ಹೋಗುತ್ತಾನೆ.

ಸರ್ವತೀರ್ಥ ಜಲೋದ್ಭವವಾದ ಗಂಡಕೀ ತೀರ್ಥಕ್ಕೆ ಹೋಗಿ ಸ್ನಾನಾನುಷ್ಠಾನಗಳಿಂದ ವಾಜಪೇಯ ಫಲವನ್ನು ಪಡೆದು ಸೂರ್ಯ ಲೋಕಕ್ಕೆ ಹೋಗುತ್ತಾನೆ.

ಅಲ್ಲಿಂದ ಧ್ರುವ ತಪೋವನವನ್ನು ಕುರಿತು ಹೋಗಿ ಗುಹ್ಯಕರ ಜೊತೆಯಲ್ಲಿ ಆನಂದಾನುಭವ ಪಡುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ?

ಸಿದ್ಧರುಗಳಿಂದ ಸೇವಿತವಾದ ಕರ್ಮದಾ (ನರ್ಮದಾ) ನದಿಯನ್ನು ಸೇವಿಸಿ ಪುಂಡರೀಕ ಯಜ್ಞ ಫಲವನ್ನು ಪಡೆದು ಸೋಮಲೋಕಕ್ಕೆ ಹೋಗುತ್ತಾನೆ.

ಅನುತರ ವಿಶಾಲಕ್ಕೆ ಹೋಗಿ ಅಲ್ಲಿಯೇ ವಿಶೃತವಾದ ವಿಶಾಲಾ ನದಿಯ ಸ್ನಾನದಿಂದ ಅಗ್ನಿಷ್ಟೋಮ ಫಲವನ್ನು ಪಡೆದು ಸ್ವರ್ಗಲೋಕಕೆ ಹೋಗುತ್ತಾನೆ.

ಅನಂತರ ಮಾಹೇಶ್ವರೀಧಾರಕ್ಕೆ ಹೋಗಿ ಸ್ನಾನ ಮಾಡುವುದರಿಂದ ಅಶ್ವಮೇಧ ಫಲವನ್ನು ಪಡೆದು ತನ್ನ ಕುಲವನ್ನೇ ಉದ್ಧರಿಸುತ್ತಾನೆ.

ದಿವೌಕಸ ಪುಷ್ಕರಣಿಯನ್ನು ಆಶ್ರಯಿಸಿ ಸ್ನಾನಾದಿಗಳನ್ನಾಚರಿಸಿದವನು, ಎಂದಿಗೂ ದುರ್ಗತಿ ಹೊಂದುವುದಿಲ್ಲವು. ವಾಜಪೇಯ ಫಲವನ್ನು ಹೊಂದುತ್ತಾನೆ.

ಬ್ರಹ್ಮಚಾರಿಯು ಧೃಢವ್ರತನೂ, ಸಮಾಹಿತನೂ ಆಗಿ ಮಾಹೇಶ್ವರ ಪದಕ್ಕೆ ಹೋದವನು, ಮಾಹೇಶ್ವರ ಪದದಲ್ಲಿ ಸ್ನಾನಮಾಡಿ ವಾಜಮೇಧ ಫಲ ವನ್ನು ಹೊಂದುತ್ತಾನೆ.

ಅಲ್ಲಿ ಸರ್ವತೀರ್ಥಗಳಲ್ಲಿ ಉತ್ತಮವೆನಿಸಿದ ಕೋಟಿತೀರ್ಥವೆಂಬು ವುದು. ಅದು ಕೂರ್ಮರೂಪಿಯಾದ ಒಬ್ಬ ಅಸುರನಿಂದ ಎಳೆದುಕೊಂಡು ಹೋಗುತ್ತಿರಲು, ಆ ದುರಾತ್ಮನನ್ನು ವಿಷ್ಣುವು ಸಂಹರಿಸಿ, ಇದ್ದಲ್ಲಿ ಸ್ಥಾಪಿ ದನು. ಅಲ್ಲಿ ಸ್ನಾನ ಮಾಡಿದವನು ಆ ಕೋಟಿತೀರ್ಥ ಪ್ರಭಾವದಿಂದ ಪುಂ ಡರೀಕ ಯಜ್ಞ ಫಲವನ್ನು ಪಡೆದು ವಿಷ್ಣುಲೋಕಕ್ಕೆ ಹೋಗುತ್ತಾನೆ.

ಅನಂತರ ನಾರಾಯಣನ ಸ್ಥಾನಕ್ಕೆ ಹೋಗಬೇಕು. ಅಲ್ಲಿ ಹರಿಯು ಸದಾ ಸನ್ನಿಹಿತನಾಗಿರುವನು, ಬ್ರಹ್ಮಾದಿ ದೇವತೆಗಳು, ತಪೋಧನರಾದ ಋಷಿ ಗಳು ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶ ರುದ್ರರೂ ಜನಾರ್ದ ನನ್ನು ಉಪಾಸನೆ ಮಾಡುತ್ತಿರುವರು.

ಅದ್ಭುತ ಕರ್ಮವುಳ್ಳ ವಿಷ್ಣುವಿನ ಶಾಲಿಗ್ರಾಮವೆಂಬ ಸ್ಥಾನವಿರು ವುದು ತ್ರಿಲೋಕೇಶ್ವರನೂ, ಅಚ್ಯುತನೂ, ವರಪ್ರದನೂ ಆದ ವಿಷ್ಣುವನ್ನು ಆ ಶಾಲಿಗ್ರಾಮ ಕ್ಷೇತ್ರದಲ್ಲಿ ದರ್ಶನ, ನಮಸ್ಕಾರ ಅರ್ಚನಾದಿಗಳಿಂದ ಸೇವಿಸಿ ದವನು, ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ; ಮತ್ತು ವಿಷ್ಣು ಲೋಕಕ್ಕೆ ಹೋಗುತ್ತಾನೆ.

ಅಲ್ಲಿಯೇ ಸರ್ವಪಾಪವಿಮೋಚನ ಉದಪಾನವಿದೆ. ಆ ಕೂಪದಲ್ಲಿ ಸದಾ ನಾಲ್ಕು ಸಮುದ್ರಾಭಿಮಾನಿ ದೇವತೆಗಳೂ ಸನ್ನಿಹಿತರಾಗಿರುವರು. ಅಲ್ಲಿ ಸ್ನಾನಮಾಡಿದವನು ಎಂದಿಗೂ ದುರ್ಗತಿಯನ್ನು ಹೊಂದುವುದಿಲ್ಲವು. ಅಲ್ಲಿ ವರದನೂ, ಅವ್ಯಯನೂ, ಮಹಾದೇವನೂ ಆದ ವಿಷ್ಣುವನ್ನು ಸೇವಿಸಿ ದವನು, ಋಣಗಳಿಂದ ಮುಕ್ತನಾಗಿ ಚಂದ್ರನಂತೆ ಪ್ರಕಾಶಿಸುವನು.

ಜಾತಿಸ್ಮರವೆಂಬ ತೀರ್ಥವಿರುವುದು. ಮನೋನಿಗ್ರಹದಿಂದ ಶಾಂತ ಮನಸ್ಕನಾಗಿ ಅಲ್ಲಿ ಸ್ನಾನಮಾಡಿ ಶುಚಿಭೂತನಾದವನು, ನಿಸ್ಸಂಶಯವಾ ಗಿಯೂ ಜಾತಿ ಸ್ಮರತ್ವವನ್ನು (ಪೂರ್ವಜನ್ಮಗಳ ಸ್ಮರಣೆ ಸಾಮರ್ಥ್ಯವನ್ನು) ಪಡೆಯುತ್ತಾನೆ.

ವಟೇಶ್ವರಪುರಕ್ಕೆ ಹೋಗಿ ಕೇಶವನನ್ನು ಅರ್ಚಿಸಿ ಉಪವಾಸ ಮಾಡಿದರೆ, ತನಗೆ ಇಷ್ಟಬಂದ ಲೋಕಗಳಿಗೆ ಹೋಗುತ್ತಾನೆ.

ಅನಂತರ ವಾಮನ ಕ್ಷೇತ್ರಕ್ಕೆ ಹೋಗಿ ಸರ್ವಪಾಪ ಪ್ರಮೋಚನ ತೀರ್ಥವನ್ನು, ಸೇವಿಸಿ ಶ್ರೀಹರಿಯನ್ನು ನಮಸ್ಕರಿಸಿದರೆ ದೇವೇಶನ ಅನುಗ್ರಹದಿಂದ ಎಂದಿಗೂ ದುರ್ಗತಿ ಹೊಂದದೆ, ಮುಕ್ತನಾಗಿ ಸಮಸ್ತಾಭೀಷ್ಟಗಳನ್ನು ಪಡೆಯುವನು.

ಭರತನ ಆಶ್ರಮಕ್ಕೆ ಹೋಗಿ ಅಲ್ಲಿ ಸರ್ವಪಾಪ ಪ್ರಮೋಚನವಾದ ಮಹಾ ಪಾತಕನಾಶನಿಯಾದ ಕೌಶಿಕೀನದಿಯನ್ನು ಸೇವಿಸಿದ ಮಾನವನು ರಾಜಸೂಯ ಯಜ್ಞದ ಫಲವನ್ನು ಹೊಂದುತ್ತಾನೆ.

ಅನಂತರ ಉತ್ತಮವಾದ ಚಂಪಕಾರಣ್ಯಕ್ಕೆ ಹೋಗಿ, ಅಲ್ಲಿ ಒಂದು ರಾತ್ರಿ ವಾಸಮಾಡುವುದರಿಂದ ಸಹಸ್ರ ಗೋದಾನಮಾಡಿದ ಫಲವನ್ನು ಪಡೆಯುತ್ತಾನೆ.

ಪರಮಸಮ್ಮತವಾದ ಗೋವಿಂದತೀರ್ಥವನ್ನು ಸೇವಿಸಿ ಒಂದು ರಾತ್ರಿ ಅಲ್ಲಿ ಉಪವಾಸಮಾಡಿ ವಾಸಿಸುವುದರಿಂದ ಅಗ್ನಿಷ್ಟೋಮ ಫಲವನು ಹೊಂದುತ್ತಾನೆ.

ಅಲ್ಲಿ ಉಮಾದೇವಿಯಿಂದ ಕೂಡಿದ ಮಹಾ ಕಾಂತಿಯಿಂದ ಪ್ರಕಾಶಿಸುವ ವಿಶ್ವೇಶ್ವರನನ್ನು ದರ್ಶನಮಾಡಿ ಮಿತ್ರಾವರುಣರುಗಳ ಲೋಕವನ್ನು ಪಡೆಯುತ್ತಾನೆ. ಅಲ್ಲಿ ಮೂರು ರಾತ್ರಿ ಉಪವಾಸ ಮಾಡುವುದರಿಂದ ಅಗ್ನಿಷ್ಟೋಮ ಫಲವನ್ನು ಹೊಂದುತ್ತಾನೆ.

ಕನ್ಯಾ (ಸಂವೇದ್ಯ) ವಸಥಕ್ಕೆ ಹೋಗಿ. ಇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಂಡು, ನಿಯತನಾಗಿ, ಮಿತಾಹಾರಿಯಾಗಿ ಪ್ರಜಾಪತಿ (ಮನು) ಲೋಕಗಳಿಗೆ ಹೋಗುತ್ತಾನೆ.

ಕನ್ಯಾಕ್ಷೇತ್ರದಲ್ಲಿ ಯತ್ಕಿಂಚಿತ್ ದಾನಾದಿಗಳನ್ನು ಯಾರು ಕೊಡುತ್ತಾರೆಯೋ ಅದು ಅಣುಮಾತ್ರವಾದರೂ ಸಹ ಅಕ್ಷಯ ಫಲಪ್ರದವಾಗುವುದೆಂದು ಶಂಶಿತಕವ್ರತರಾದ ಋಷಿಗಳು ಹೇಳುತ್ತಾರೆ.

ನಿಷ್ಕ್ರಾವಾಸವೆಂಬ ಸ್ಥಾನಕ್ಕೆ ಹೋದವನು ಅಶ್ವಮೇಧ ಫಲವನ್ನು ಪಡೆದು ವಿಷ್ಣುಲೋಕಕ್ಕೆ ಹೋಗುತ್ತಾನೆ.

ತ್ರಿಲೋಕದಲ್ಲಿ ವಿಶ್ರುತವಾದ **ನಿಷ್ಕ್ರಾಸಂಗಮ**ದಲ್ಲಿ ಯಾರು ದಾನವನ್ನು ಕೊಡುತ್ತಾರೆಯೋ, ಅವರು ಅನಾಮಯವಾದ, ನಿರುಪದ್ರವ ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ಮೂರು ಲೋಕದಲ್ಲಿ ಪ್ರಸಿದ್ಧವಾದ **ವಶಿಷ್ಠಾಶ್ರಮವು** ಅಲ್ಲಿ ಇರುವುದು ಅಲ್ಲಿ ತೀರ್ಥದಲ್ಲಿ ಸ್ನಾನಮಾಡಿದವನು ವಾಜಪೇಯ ಫಲವನ್ನು ಪಡೆಯುತ್ತಾನೆ.

ದೇವರ್ಷಿ ಗಣಗಳಿಂದ ಸೇವಿತವಾದ **ದೇವಕೂಟಕ್ಕೆ** ಹೋಗುವುದರಿಂದ ಅಶ್ವಮೇಧ ಫಲವನ್ನು ಹೊಂದುವುದು ಮಾತ್ರವಲ್ಲದೆ ತನ್ನ ಕುಲವನ್ನು ಉದ್ಧರಿಸುತ್ತಾನೆ.

ಅಲ್ಲಿಂದ **ಕೌಶಿಕಮುನಿಹ್ರದ (ತೀರ್ಥ)**ಕ್ಕೆ, ಯಾವ ಸ್ಥಳದಲ್ಲಿ ವಿಶ್ವಾಮಿತ್ರ ಮುನಿಯು ಸಿದ್ಧಿಯನ್ನು ಹೊಂದನೋ, ಕೌಶಿಕನೆಂದು ಪ್ರಸಿದ್ಧನಾಗಿರುವನೋ ಅಲ್ಲಿಗೆ ಹೋಗಿ, ಧೀರನಾದವನು ಆ ಕೌಶಿಕ್ಯ ಕ್ಷೇತ್ರದಲ್ಲಿ ಒಂದು ಮಾಸ ವಾಸಿಸುವುದರಿಂದ ಅಶ್ವಮೇಧಯಾಗದಿಂದ ಏನು ಪುಣ್ಯವನ್ನು ಪಡೆಯುವನೋ ಅಷ್ಟು ಪುಣ್ಯವನ್ನು ಒಂದು ಮಾಸದಲ್ಲಿ ಪಡೆಯುತ್ತಾನೆ.

ಸರ್ವತೀರ್ಥವೆಂಬ ಮಹಾಹ್ರದವನ್ನು ಯಾವನು ಸೇವಿಸುತ್ತಾನೆಯೋ ಅವನು ಬಹು ಸುವರ್ಣವನ್ನು ಪಡೆಯುತ್ತಾನೆ. ಎಂದಿಗೂ ದುರ್ಗತಿಯನ್ನು ಹೊಂದುವುದಿಲ್ಲವು.

ವೀರಾಶ್ರಮದಲ್ಲಿ ವಾಸಿಸುತ್ತಿರುವ **ಕುಮಾರಸ್ವಾಮಿಯನ್ನು** ಸೇವಿಸಿ ನಮಸ್ಕರಿಸಿದವನು ಅಶ್ವಮೇಧ ಫಲವನ್ನು ಪಡೆದು ಇಂದ್ರ (ಸ್ವರ್ಗ) ಲೋಕಕ್ಕೆ ಹೋಗುತ್ತಾನೆ.

ನಂದಿನಿಗೆ ಹೋಗಿ ದೇವತೆಗಳಿಂದ ಸೇವಿತವಾದ **ನಂದನೀ ಕೂಪ**ದಲ್ಲಿ ಸ್ನಾನ ಮಾಡಿದವನು, ನರಮೇಧ ಮಾಡುವುದರಿಂದ ಬರುವಷ್ಟು ಪುಣ್ಯ ಫಲವನ್ನು ಪಡೆಯುವನು.

ಕೌಶಿಕೀ ಅರುಣಗಳ ಮಧ್ಯೆ ಕಾಳಿಕಾಸಂಗಮದಲ್ಲಿ ಸ್ನಾನಮಾಡುತ್ತಾ ಮೂರು ದಿವಸ ಉಪವಾಸಮಾಡಿದ ವಿದ್ವಾಂಸನು ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ.

ಉರ್ವಸೀ ತೀರ್ಥಕ್ಕೆ ಹೋಗಿ ಸೋಮಾಶ್ರಮಕ್ಕೂ, ಕುಂಭ ಕರ್ಣಾಶ್ರಮಕ್ಕೂ ಹೋಗಿ ಅಲ್ಲಿರುವ ತೀರ್ಥಗಳಲ್ಲಿ ಸ್ನಾನಮಾಡಿದ ಬುಧನು ಭೂಲೋಕದಲ್ಲಿ ಸರ್ವರಿಂದಲೂ ಪೂಜಿತನಾಗುತ್ತಾನೆ.

ಸಮಾಹಿತನಾಗಿ ಕೋಕಾಮುಖದಲ್ಲಿ ಸ್ನಾನಮಾಡಿದ ಬ್ರಹ್ಮ ಚಾರಿಯು ಜಾತಿಸ್ಮರತ್ವವನ್ನು ಪಡೆಯುತ್ತಾನೆಂಬುದನ್ನು ಪುರಾತನರನೇ ಕರು ನೋಡಿರುತ್ತಾರೆ.

ಶಕೃನ್ನದಿಗೆ ಹೋಗಿ ಸೇವಿಸಿದ ದ್ವಿಜನು ಕೃತಾರ್ಥನಾಗಿ ಸರ್ವ ಪಾಪ ಗಳಿಂದ ರಹಿತನಾಗಿ ವಿಶುದ್ಧಾತ್ಮನಾಗಿ ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಋಷಭದ್ವೀಪವನ್ನು ತಲಪಿ ಕ್ರೌಂಚನಿಷೂದನನ್ನು ಸೇವಿಸಿ ಸರಸ್ವತಿಯಲ್ಲಿ ಸ್ನಾನಮಾಡಿದವನು ವಿಮಾನದಲ್ಲಿ ಕುಳಿತು ಪ್ರಕಾಶಿಸುತ್ತಾನೆ.

ಮುನಿಗಳಿಂದ ನಿಷೇವಿತವಾದ ಔದ್ದಾನಕತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನ ಮಾಡಿದವನು ಸರ್ವಪಾಪಗಳಿಂದ ಮುಕ್ತನಾಗುತ್ತಾನೆ.

ಬ್ರಹ್ಮರ್ಷಿ ಸೇವಿತವಾದ ಪುಣ್ಯಕರವಾದ ಬ್ರಹ್ಮತೀರ್ಥದಲ್ಲಿ ಸ್ನಾನ ಪಾನ ಸೇವನೆಗಳಿಂದ ಮಾನವನು ವಾಜಪೇಯ ಫಲವನ್ನು ಹೊಂದುವನೆಂಬ ವಿಷಯದಲ್ಲಿ ಸಂಶಯವಿಲ್ಲವು.

ಅನಂತರ ಚಂಪಾಕ್ಷೇತ್ರಕ್ಕೆ ಹೋಗಿ ಭಾಗೀರಥಿಯಲ್ಲಿ ಸ್ನಾನ, ತರ್ಪ ಣಾದಿಗಳನ್ನು ಮಾಡಿ, ದಂಡಾರ್ಪಣವನ್ನು ತಲಪಿ ಸಹಸ್ರ ಗೋದಾನ ಮಾಡಿದ ಮಹಾ ಫಲವನ್ನು ಪಡೆಯುವನು.

ಅಲ್ಲಿಂದ ಪುಣ್ಯ ಜನರಿಂದ ವಿಶೇಷವಾಗಿ ಸೇವಿತವಾಗಿರುವ ಪುಣ್ಯಕರ ಲಾ (ವೀ) ವಢಿಕಾಕ್ಕೆ ಹೋಗಿ ಸೇವಿಸಿದವನು ವಾಜಪೇಯ ಯಾಗ ಮಾಡಿದ ಪುಣ್ಯವನ್ನು ಪಡೆದು ವಿಮಾನಾರೂಢನಾಗಿ ಸರ್ವರಿಂದಲೂ ಪೂಜಿತ ನಾಗುತ್ತಾನೆ.

ಹೀಗೆಂದು ಗಯಾದಿ ತೀರ್ಥಮಾಹಾತ್ಮೆಯು ನಾರದರು ಧರ್ಮ ರಾಯನಿಗೆ ಉಪದೇಶಮಾಡಿದ್ದು ಪದ್ಮಪುರಾಣದ ಆದಿಖಂಡದಲ್ಲಿ ಉಕ್ತವಾಗಿದೆ.

ಗಯಾ ಮಾಹಾತ್ಮ್ಯೆಯು ಆಗ್ನೇಯ ಪುರಾಣದಿಂದ

ಉತ್ತಮವಾದ ಗಯಾತೀರ್ಥದಲ್ಲಿ ಗಯಾಸುರನು ತಪಸ್ಸನ್ನಾಚರಿಸಿದನು, ಆತನ ತಪಸ್ಸಿನಿಂದ ತಪ್ತರಾದ ದೇವತೆಗಳು ಕ್ಷೀರಸಮುದ್ರಶಾಯಿಯಾದ ವಿಷ್ಣುವನ್ನು ಕುರಿತು ಶರಣುಹೊಂದಿ "ನಮ್ಮನ್ನು ಈ ಗಯಾಸುರನ ಬಾಧೆಯಿಂದ ರಕ್ಷಿಸು" ಎಂದರು. "ಹಾಗೆಯೇ ಆಗಲಿ" ಎಂದು ಹೇಳಿ ಹರಿಯು ದೈತ್ಯನನ್ನು ಕುರಿತು "ವರವನ್ನು ಕೇಳು" ಎಂದನು. ದೈತ್ಯನು "ಸರ್ವತೀರ್ಥದ ದೆಶೆಯಿಂದ ನಾನು ಪವಿತ್ರನಾಗಬೇಕೆಂಬ ಆಶೆಯು ನನ್ನದು" ಎಂದನು. "ಹಾಗೆ ಆಗಲಿ" ಎಂದು ವಿಷ್ಣುವು ದೈತ್ಯನಿಗೆ ಹೇಳಿ ಹೊರಟು ಹೋದನು. ದೇವತೆಗಳು ಇದನ್ನು ಕಂಡು ಹೊರಟು ಭೂಮಿಯಲ್ಲಾಗಲಿ ಸ್ವರ್ಗದಲ್ಲಾಗಲಿ ಏನೂ ಇಲ್ಲ. ಮಹೀಮಂಡಲವು ಶೂನ್ಯವಾಗಿರಲು ಬ್ರಹ್ಮಾದಿ ದೇವತೆಗಳು ಸ್ವರ್ಗಕ್ಕೆ ಹೋಗಿ ಹರಿಯನ್ನು ಕುರಿತು ಭೂಮಿಯು ತ್ರಿದಿವ (ಸ್ವರ್ಗ) ವೂ ಶೂನ್ಯವಾಗಿದೆ" ಎಂದರು. ಹರಿಯು ಬ್ರಹ್ಮನನ್ನು ಕುರಿತು ದೈತ್ಯ ದರ್ಶನದಿಂದಲೇ, "ನೀನು ತ್ರಿದಶ (ದೇವತೆಗಳೊ) ರೊಡಗೆ ಯಾಗ ಮಾಡುವುದಕ್ಕಾಗಿ ದೈತ್ಯ ದೇಹವನ್ನು ಪ್ರಾರ್ಥಿಸು" ಎಂದನು ಅದನ್ನು ಕೇಳಿ, ದೇವತೆಗಳಿಂದ ಕೂಡಿದ ಬ್ರಹ್ಮನು ಗಯಾಸುರನನ್ನು ಕುರಿತು "ನಿನ್ನನ್ನು ಅತಿಥಿಯಾಗಿ ಪ್ರಾರ್ಥಿಸುತ್ತೇನೆ. ನಿನ್ನ ಪಾವನವಾದ ದೇಹವನ್ನು ಯಾಗ ಕ್ಕೋಸ್ಕರವಾಗಿ ಕೊಡು" ಎಂದನು, ಗಯಾಸುರನು "ತಥಾ" "ಹಾಗೆಯೇ ಆಗಲಿ" ಎಂದನು. ಅನಂತರ ಅವನ ಶಿರಸ್ಸಿನ ಮೇಲೆ ಬಿದ್ದನು. ವಿಭುವಾದ ಬ್ರಹ್ಮನು ಭೂಮಿಯಲ್ಲಿ ಯಾಗವನ್ನು ಮಾಡಿದನು. ಪುನಃ ಬ್ರಹ್ಮನು, ಅಸುರನ ದೇಹ ಚಲಿಸಲು, ವಿಷ್ಣುವನ್ನುಕುರಿತು "ಪೂರ್ಣವಾಯಿತು. ಪೂರ್ಣಾಹುತಿ ಕಾಲದಲ್ಲಿ ಅಸುರನು ಚಲಿಸಿದನು ಜ್ವಲಿಸಿದನು."ಎಂದನು ಆಗ ವಿಷ್ಣುವು ಧರ್ಮನನ್ನು ಕರೆದು "ದೇವಮಯವಾದ ಶಿಲೆಯನ್ನು ಧರಿಸು. ಆ ನಿನ್ನಮೇಲೆ ಸರ್ವ ದೇವತೆಗಳೂ ವಾಸಿಸಲಿ. ನನ್ನ ಗದಾಧರನೆಂಬ ಮೂರ್ತಿಯೂ ಆ ಸಮಸ್ತ

ಅಮರರೊಂದಿಗೆ ಸನ್ನಿಹಿತನಾಗಿ ನಿಲ್ಲುತ್ತಾನೆ" ಎಂದನು. ಅದನ್ನು ಕೇಳಿ ಧರ್ಮನು ದೇವಮಯಿಯಾದ ಪರಮೋತ್ತಮವಾದ ಆ ಶಿಲೆಯನ್ನು ಧರಿಸಿದನು, ಆ ಉತ್ತಮವಾದ ಧರ್ಮವತಿಯಲ್ಲಿ ಧರ್ಮನ ದೆಶೆಯಿಂದ, "ಧರ್ಮವ್ರತಾ" ಎಂಬ ಮಗಳು ಹುಟ್ಟಿದಳು, ಬ್ರಹ್ಮನ ಪುತ್ರನಾದ ಮರೀಚಿ ಋಷಿಯು, ಆ ತಪಸ್ವಿನಿಯನ್ನು ಲಗ್ನವಾದನು. ಹೇಗೆ ಹರಿಯು ಲಕ್ಷ್ಮೀ ದೇವಿಯೊಡನೆ ಕ್ರೀಡಿಸಿದನೋ, ಶಂಭುವು ಗೌರಿಯೊಡನೆ ರಮಿಸಿ ಕ್ರೀಡಿಸಿದನೋ ಅದರಂತೆ, ಧರ್ಮವ್ರತೆ ಮರೀಚಿಗಳು ಆನಂದದಿಂದ ಕ್ರೀಡಿಸಿದರು. ಮಹರ್ಷಿಯು ಒಂದು ದಿನ ಅರಣ್ಯದಿಂದ ಕುಶಪುಷ್ಪಾದಿಗಳನ್ನು ತಂದು ಶ್ರಮದಿಂದ ಆಯಾಸಪಟ್ಟು, ಭೋಜನವನ್ನು ತೀರಿಸಿ ಧರ್ಮವ್ರತೆಯನ್ನು ಕುರಿತು "ಪಾದಸಂಹನನವನ್ನು ಮಾಡು; ಸ್ವಲ್ಪ ಕಾಲುಗಳನ್ನು ಒತ್ತು" ಎಂದನು "ಹಾಯೇ ಆಗಲಿ" ಎಂದು ಹೇಳಿ ವಿಶ್ರಾಂತನಾದ ಮುನಿಯ ಪಾದಗಳನ್ನು ಆತನ ಪ್ರಿಯೆಯು ಸಂಹನ ಮಾಡಿದಳು. ಇದಾದ ಸ್ವಲ್ಪಹೊತ್ತಿನಲ್ಲೇ ಮುನಿಯು ನಿದ್ರೆಮಾಡುತ್ತಿರಲು ಬ್ರಹ್ಮನು ಬಂದನು. ಈಗ ಧರ್ಮವ್ರತೆಯು"ನಾನು ಬ್ರಹ್ಮನನ್ನು ಸತ್ಕಾರದಿಂದ ಅರ್ಚಿಸಲಾ? ಅಥವ ಪಾದಸಂಹನನವನ್ನು ಮಾಡುತ್ತಿರಲಾ? ಬ್ರಹ್ಮನು ನನ್ನ ಗುರುವಿನ ಗುರುವು. (ಗಂಡನ ಗುರು ಮತ್ತು ತಂದೆ) ನನ್ನ ಮಾವಂದಿರು, ಪರಮ ಗುರುಗಳು; ಪೂಜ್ಯರು." ಎಂದು ಯೋಚಿಸಿ ಬ್ರಹ್ಮನನ್ನು ಪೂಜಾದಿ ಅರ್ಹಣ (ಪೂಜಾ ಸಾಮಗ್ರಿ) ಗಳಿಂದ ಪೂಜಿಸಿದಳು. ಮರಿಚಿಯು ಆಕೆಯನ್ನು ನೋಡಿ ತನ್ನ ಉಕ್ತಿಯನ್ನು ಅತಿಕ್ರಮಿಸಿದ್ದರಿಂದ ಕೋಪದಿಂದ "ನೀನು ಶಿಲೆಯಾಗುವಿ" ಎಂದು ಶಪಿಸಿದನು.

ಧರ್ಮವ್ರತೆಯು ಆತನನ್ನು ಕುರಿತು "ನಾನು ನಿಮ್ಮ ಪಾದಾಭ್ಯಂಗವನ್ನು ಪರಿತ್ಯಜಿಸಿ, ನನ್ನಿಂದ ನಿಮ್ಮ ಗುರುಗಳು ಪೂಜಿಸಲ್ಪಟ್ಟರು. ನಾನು ದೋಷರಹಿತಳು ಆದುದರಿಂದ ನೀವು ಶಂಕರನಿಂದ ಶಾಪವನ್ನು ಪಡೆಯುವಿರಿ ಎಂದು ಹೇಳಿ ಆ ಧರ್ಮಾತ್ಮಳಾದ ಧರ್ಮವ್ರತಾದೇವಿಯು ಪ್ರಥುಕ್ ಬೇರೆಯಾಗಿ ಶಾಪವನ್ನು ಧರಿಸಿ ಸ್ವೀಕರಿಸಿ ಅಗ್ನಿಯನ್ನು ಸೇವಿಸಿದಳು. ಹತ್ತು ಸಹಸ್ರ ವರ್ಷ ಉಗ್ರತಪಸ್ಸನ್ನಾಚರಿಸಿದಳು. ಅನಂತರ ವಿಷ್ಣ್ವಾದಿ ದೇವತೆಗಳು ಬಂದು ಆಕೆಯನ್ನು ಕುರಿತು "ವರನನ್ನು ಕೇಳು" ಎಂದರು, ಧರ್ಮವ್ರತೆಯು ಅವರನ್ನು ಕುರಿತು "ನನ್ನ ಶಾಪವು ನಿವರ್ತವಾಗಿ ಹೋಗಲಿ, ಶಂ

ಹೃತವಾಗಲಿ" ಎಂದಳು ದೇವತೆಗಳು–"ಮರೀಚಿಯಿಂದ ಕೊಟ್ಟ ಶಾಪವು ಅನ್ಯಥಾ ಆಗಲಾರದು ನೀನು ದೇವಾಂಘ್ರಿ (ಪರಮಾತ್ಮನ ಪಾದ) ಪ್ರಕ್ಷಾಳನೆಯ ಉದಕದಿಂದ ಪವಿತ್ರ ಶಿಲೆಯಾಗಿ ಪೂಜಿತಳಾಗುವಿ. ನೀನು ದೇವವ್ರತಾ ಎಂಬ ನಾಮದಿಂದ ದೇವಶಿಲೆಯೂ, ಸರ್ವ ದೇವಾದಿ ರೂಪಿಣಿಯೂ ಸರ್ವತೀರ್ಥಮಯಿಯೂ, ಸರ್ವದೇವಮಯಿಯೂ ಈ ಗಯಾಸುರನು ಚಲಿಸದಿರುವುದರಿಂದ, ನಿಶ್ಚಲಳೂ ಪುಣ್ಯಾತ್ಮಳೂ ಆಗಿರುವಿ" ಎಂದರು.

ದೇವವ್ರತೆಯು "ಹಾಗೆ ನೀವೆಲ್ಲರೂ ನನ್ನ ವಿಷಯದಲ್ಲಿ ಸಂತುಷ್ಟರಾಗಿ ಪ್ರೀತಿಯುಳ್ಳವರಾಗಿದ್ದರೆ, ನೀವೆಲ್ಲರೂ ಎಂದರೆ ಬ್ರಹ್ಮಾ, ವಿಷ್ಣು, ರುದ್ರಾದಿಗಳೂ ಗೌರೀ, ಲಕ್ಷ್ಮೀ ಸರಸ್ವತೀ ಮೊದಲಾದ ಸಕಲ ದೇವತೆಗಳೂ ಸರ್ವದಾ ಸ್ಥಿತಾಗಿ ಸನ್ನಿಹಿತರಾಗಿ ವಾಸಿಸಿರಿ" ಎಂದಳು.

ಈ ರೀತಿಯಾದ ಆ ದೇವವ್ರತೆಯ ಮಾತನ್ನು ಕೇಳಿ "ತಥಾಸ್ತು" ಹಾಗೆಯೇ ಸರಿ ಎಂದು ಹೇಳಿ ಅವರೆಲ್ಲರೂ ದ್ಯುಲೋಕಕ್ಕೆ (ಸ್ವರ್ಗಕ್ಕೆ) ಹೊರಟುಹೋದರು.

ಆಕೆಯು ಧರ್ಮದಿಂದ ಈ ಆಸುರನ ದೇವಮಯೀ ಶಿಲೆಯು ಧೃತವಾಯಿತು. ದೈತ್ಯನು ಶಿಲೆ ಸಹಿತವಾಗಿಯೇ ಚಲಿಸಿ ಅನಂತರ ರುದ್ರಾದಿಗಳು ಸ್ಥಿತರಾದರು. ದೈತ್ಯರು ದೇವತೆಗಳಿಂದ ಕೂಡಿಕೊಂಡೇ ಚಲಿಸಿದರು. ಆಗ ದೇವತೆಗಳಿಂದ ಪ್ರಸಾರಿತನಾಗಿ ಸಮಾಧಾನ ಮಾಡಲ್ಪಟ್ಟನು. ಕ್ಷೀರ ಸಮುದ್ರದಲ್ಲಿರುವ ಹರಿಯು ತನ್ನ ಶ್ರೀ ಗದಾಧರ ಮೂರ್ತಿಯನ್ನು ಕೊಟ್ಟನು. "ಭೋ, ದೇವತೆಗಳಿರಾ, ನೀವೆಲ್ಲರೂ ಹೊರಡಿ. ನಾನೇ ದೇವಗಮ್ಯ ಮೂರ್ತಿಯೊಡನೆ ಬರುತ್ತೇನೆ" ಎಂದು ಗದಾಧರ ದೇವನು ವ್ಯಕ್ತ ಮತ್ತು ಅವ್ಯಕ್ತ ಈ ರೀತಿ ಉಭಯಾತ್ಮಕ ರೂಪದಿಂದ ಸ್ಥಿತನಾದನು. ಚಲಿಸದಿರಲು ಸ್ವಯಂ ಆದಿಗದಾಧರ ದೇವನೇ ಬಂದು ನಿಂತನು.

ಪೂರ್ವದಲ್ಲಿ ಗದನೆಂಬ ರೌದ್ರ ದೈತ್ಯನು ವಿಷ್ಣುವಿನಿಂದ ಹತನಾದನು. ಅವನ ಅಸ್ಥಿಯಿಂದ ವಿಶ್ವಕರ್ಮನಿಂದ ನಿರ್ಮಿತವಾದ ಆದ್ಯಗದೆಯು ಅದು. ಈ ಆದ್ಯಗದೆಯಿಂದ ಹೇತಿ ಮೊದಲಾದ ದೈತ್ಯರು, ರಾಕ್ಷಸರು, ಗದಾಧರನಿಂದ ಹತರಾದರು. ಆದುದರಿಂದಲೇ ಆದಿಗದಾಧರನೆಂದು ಪ್ರಸಿದ್ಧನಾಗಿರುವನು.

ದೇವಮಯವಾದ ಸರ್ವ ದೇವತೆಗಳಿಂದ ಕೂಡಿದ ಶಿಲೆಯಲ್ಲಿ ಆದಿಗದಾಧರನು ಬಂದು ಸ್ಥಿರನಾಗಿ ನಿಲ್ಲಲು, ಗಯಾಸುರನು ನಿಶ್ಚಲನಾದನು. ಚಲನೆಯು ನಿಂತಿತು. ಅನಂತರ ಬ್ರಹ್ಮನು ಪೂರ್ಣಾಹುತಿಯನ್ನು ಕೊಟ್ಟನು. ಆಗ ಗಯಾಸುರನು ದೇವತೆಗಳನ್ನು ಕುರಿತು "ನಿಮ್ಮಿಂದ ನಾನು ಏತಕ್ಕಾಗಿ ಹೀಗೆ ವಂಚಿತನಾದೆ? ನನ್ನನ್ನು ಏತಕ್ಕಾಗಿ ಈರೀತಿ ಮೋಸಮಾಡಿದಿರಿ?" ಎಂದ ಕೇಳಿದನು. "ವಿಷ್ಣುವಿನ ವಚನಮಾತ್ರದಿಂದ ಏನು ತಾನೆ ಆಗಲಾರದು. ನಾನು ನಿಶ್ಚಲನಾದೆ. ಎಲೈ ದೇವತೆಗಳಿರಾ ನಾನು ನಿಮ್ಮಿಂದ ಆಕ್ರಾಂತನಾಗಿದ್ದರೆ ನನಗೆ ನೀವುಗಳು ವರವನ್ನು ಕೊಡಲು ಅನರ್ಹರಾಗಿದ್ದೀರಿ" ಎಂದನು.

ದೇವತೆಗಳು:—ತೀರ್ಥವನ್ನು ರಚನೆಮಾಡಲು ನಮ್ಮಿಂದ ನೀನು ನಿಶ್ಚಲೀಕೃತನಾಗಿದ್ದಿ. ಚಲಿಸದಂತೆ ಒಂದು ಕಡೆ ಇರುವಂತಾಗಿರುವಿ. ವಿಷ್ಣುವಿನ, ಶಂಭುವಿ (ರುದ್ರ)ನ, ಬ್ರಹ್ಮ ಕ್ಷೇತ್ರವು ನಿನ್ನದಾಗುವುದು. ಸರ್ವತೀರ್ಥಗಳ ದೆಸೆಯಿಂದ ಗಯಾತೀರ್ಥವೆಂದು ಪ್ರಸಿದ್ಧವಾಗಿ ಪಿತ್ರಾದಿಗಳಿಗೆ ಬ್ರಹ್ಮಲೋಕಪ್ರದವಾಗುವುದು" ಎಂದು ಹೇಳಿ ಆ ದೇವ ದೇವತೆಯರೆಲ್ಲರೂ ತೀರ್ಥಾದಿ ರೂಪದಿಂದ ಸ್ಥಿತರಾಗಿ ಅಲ್ಲಿಯೇ ನೆಲಸಿದರು. ಪಂಚಕ್ರೋಶವನ್ನೂ, ಗಯಾಕ್ಷೇತ್ರವನ್ನೂ ಪಂಚಾಶತ್ ಪಂಚ (೫೫) ಕ್ಷೇತ್ರಗಳನ್ನು ದಕ್ಷಿಣಾತ್ವೇನ ಯಜ್ಞ ಸಮಾಪನೆಗೋಸ್ಕರ ದಾನ ಕೊಟ್ಟನು. ಗ್ರಾಮಗಳನ್ನೂ ಸುವರ್ಣ ಗಿರಿಯನ್ನೂ ಮಧುವನ್ನು ಶ್ರವಿಸುವ ನದಿಗಳನ್ನೂ ಧಧಿ, ಆಜ್ಯ, ಹಾಲು ತುಪ್ಪ ಜೆಣ್ಣೆಗಳಿಂದ ಕೂಡಿದ ಸರೋವರಗಳನ್ನೂ ಬಹುವಾದ ಅನ್ನಪರ್ವತಗಳನ್ನೂ ಕಾಮಧೇನು ಕಲ್ಪತರು ಭಂಗಾರ ಬೆಳ್ಳಿಯ ಮನೆಗಳನ್ನೂ ನಿರ್ಮಿಸಿಕೊಟ್ಟು "ವಿಪ್ರೇಂದ್ರರಿರಾ, ಅಲ್ಪರನ್ನು ಯಾರನ್ನೂ ಏನನ್ನೂ ಯಾಚಿಸಬೇಡಿ" ಎಂದು ಹೇಳಿ ಪ್ರಭುವು ಬೇಕು ಬೇಕಾದವುಗಳನ್ನು ಕೊಟ್ಟನು. ಧರ್ಮಯಾಗದಲ್ಲಿ ಪ್ರಲೋಭದಿಂದ ಧನಾದಿಗಳನ್ನು ಸ್ವೀಕರಿಸಿ, ಹೋಗದಂತೆ ಗಯಾದಲ್ಲಿ ಯಾವಾಗ ಅವರೆಲ್ಲರೂ ಕಾಯಂ ಆಗಿ ನಿಂತೇಬಿಟ್ಟರೋ ಆಗ ಬ್ರಹ್ಮನಿಂದ "ನೀವೆಲ್ಲರೂ ವಿದ್ಯಾರಹಿತರಾಗಿರಿ. ಅವಿದ್ಯಾವಂತರಾಗಿರಿ.

ವಿದ್ಯಾವಿವರ್ಜಿತಾ ಯೂಯಂ ತೃಷ್ಣಾಯುಕ್ತಾ ಭವಿಷ್ಯಥ ।
ದುಗ್ಧಾದಿ ವರ್ಜಿತಾ ನದ್ಯಃ ಶೈಲಾಃ ಪಾಷಾಣರೂಪಿಣಃ ॥

ಆಶಾಯುಕ್ತರಾಗಿರಿ, ನದಿಗಳು, ದಧಿ, ಕ್ಷೀರ, ನೀರುರಹಿತವಾಗಲಿ ಶೈಲಗಳೆಲ್ಲವೂ ಪಾಷಾಣರೂಪವಾಗಲಿ." ಇತ್ಯಾದಿ ರೀತಿ ಶಪಿಸಲ್ಪಟ್ಟಿತು. ಶಾಪದಿಂದ ಸರ್ವವನ್ನೂ ಕಳೆದುಕೊಂಡ ಬ್ರಾಹ್ಮಣರು ಬ್ರಹ್ಮನನ್ನು ಕುರಿತು "ನಮ್ಮನ್ನು ಬದುಕಿ ಜೀವಿಸಲು ಅನುಗ್ರಹಿಸು" ಎಂದರು.

ಆತನು ವಿಪ್ರರನ್ನು ಕುರಿತು "ನೀವು ತೀರ್ಥೋಪಜೀವಿಕಿಗಳ ಸೂರ್ಯ ಚಂದ್ರರಿರುವವರೆಗೂ ಬದುಕಿರಿ. ಇಂಥಾ ಕ್ಷೇತ್ರವಾಸಿಗಳಾದ ನಿಮ್ಮನ್ನು ಗಯಾ ಕ್ಷೇತ್ರಕ್ಕೆ ಬಂದ ಮನುಜರು ಪೂಜಿಸುತ್ತಾರೆ. ಹವ್ಯ, ಕವ್ಯ, (ಹಬ್ಬ, ಪಿತೃಯಜ್ಞ) ಶ್ರಾದ್ಧಗಳಿಂದ ನಿಮ್ಮನ್ನು ತೃಪ್ತಿಪಡಿಸಿ, ಅವರ ಕುಲ ಶತವನ್ನು ಉದ್ಧರಿಸುವರು. ಅಂಥವರ ಪಿತೃಗಳು ನರಕದ ದಶೆಯಿಂದ ಸ್ವರ್ಗಕ್ಕೂ, ಸ್ವರ್ಗದಲ್ಲಿರುವವರು ಪರಮಗತಿ (ಮೋಕ್ಷಕ್ಕೂ)ಗೂ ಹೋಗುವರು. ಗಯನೂ ಸಹ ವಿಧ್ಯುಕ್ತ ರೀತಿಯಲ್ಲಿ ಬಹ್ವನ್ನದಾನಪೂರ್ವಕ ಬಹು ದಾನ ದಕ್ಷಿಣೆಗಳನ್ನು ಕೊಟ್ಟು ಯಾಗವನ್ನು ಮಾಡಿದನು. ಆತನ ಹೆಸರಿನಿಂದಲೇ **ಗಯಾಪುರೀ** ಎಂಬ ಹೆಸರಿನಿಂದ ಈ ದೇಶವು ಪ್ರಸಿದ್ಧವಾಯಿತು. ಪಾಂಡವರೂ ಇಲ್ಲಿ ಶ್ರೀಹರಿಯನ್ನು ಕುರಿತು ಯಜ್ಞ ಮಾಡಿ ಪೂಜಿಸಿದರು.

ಗಯಾಕ್ಕೆ ಹೋಗಲು ಉದ್ಯುಕ್ತನಾದರೆ ವಿಧ್ಯುಕ್ತ ರೀತಿಯಲ್ಲಿ ಶ್ರಾದ್ಧವನ್ನು ಮಾಡಿ ಕಾರ್ಪಟೀ ವೇಷದಿಂದ ಗ್ರಾಮ ಪ್ರದಕ್ಷಿಣೆಯನ್ನು ಮಾಡಿ ಪ್ರತಿದಿನವೂ ನಿಯಮದಿಂದ, ಇಂದ್ರಿಯ ನಿಗ್ರಹದಿಂದ, ಪ್ರತಿಗ್ರಹಾದಿಗಳನ್ನು ಮಾಡದೆ (ದಾನ ತೆಗೆದುಕೊಳ್ಳದೆ) ಗಯಾ ಯಾತ್ರೆಗೆಂದು ಮನೆ ಬಿಟ್ಟು ಹೊರಟೊಡನೆಯೇ ನಡಗೆಯ ಹೆಜ್ಜೆ ಹೆಜ್ಜೆಗೂ ಪಿತೃಗಳಿಗೆ ಸ್ವರ್ಗಾರೋಹಣ ಮಾಡಲು ಪಾವಟಿಗೆ (ಮೆಟ್ಟಲು) ಗಳನ್ನು ನಿರ್ಮಿಸಿದಂತಾಗುವುದು. ಬ್ರಹ್ಮಜ್ಞಾನದಿಂದ ಆಗಬೇಕಾದುದೇನು? ಗೋಗೃಹ ಮರಣದಿಂದ ಏನು ಉಪಯೋಗ? ಪುತ್ರನು ಗಯಾಕ್ಕೆ ಹೋಗಲು, ಕುರು ಕ್ಷೇತ್ರ ವಾಸದಿಂದ ತಾನೇ ಏನು ಮಾಡಬೇಕಾದುದಿದೆ? ಗಯಾ ಕ್ಷೇತ್ರವನ್ನು

ಮುಟ್ಟಿ ತಲಪಿದ ಮಗನನ್ನು ಕಂಡರೆ ಪಿತೃಗಳಿಗೆ ದೊಡ್ಡ ಉತ್ಸವವೇ ಆಗುವುದು.

ಬ್ರಹ್ಮಜ್ಞಾನಂ ಗಯಾಶ್ರಾದ್ಧಂ ಗೋಗೃಹೇ ಮರಣಂ ತಥಾ।
ವಾಸಃ ಪುಂಸಾ ಕುರುಕ್ಷೇತ್ರೇ ಮುಕ್ತಿರೇಷಾ ಚತುರ್ವಿಧಾ ॥

ಮಹಾಭಾರತ ವನಪರ್ವದಲ್ಲಿ

ವಾರಾಣಸಿಗೆ ಹೋಗಿ ವೃಷಧ್ವಜನಾದ ವಿಶ್ವೇಶ್ವರನನ್ನು ಅರ್ಚಿಸಿ ಕಪಿಲಾ ಹ್ರದದಲ್ಲಿ ಸ್ನಾನಮಾಡಿದ ಮಾನವನು ರಾಜಸೂಯ ಯಜ್ಞವನ್ನಾಚರಿಸಿದ ಮಹಾಫಲವನ್ನು ಪಡೆಯುತ್ತಾನೆ, ಅವಿಮುಕ್ತೇಶ್ವರವನ್ನು ಆಶ್ರಯಿಸಿ ಸ್ನಾನಾದಿಗಳಿಂದ ತೀರ್ಥ ಸೇವನೆ ಮಾಡುವವನು ಕೇವಲ ದೇವದೇವನಾದ ಬಿಂದುಮಾಧವ ಮತ್ತು ವಿಶ್ವನಾಥರ ದರ್ಶನ ಮಾತ್ರದಿಂದಲೇ ಬ್ರಹ್ಮಹತ್ಯೆ ಮೊದಲಾದ ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. ಅಲ್ಲಿ ಪ್ರಾಣವನ್ನು ಬಿಡುವ (ಮೃತನಾಗುವ) ಮಾನವನು ಮೋಕ್ಷವನ್ನು ಹೊಂದುತ್ತಾನೆ. ದುರ್ಲಭವಾದ ಮಾರ್ಕಂಡೇಯ ತೀರ್ಥಸ್ನಾನವು ಬಹಳ ದುಃಸ್ಸಾಧ್ಯವಾದ ಮಹಾ ಫಲವನ್ನು ಕೊಡುವುದು. ಲೋಕವಿಶ್ರುತವಾದ ಗೋಮತೀ ಗಂಗಾ ಸಂಗಮ ಸ್ನಾನವು ಅಗ್ನಿ ಷ್ಟೋಮಯಾಗ ಫಲವನ್ನು ಕೊಡುವುದು ಮಾತ್ರವಲ್ಲದೆ, ಅಂಥ ಮಾನವನ ಕುಲವನ್ನೇ ಉದ್ಧರಿಸುತ್ತದೆ.

ಅನಂತರ ಸಮಾಹಿತನಾಗಿ ಬ್ರಹ್ಮಚರ್ಯ ವ್ರತಾನುಷ್ಠಾನದಿಂದ ಗಯಾ ಕ್ಷೇತ್ರಕ್ಕೆ ಹೋಗುವ ಮಾತ್ರದಿಂದಲೇ ಅಶ್ವಮೇಧಯಾಗ ಫಲವನ್ನು ಪಡೆದು ತನ್ನ ಕುಲವನ್ನುದ್ಧರಿಸುವನು.

ಅಲ್ಲಿ ತ್ರಿಲೋಕಗಳಲ್ಲಿ ವಿಶ್ರುತವಾದ ಅಕ್ಷಯವಟವೆಂಬುದು ಇರುವುದು. ಆ ಸ್ಥಳದಲ್ಲಿ ಪಿತೃಗಳಿಗೆ ಕೊಟ್ಟದ್ದು ಅಕ್ಷಯವಾಗುವುದೆಂದು ಹೇಳಲ್ಪಟ್ಟಿದೆ. (ಫಲ್ಗು) ಮಹಾನದಿಯಲ್ಲಿ ಸ್ನಾನಮಾಡಿ ಪಿತೃ ದೇವತೆಗಳಿಗೆ ತರ್ಪಣವನ್ನು ಮಾಡಬೇಕು. ಇದರಿಂದ ಅವರು ಅಕ್ಷಯ್ಯಗಳಾದ ಲೋಕಗಳನ್ನು ಹೊಂದುತ್ತಾರೆ ಮತ್ತು ಕುಲವನ್ನೇ ಉದ್ಧಾರ ಮಾಡುತ್ತಾರೆ.

ಅಲ್ಲಿ ಬ್ರಹ್ಮಾರಣ್ಯದಿಂದ ಉಪಶೋಭಿತವಾದ ಬ್ರಹ್ಮಸರಸ್ಸಿಗೆ ಹೋಗಿ ಸ್ನಾನಮಾಡುವುದರಿಂದ, ಕತ್ತಲು ಕಳೆದು ಪ್ರಭಾತವಾಗುವಂತೆ, ಸಕಲ

ದುರಿತಗಳೂ ಪಾಪಗಳೂ ಹೋಗಿ ಪುಣ್ಯವೃದ್ಧಿಯಾಗುವುದು. ಆ ಸರೋವರದಲ್ಲಿ, ಚತುರ್ಮುಖ ಬ್ರಹ್ಮದೇವರಿಂದ ಯಜ್ಞಮಾಡಿದ ಯೂಪಸ್ತಂಭವು ಇರುವುದು. ಆ ಶ್ರೇಷ್ಠವಾದ ಯೂಪಸ್ತಂಭವನ್ನು ಪ್ರದಕ್ಷಿಣೆ ಮಾಡಿದವನು ವಾಜಪೇಯ ಯಜ್ಞಫಲವನ್ನು ಹೊಂದುತ್ತಾನೆ.

ಅಲ್ಲಿಂದ ಪ್ರಸಿದ್ಧವಾದ **ಧೇನುಕಕ್ಷೇತ್ರಕ್ಕೆ** ಹೋಗಿ, ಅಲ್ಲಿ ಒಂದು ರಾತ್ರಿ ವಾಸಿಸಿ **ತಿಲಧೇನುವನ್ನು** ದಾನ ಮಾಡಿದವನು ಸರ್ವ ಪಾಪಗಳಿಂದ ಬಿಡುಗಡೆ ಹೊಂದಿ ವಿಶುದ್ಧಾತ್ಮನಾಗಿ, ತಪ್ಪದೆ ಸೋಮಲೋಕಕ್ಕೆ ಹೋಗುತ್ತಾನೆ.

ಅಲ್ಲಿ ಈಗಲೂ ಕೂಡ ತನ್ನ ಕರುವಿನೊಡನೆ ಸಂಚರಿಸುವ **ಕಪಿಲಾ ಗೋವಿನ** ಹೆಜ್ಜೆಗಳು ಮಹತ್ತರವಾಗಿ ಪರ್ವತದಲ್ಲಿ ಸ್ಪಷ್ಟವಾಗಿ ಕಾಣಲ್ಪಡುತ್ತವೆ. ಭೃಶಂ, ಚನ್ನಾಗಿ, ಕರುವಿನ ಸಹಿತ ಕಪಿಲೆಯ ಪದ ಚಿಹ್ನೆಗಳನ್ನು ಈಗಲೂ ನೋಡಬಹುದು. ಅವು ಅದೃಶ್ಯ ಅಪೂರ್ವ ವಸ್ತು. ಅಲ್ಲಿ ಭಕ್ತಿಯಿಂದ ಆ **ಕಪಿಲಾ ವತ್ಸಪದತೀರ್ಥ**ಗಳಲ್ಲಿ ಸ್ನಾನ ಮಾಡಿದವನ ಯತ್ಕಿಂಚಿತ್ ಏನಾದರೂ ಅಶುಭಕರ್ಮವಿದ್ದರೆ ಅವೆಲ್ಲವೂ ಸಂಪೂರ್ಣವಾಗಿ ನಾಶವಾಗುವುವು.

ಅನಂತರ ಧೀಮಂತನಾದ **ಗೃಧ್ರವಟಕ್ಕೆ** ಹೋಗಬೇಕು. ಅಲ್ಲಿ ಭಸ್ಮಲೇಪನ ಮಾಡಿಕೊಂಡು ಸ್ನಾನಮಾಡಿ ವೃಷಧ್ವಜ ದೇವನನ್ನು ದರ್ಶನ ಸೇವೆಗಳಿಂದ ಪೂಜಿಸಿದ ಬ್ರಾಹ್ಮಣನು, ದ್ವಾದಶ (12) ವರ್ಷ ವ್ರತಮಾಡಿದ ಫಲವನ್ನು ಹೊಂದುವನು, ಇತರ ವರ್ಣದವರ ಸರ್ವ ಪಾಪಗಳೂ ನಾಶವಾಗುವುವು.

ಅಲ್ಲಿಂದ ಗೀತಧ್ವನಿಯಿಂದ ನಾದಿತವಾಗಿರುವ **ಉದ್ಯಂತ ಪರ್ವತಕ್ಕೆ** ಹೋಗಿ ಅಲ್ಲಿ ಕಾಣುವ **ಸಾವಿತ್ರೀ ಪದವನ್ನು** ದರ್ಶನಮಾಡಿ, ಸಂಶಿತವ್ರತನಾಗಿ ಬ್ರಾಹ್ಮಣನು ಸಂಧ್ಯಾವಂದನೆ ಮಾಡುವುದರಿಂದ ಅಂಥವನಿಂದ ಹನ್ನೆರಡು ವರ್ಷ ಅನುಷ್ಠಾನ ಮಾಡಿ ಉಪಾಸಿತ ಸಂಧ್ಯಾಫಲವು ಸಂಪಾದಿಸಲ್ಪಡುವುದು. ಅಲ್ಲಿಯೇ ಯೋನಿದ್ವಾರವೆಂಬುದು ವಿಶ್ರುತವಾಗಿದೆ. ಅಲ್ಲಿಗೆ

ಹೋಗಿ ಸ್ನಾನಾದಿಗಳನ್ನು ಮಾಡಿದ ಮಾನವನು ಯೋನಿ ಸಂಕಟದಿಂದ ಮುಕ್ತನಾಗುತ್ತಾನೆ. ಪುನಃ ತಾಯಿಯ ಗರ್ಭವಾಸವು ಅವನಿಗೆ ತಪ್ಪುತ್ತದೆ.

ಯಾವ ಮನುಷ್ಯನು ಗಯಾಕ್ಷೇತ್ರದಲ್ಲಿ ಒಂದು ತಿಂಗಳು ಶುಕ್ಲಪಕ್ಷ ಕೃಷ್ಣಪಕ್ಷಗಳೆರಡಲ್ಲೂ ಪೂರ್ತಿ ವಾಸಮಾಡುತ್ತಾನೆಯೋ ಅಂಥವನು ತನ್ನ ಏಳು ಕುಲಗಳನ್ನು ನಿಃಸಂಶಯವಾಗಿ ಪುನೀತವನ್ನಾಗಿಮಾಡಿ ಉದ್ಧರಿಸುತ್ತಾನೆ.

ಏಷ್ಟವ್ಯಾ ಬಹವಃ ಪುತ್ರಾಃ ಯದ್ಯೇಕೋಽಪಿ ಗಯಾಂ ವ್ರಜೇತ್
ಗೌರೀಂ ವಾ ವರಯೇತ್ಕನ್ಯಾಂ ನೀಲಂ ವಾ ವೃಷಮುತ್ಸೃಜೇತ್ ॥

ಗಯಾಯಾತ್ರೆ ಮಾಡುವ ಮಗನು ಪಿತೃಗಳನ್ನು ಉದ್ಧರಿಸುತ್ತಾನೆಂದರ್ಥವು.

ಅನಂತರ ಫಲ್ಗು ನದೀಗೆ (ತೀರ್ಥಕ್ಕೆ) ಹೋಗಿ ಸೇವೆ ಮಾಡಿದವನು ಅಶ್ವಮೇಧಯಾಗ ಫಲವನ್ನು ಪಡೆದು ಮಹತ್ತರವಾದ ಸಿದ್ಧಿಯನ್ನು ಹೊಂದುತ್ತಾನೆ.

ಅನಂತರ ಯಾವ ಸ್ಥಳದಲ್ಲಿ ನಿರಂತ ಧರ್ಮನು ಇರುವನೋ ಅಂಥಾ ಧರ್ಮಪ್ರಸ್ಥಕ್ಕೆ ಸಮಾಹಿತನಾಗಿ ಹೋಗಿ ಅಲ್ಲಿ ಕೂಪೋದಕ ಮಾಡಿ ಸ್ನಾನ ಮಾಡಿ ಶುಚಿಯಾಗಿ, ಪಿತೃದೇವತೆಗಳಿಗೆ ತರ್ಪಣಮಾಡಿ ಶ್ರಾದ್ಧಾದಿಗಳಿಂದ ಸಂತೃಪ್ತಿಪಡಿಸಿದವನು ಪಾಪಗಳಿಂದ ಮುಕ್ತನಾಗಿ ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲಿಯೇ ಭಾವಿತಾತ್ಮನಾದ **ಮತಂಗ ಮಹರ್ಷಿಯ** ಆಶ್ರಮವಿರುವುದು. ಅಂಥ ಶೋಕನಿವಾರಕವೂ ಸಂಪತ್ಪ್ರದವೂ ಆದ ಆಶ್ರಮವನ್ನು ಪ್ರವೇಶಿಸಿದವನು **ಗವಾಮಯನ** ಯಜ್ಞದ ಫಲವನ್ನು ಪಡೆಯುವನು. ಅಲ್ಲಿ ಧರ್ಮನನ್ನು ಅಭಿಸಂಸ್ಪರ್ಶ ಮಾಡಿದವನು ವಾಜಿಮೇಧ ಫಲವನ್ನು ಹೊಂದುವನು. ಅಲ್ಲಿಂದ ಮುಂದೆ ಅನುತ್ತಮವಾದ ಬ್ರಹ್ಮಸ್ಥಾನಕ್ಕೆ ಹೋಗಿ, ಬ್ರಹ್ಮನ್ನು ಪೂಜಿಸಿ, ಸೇವಿಸಿದ, ಮಾನವನು ರಾಜಸೂಯ ಮತ್ತು ಅಶ್ವಮೇಧದ ಉಭಯ ಯಾಗ ಮಾಡಿದ ಫಲವನ್ನು ಹೊಂದುತ್ತಾನೆ.

ಅಲ್ಲಿಂದ ತೀರ್ಥ ಸೇವಿಯು, ರಾಜಗೃಹಕ್ಕೆ ಹೋಗಬೇಕು. ಅಲ್ಲಿ ತೀರ್ಥಸ್ನಾನ ಮಾಡಿದವನು ಕಕ್ಷೀವಾನ (ಅಗ್ನಿಯಂತೆ ತೇಜಸ್ಸಿನಿಂದ ಕೂಡಿ) ನಂತೆ ಕ್ರೀಡಿಸಿ ಸಂತೋಷಪಡುವನು. ಅಲ್ಲೇ **ಯಕ್ಷಿಣಿಯ** ನೈತ್ಯಕ

(ನೈವೇದ್ಯ)ವನ್ನು ಶುಚಿರ್ಭೂತನಾದ ಪುರುಷನು ಪ್ರಾಶನಮಾಡಿದರೆ, ಯಕ್ಷಿಣಿಯ ಪ್ರಸಾದದಿಂದ ಬ್ರಹ್ಮಹತ್ಯೆಯ ಪಾಪದಿಂದ ಮುಕ್ತನಾಗುತ್ತಾನೆ.

ಅಲ್ಲಿಂದ ಮಣಿನಾಗಸ್ಥಾನಕ್ಕೆ ಹೋಗಿ ಸೇವೆ ಮಾಡಿದವನು ಸಹಸ್ರ ಗೋದಾನ ಮಾಡಿದ ಫಲವನ್ನು ಪಡೆದು ಮಣಿಗಾಗನ ತೀರ್ಥವನ್ನು ಸ್ವೀಕರಿಸಿ ಭುಂಜಿಸಿದವನು ಸರ್ಪದಿಂದ ಕಚ್ಚಲ್ಪಟ್ಟರೂ, ಅದರ ವಿಷವು ದೇಹದಲ್ಲಿ ಏರಿ ಆಕ್ರಮಿಸುವುದಿಲ್ಲವು. ಸ್ವಲ್ಪವೂ ಅದರ ಸಂಬಧಿ ನೋವು ಬಾಧೆಯೆಂದೂ ಆಗುವುದಿಲ್ಲವು. ಅಲ್ಲಿ ಒಂದು ರಾತ್ರಿ ವಾಸಮಾಡುವುದರಿಂದ ಸಹಸ್ರ ಗೋದಾನ ಮಾಡಿದ ಫಲವನ್ನು ಪಡೆಯುವನು.

ಅಲ್ಲಿಂದ ಗೌತಮರಿಗೆ ಪ್ರಿಯವಾದ ಅವರ ಗೌತಮ ವನಕ್ಕೆ ಹೋಗಿ ಅಹಲ್ಯಾ ಹ್ರದದಲ್ಲಿ ಸ್ನಾನಮಾಡಿದವನು ಪರಮಗತಿಯನ್ನು ಹೊಂದುತ್ತಾನೆ. ಆ ಆಶ್ರಮ ಪ್ರವೇಶವೇ ತನಗೆ ಅಭೀಷ್ಟವಾದ ಮಹಾ ಸಂಪತ್ತನ್ನು ಕೊಡುತ್ತದೆ. ಸ್ನಾನ ಮಾಡಿದವನು ವಾಜಪೇಯ ಯಾಗದ ಫಲವನ್ನು ಹೊಂದುವನು.

ತ್ರಿಲೋಕದಲ್ಲೂ ಬಹು ಪ್ರಸಿದ್ಧವಾದ ರಾಜರ್ಷಿ ಜನಕರಾಜತೀರ್ಥವಿರುವುದು, ಅಲ್ಲಿ ಸ್ನಾನಮಾಡಿದವನು ವಿಷ್ಣುಲೋಕಕ್ಕೆ ಹೋಗುತ್ತಾನೆ. (ಇತ್ಯಾದಿಗಳು ತೀರ್ಥಯಾತ್ರಾ ಪರ್ವದ ೮೩ನೇ ಅಧ್ಯಾಯದಲ್ಲಿ ಹೇಳಿದೆ.)

ಶ್ರೀ ಗುರುಭ್ಯೋನಮಃ

ವಾಯುಪುರಾಣ-ಗಯಾ ಮಹಾತ್ಮ್ಯೆಯು

ಪೂರ್ವದಲ್ಲಿ ಶೌನಕಾದಿ ಮಹರ್ಷಿಗಳಿಂದ ಕೂಡಿ ದೇವರ್ಷಿಗಳಾದ ನಾರದರು ಸನತ್ಕುಮಾರರಿಗೆ ವಿಧ್ಯುಕ್ತರೀತಿಯಲ್ಲಿ ನಮಸ್ಕಾರ ಮಾಡಿ "ಪೂಜ್ಯರೇ, ಸರ್ವಪ್ರಾಣಿಗಳನ್ನೂ, ಮಹಿಮೆಯ ಪಠನೆ ಮತ್ತು ಶ್ರವಣ ಮಾಡುವ ಮಾತ್ರದಿಂದ ತಾರಕಮಾಡಿ ರಕ್ಷಿಸುವ, ತೀರ್ಥಗಳಲ್ಲಿ ಉತ್ತಮೋತ್ತಮ ತೀರ್ಥವಾವುದೆಂಬುದನ್ನು ತಿಳಿಸಿರಿ" ಎಂದು ಪ್ರಾರ್ಥಿಸಿದರು.

ಸನತ್ಕುಮಾರರು:—ಸರ್ವ ದೇಶಗಳಲ್ಲೂ ಸರ್ವ ತೀರ್ಥಗಳಲ್ಲೂ ಅತಿ ಶ್ರೇಷ್ಠವೂ, ಅಧಿಕವೂ, ಪುಣ್ಯಪ್ರದವೂ, ಶ್ರಾದ್ಧಾದಿಗಳಲ್ಲಿ ತಾರಕವೂ ಆದುದು ಶ್ರೇಷ್ಠವಾದ **ಗಯಾತೀರ್ಥವು** ಎಂದರು. **ಗಯಾಸುರನು** ಒಂದು ಕಾಲದಲ್ಲಿ ಯಜ್ಞಮಾಡಿ ಬ್ರಹ್ಮನಿಂದ ವರವನ್ನು ಪ್ರಾರ್ಥಿಸಿದರ ಪರಿಣಾಮವಾಗಿ ತನ್ನ ಶಿರಸ್ಸಿನಲ್ಲಿ ಧರ್ಮಶಿಲೆಯನ್ನು ಧರಿಸಿ ಹೊತ್ತನು. ಅಲ್ಲಿ ಬ್ರಹ್ಮನು ಯಾಗಮಾಡಿದನು. ಅಸುರನು ಚಲಿಸದಿರಲು ಫಲ್ಗುತೀರ್ಥ ಮೊದಲಾದ ರೂಪದಿಂದ ಆದಿ ಗದಾಧರನು ಬಂದು ಸ್ಥಿತನಾದನು. ಈರೀತಿ ದೇವತೆಗಳೊಡನೆ ಆಹರ್ನಿಶಿ ಅಲ್ಲಿ ಭಗವಂತನು ಬಂದು ನೆಲಿಸಿದಮೇಲೆ ಬ್ರಹ್ಮನು ಯಜ್ಞವನು ಪೂರೈಸಿ ಬ್ರಾಹ್ಮಣರಿಗೆ ಗೃಹಾದಿಗಳನ್ನು ಕೊಟ್ಟನು. ಶ್ವೇತವರಾಹ ಕಲ್ಪದಲ್ಲಿ ಗಯನು ಯಾಗವನ್ನು ಮಾಡಲು ಗಯನ ಹೆಸರಿನಿಂದಲೇ **ಗಯಾಕ್ಷೇತ್ರ**ವೆಂದು, ಬ್ರಹ್ಮರ್ಷಿಯ ಇಚ್ಛೆಯಂತೆ ಪ್ರಖ್ಯಾತವಾಯಿತು.

ನರಕದಿಂದ ಭಯಭೀತರಾದ ಪಿತೃಗಳು "ನಮ್ಮ ಮಗನು ಗಯಾಕ್ಕೆ ಹೋದರೆ ನಮ್ಮನ್ನು ಈ ಕಷ್ಟಗಳಿಂದ ದಾಟಿಸುತ್ತಾನೆಂದು" ಅಪೇಕ್ಷಿಸಿ ನಿರೀಕ್ಷಿಸುತ್ತಾರೆ. ಗಯಾ ಕ್ಷೇತ್ರಕ್ಕೆ ತಲಪಿದ ಮಗನನ್ನು ಕಂಡರೆ, ಪಿತೃಗಳಿಗೊಂದು ದೊಡ್ಡ ಉತ್ಸವವೇ ಆಗಿ "ಗಯಾ ಕ್ಷೇತ್ರದಲ್ಲಿ ಶ್ರೇಷ್ಠವಾದ ತೀರ್ಥದಲ್ಲಿ ಸ್ನಾನಮಾಡಿ, ನಮಗೆ ಏನನ್ನು ತಾನೇ ನಮ್ಮ ಅಭಿಷ್ಟವನ್ನು ಈ ಪುತ್ರನು ಕೊಡಲಾರನು? ನಮ್ಮ ಮನೋರಥಗಳೆಲ್ಲವೂ ನಮಗೆ ಲಭಿಸುವುದೆಂದು" ಸಂತೋಷದಿಂದ, ತಮಗೆ ಹಬ್ಬವೇ ಆಗುವುದೆಂದು ಹರ್ಷದಿಂದ ಉಬ್ಬಿಹೋಗುವರು.

ಗಯಾಕ್ಕೆ ಹೋಗಿ ಶ್ರಾದ್ಧಾದಿಗಳನ್ನೂ, ಬ್ರಾಹ್ಮಣರಿಗೆ ಅನ್ನದಾನಾದಿಗಳನ್ನೂ, ಮಾಡಿದ ಪುತ್ರನ ವಿಷಯದಲ್ಲಿ ಪಿತೃಗಳು ಅತ್ಯಂತ ತೃಪ್ತರಾಗುವರು.

ಮೂರುಪಕ್ಷ (45 ದಿವಸಗಳು) ಅಲ್ಲಿ ವಾಸಮಾಡುವವರು ತಮ್ಮ ಏಳು ಕುಲಗಳನ್ನು ಪವಿತ್ರ ಮಾಡಿ ಉದ್ಧರಿಸುವರು. ಅದು ಸಾಧ್ಯವಿಲ್ಲದಿದ್ದರೆ 15 ದಿವಸಗಳು ತಪ್ಪಿದರೆ 7 ದಿವಸಗಳು; ಇಲ್ಲವಾದರೆ ಕೊನೆ ಪಕ್ಷ 3 ರಾತ್ರಿಗಳಾದರೂ ವಾಸಮಾಡಿದರೆ, ಮಹಾ ಕಲ್ಪದಲ್ಲಿ ಮಾಡಿದ ಪಾಪಗಳೆಲ್ಲವೂ ಗಯಾ ಕ್ಷೇತ್ರದಲ್ಲಿ ಸಂಪೂರ್ಣವಾಗಿ ನಾಶವಾಗುವುವು.

ಪಿತೃಗಳಿಗೆ ಪಿಂಡಪ್ರದಾನ ಮಾಡಬೇಕು. ತನಗೂ ಸಹ ಎಳ್ಳು ಇಲ್ಲದ ಆತ್ಮಪಿಂಡವನ್ನೂ ಕೊಡಬಹುದು. ಬ್ರಹ್ಮಹತ್ಯಾದಿ ಪಂಚಮಹಾ ಪಾತಕಗಳೆಲ್ಲವೂ ನಾಶವಾಗುವುವು.

ಬ್ರಹ್ಮಜ್ಞಾನ, ಗಯಾಶ್ರಾದ್ಧ, ಗೋಗೃಹದಲ್ಲಿ ಮರಣ, ಕುರುಕ್ಷೇತ್ರವಾಸ, ಇವು ನಾಲ್ಕು ವಿಧವಾದ ಮುಕ್ತಿಯನ್ನು ಪಡೆಯಲು ಕಾರಣವು.

ಪುತ್ರನು ಗಯಾಕ್ಕೆ ಹೋದ ಪಕ್ಷದಲ್ಲಿ ಬ್ರಹ್ಮಾಜ್ಞಾನದಿಂದ ಯಾವುದು ಅಸಾಧ್ಯವೋ? ಅದು ಲಭಿಸುವುದು ಗೋಗೃಹದಲ್ಲಿ ಮರಣದಿಂದಾಗಬೇಕಾದುದೇನಿದೆ? ಕುರುಕ್ಷೇತ್ರ ವಾಸದಿಂದ ತಾನೇ ಪಡೆಯಬೇಕಾದುದೇನಿದೆ? ವಿಚಕ್ಷಣನು ಗಯಾದಲ್ಲಿ ಸರ್ವಕಾಲದಲ್ಲೂ ಶ್ರಾದ್ಧಮಾಡಿ ಪಿಂಡಪ್ರದಾನ ಮಾಡಬಹುದು. ಅದಕ್ಕೆ ಕಾಲನಿಯಮವಿಲ್ಲವು. ಅಲ್ಲಿ ಪಿತೃಯಜ್ಞಕ್ಕೆ ಸದಾ ಸರ್ವಕಾಲವೇ.

ಸಕೃತ್ ಒಂದಾವರ್ತಿ ಗಯಾಕ್ಕೆ ಹೋಗುವುದು ಸಕೃತ್ ಪಿಂಡವನ್ನು ಪಿತೃಗಳಿಗೆ ಹಾಕುವುದು, ಇವುಗಳಿಂದ ದುರ್ಲಭವಾದುದಾವುದೂ ಇಲ್ಲವು. ಸಕಲ ಇಷ್ಟಾರ್ಥಗಳೂ ಅಂಥಾ ಪುಣ್ಯಶಾಲಿಗೆ ತಪ್ಪದೆ ಲಭಿಸುವುದೆಂದು ವ್ಯವಸ್ಥಿತವಾಗಿದೆ.

ಬ್ರಹಾದಿಗಳಿಗೇ ಮೋಕ್ಷ ಪ್ರದವಾದ ಈ ಮಹಾಕ್ಷೇತ್ರದಲ್ಲಿ ಪ್ರಮಾದದಿಂದ ಅಕಸ್ಮಾತ್ ಮೃತನಾದರೂ, ಬ್ರಹ್ಮಜ್ಞಾನದಿಂದ ಎಂಥಾ ಮುಕ್ತಿಯಾಗುತ್ತದೆಯೋ ಅಂಥ ದುರ್ಲಭವಾದ ಉತ್ತಮ ಮೋಕ್ಷವು ನಿಸ್ಸಂಶಯವಾಗಿ ತಪ್ಪದೆ ಲಭಿಸುವುದು.

ಆದುದರಿಂದ ಸರ್ವಪ್ರಯತ್ನದಿಂದಲೂ ಕೀಟಕಾದಿ ಜನ್ಮದಲ್ಲಿ ಮೃತರಾದ ಪಿತೃಗಳನ್ನು ದಾಟಿಸಲು ವಿಚಕ್ಷಣರು ಇಲ್ಲಿ ವಾಸಿಸಬೇಕು.

ಬ್ರಹ್ಮನಿಂದ ಪ್ರಕಲ್ಪಿತರಾದ ವಿಪ್ರ (ಗಯಾವಾಡ)ರನ್ನು ಹವ್ಯಕವ್ಯಗಳಿಂದ ಅರ್ಚಿಸಬೇಕು. ಅವರು ಸಂತುಷ್ಟರಾದರೆ, ಸರ್ವಪಿತೃಗಳೂ ದೇವತೆಗಳೊಡನೆ ಸಂತುಷ್ಟರಾಗಿ ತೃಪ್ತರಾಗುವರು.

ಸರ್ವತೀರ್ಥಗಳಲ್ಲೂ ಮುಂಡನ ಉಪವಾಸಗಳು ವಿಧಾನ ಮಾಡಲ್ಪಟ್ಟದೆ ಕುರುಕ್ಷೇತ್ರ, ವಿಶಾಲಬದರಿ, ವಿರಜಾ ಮತ್ತು ಗಯಾಕ್ಷೇತ್ರಗಳಲ್ಲಿ

ಈ ವಪನ ಕ್ಷೇತ್ರೋಪವಾಸಗಳ ನಿಯಮವಿಲ್ಲವು. ಪಿತೃಯಜ್ಞವು ಮಾತ್ರ ವಿಧಿಸಲ್ಪಟ್ಟಿದೆ.

ಸನ್ಯಾಸಿ (ಭಿಕ್ಷುವು) ಯು ಗಯಾಕ್ಕೆ ಹೋಗಿ ವಿಷ್ಣುಪದದಲ್ಲಿ ದಂಡವನ್ನು ಮಾತ್ರ ಪ್ರದರ್ಶಿಸಬೇಕಲ್ಲದೆ, ಪಿಂಡವನ್ನು ಹಾಕಬೇಕಾದುದಿಲ್ಲವು. ದಂಡವನ್ನು ಸ್ಪರ್ಶಮಾಡಿ, ಪಿತೃಗಳೊಡನೆ ಮುಕ್ತನಾಗುತ್ತಾನೆ. ಅಂಥ ದಂಡ ಧರಿಸಿದ ಯತಿಯು, ಕಿಲ್ಬಿಷ (ಪಾಪದೋಷವನ್ನಾಗಲಿ, ಪರಮಾರ್ಥ ಪ್ರದ ಪುಣ್ಯವನ್ನಾಗಲಿ, ಗಳಿಸುವುದಿಲ್ಲವಾಗಿ,) ವೇದವೊಂದನ್ನು ಬಿಟ್ಟು, ಶುಭಾಕಾಂಕ್ಷಿಯು ಸರ್ವ ಕರ್ಮಗಳನ್ನೂ (ಭಗವದರ್ಪಣ ಬುದ್ಧಿಯಿಂದ) ಸನ್ಯಸನ ಮಾಡಬೇಕು. ಮುಂಡಪೃಷ್ಟದ ಪೂರ್ವದ ಕಡೆ ದಕ್ಷಿಣೋತ್ತರವಾಗಿ ಎರಡುವರೆ ಕ್ರೋಶ (ಗಾವುದ)ವು ಗಯಾ ಎಂದು ಬ್ರಹ್ಮನಿಂದ ಹೇಳಲ್ಪಟ್ಟಿದೆ. ಗಯಾ ಕ್ಷೇತ್ರವು ಪಂಚಕ್ರೋಶವು. ಗಯಾ ಶಿರಸ್ಸು ಒಂದು ಕ್ರೋಶವು ಇರುವುದು.

ಪಂಚಕ್ರೋಶಂ ಗಯಾಕ್ಷೇತ್ರಂ ಕ್ರೋಶಮೇಕಂ ಗಯಾಶಿರಃ

ಇದರ ಮಧ್ಯದಲ್ಲಿ ತ್ರಿಲೋಕದಲ್ಲಿ ಯಾವ ತೀರ್ಥಗಳಿವೆಯೋ ಅವೆಲ್ಲವೂ ಇರುವುವು. ಇಲ್ಲಿ ಯಾವನು ಶ್ರಾದ್ಧವನ್ನು ಮಾಡುತ್ತಾನೆಯೋ, ಅವನು ಪಿತೃಗಳ ಋಣದಿಂದ ಮುಕ್ತನಾಗುತ್ತಾನೆ. ಗಯಾ ಶಿರಸ್ಸಿನಲ್ಲಿ ಶ್ರಾದ್ಧ ಮಾಡಿದವನು ೧೦೦ ಕುಲವನ್ನು ಉದ್ಧರಿಸುತ್ತಾನೆ. ಗಯಾಕ್ಕೇ ಹೋಗಲು ಮನೆ ಬಿಟ್ಟ ಮಾತ್ರದಿಂದಲೇ ಪಿತೃಗಳಿಗೆ ಪದ ಪದ ವಿಡುವಾಗಲೂ, ಸ್ವರ್ಗಾರೋಹಣಕ್ಕೆ ಸೋಪಾನವನ್ನು ಕಟ್ಟಿಸಿದಂತಾಗುತ್ತದೆ. ಗಯಾಕ್ಕೆ ಪ್ರಯಾಣ ಮಾಡುತ್ತಿದ್ದರೆ, ಹೆಜ್ಜೆ ಹೆಜ್ಜೆಗೂ ಅಶ್ವಮೇಧ ಫಲವನ್ನು ಪಡೆಯುತ್ತಾನೆ. ನಿಸ್ಸಂಶಯವಾಗಿ ಆ ಸಮಗ್ರ ಫಲವನ್ನು ಪಡೆಯುತ್ತಾನೆ.

ಪಾಯಸ, ಚರು (ಅನ್ನ) ಸಕ್ತು, ಪಿಷ್ಟ, (ಗಾರಿಗೆ) ತಂಡುಲ, ಫಲ, ಮೂಲ ಗೆಡ್ಡೆಗೆಣಸು ಮೊದಲಾದವುಗಳಿಂದಲೂ, ತಿಲ, ಕಲ್‌ಖಂಡ(ಕಲ್ಲುಸಕ್ಕರೆ) ಬೆಲ್ಲ, ಘೃತ, ಅಥವಾ ಕೇವಲ (ದಧಿ) ಮೊಸರಿನಿಂದಲೂ, ಊರ್ಜದಿಂದ (ಮಧು) ಜೇನುತುಪ್ಪದಿಂದ, ತುಪ್ಪದಿಂದ ಸಹಿತವಾದ ಪಿಣ್ಯಾಕ (ಹಿಂಡಿ) ದಿಂದಲಾದರೂ ಪಿತೃಗಳಿಗೆ ಪಿಂಡವನ್ನು ಕೊಡುವುದು ಅಕ್ಷಯ್ಯ ಫಲಪ್ರದವು.

ಹವಿಷ್ಯಾನ್ನವು, ಮುಷ್ಟಿ ಮಾತ್ರ ಪ್ರಮಾಣದಿಂದ ಅಥವಾ ಹಸಿಯ ನೆಲ್ಲಿಯಕಾಯಿ ಪ್ರಮಾಣ, ಅಥವಾ ಶಮೀಪತ್ರ ಪ್ರಮಾಣದಿಂದ, ಗಯಾ ಶಿರದಲ್ಲಿ ಪಿಂಡಪ್ರದಾನವು ಪಿತೃಗಳಿಂದ ಭೋಜ್ಯವಾದುದೆಂದು ಮುನಿಗಳಿಂದ ಉಕ್ತವಾಗಿದೆ. ಅದು ಏಳು ಗೋತ್ರಗಳನ್ನು ೧೦೧ ಕುಲಗಳನ್ನೂ ಉದ್ಧರಿಸುವುದು ಉದ್ಧರೇತ್ಸಪ್ತ ಗೋತ್ರಾಣಿ ಕುಲಮೇಕೋತ್ತರಂ ಶತಂ.

ತಂದೆ, ತಾಯಿ, ಹೆಂಡತಿ, ಸಹೋದರಿ, ಮಗಳ ಗಂಡ (ಅಳಿಯ) ತಂದೆಯ ಸಹೋದರಿಯರು (ಸೋದರತ್ತೆ) ತಾಯಿಯ ಅಕ್ಕತಂಗಿಯರು (ಮಾವಸಿ- ಚಿಕ್ಕಮ್ಮ- ಔಚಿ)ಯರು. = ಇವುಗಳು (ಸಪ್ತ) ಗೋತ್ರಗಳು ಇವುಗಳಲ್ಲಿ ಕ್ರಮವಾಗಿ

$(24+20+16+12+11+10+8=101)$ ಚತುರ್ವಿಂಶತ್, ವಿಂಶತ್, ಷೋಡಶ, ದ್ವಾದಶ, ರುದ್ರಃ ದಶ, ವಸು. ಹೀಗೆ ಏಕೋತ್ತರ ಶತ (೧೦೧) ಕುಲಗಳು.

ರಸವತ್ತರವಾದ ಸರ್ವಮಧು ವಸ್ತುಗಳನ್ನು ಒಂದುಕಡೆ ಇಟ್ಟು, ಅನ್ಯತ್ರ, ಗದಾಧರನ, ಪದಕಮಲವನ್ನು ಸ್ಮರಿಸಿ, ಫಲ್ಗು ತೀರ್ಥವನ್ನು ಬೇರೆ ಕಡೆ ಇಟ್ಟರೆ, ತೀರ್ಥವು ಅಧಿಕವಾಗುವುದು. ಶ್ರಾದ್ಧದಲ್ಲಿ ಆವಾಹನೆಯಿಲ್ಲವು ದಿಗ್ಬಂಧವಿಲ್ಲವು. ದೃಷ್ಟಿಸಂಭವ ದೋಷವಿಲ್ಲವು. ವಿಚಕ್ಷಣರು ಕರುಣೆಯಿಂದ ತೀರ್ಥ ಶ್ರಾದ್ಧವನ್ನು ಮಾಡಬೇಕು. ಪಿಂಡಾಸನ, ಪಿಂಡದಾನ, ಪುನಃ ಪ್ರತ್ಯವನೇಜನ, ದಕ್ಷಿಣೆ, ಅನ್ನಸಂಕಲ್ಪಗಳು ತೀರ್ಥಶ್ರಾದ್ಧದಲ್ಲಿ ವಿಧಿಸಲ್ಪಟ್ಟವೆ. ಅನ್ಯಪ್ರದಲ್ಲಿ ಸಕಾಲದಲ್ಲಿ ಆವಾಹಿತರಾಗಿದ್ದರೂ ಸಹ ಪಿತೃಗಳು, ಈ ಗಯಾ ಕ್ಷೇತ್ರದಲ್ಲಿ ಫಲ್ಗು ತೀರ್ಥಕ್ಕೆ ಬಂದಿರುವ ಸುತನನ್ನು ಕಂಡು ಕೂಡಲೇ ಸ್ವಯಂ ತಾನೇ ಸರ್ವಥಾ ಸರ್ವ ಪ್ರಯತ್ನದಿಂದ ಅಲ್ಲಿಗೇ ಬಂದುಬಿಡುತ್ತಾರೆ.

ಫಲವನ್ನು ಅಪೇಕ್ಷಿಸಿ, ತೀರ್ಥಶ್ರಾದ್ಧವನ್ನು ಪಿತೃಗಳಿಗಾಗಿ ಮಾಡುವವರು, ಕಾಮ, ಕ್ರೋಧ, ಲೋಭಗಳನ್ನು ಬಿಟ್ಟು, ಕ್ರಿಯಾದಿಗಳನ್ನು ಮಾಡಬೇಕು. ಬ್ರಹ್ಮಚರ್ಯೆ, ಒಪ್ಪೊತ್ತು ಭೋಜನ, ಭೂಶಯ್ಯೆ, ಸತ್ಯವಾಕ್ ಶುಚಿಯುಳ್ಳವನಾಗಿ, ಸರ್ವಭೂತ ಹಿತದಲ್ಲಿ ಆಸಕ್ತನಾದವನು ತೀರ್ಥಸ್ನಾನ ಮತ್ತು ಶ್ರಾದ್ಧದ ಫಲವನ್ನು ಪಡೆದು ಅನುಭವಿಸುತ್ತಾನೆ.

ತೀರ್ಥವಿಧಿಯನ್ನನುಸರಿಸುವ ಧೀರನು ಪಾಖಂಡ ಸಂಗವನ್ನು ತ್ಯಜಿಸ ಬೇಕು. ಕಾಮನೆಯಿಂದ ಆಚರಿಸುವ ಕರ್ಮವೂ ಪಾಖಂಡವೆಂದೇ ತಿಳಿಯ ಬೇಕು. ಧೀರರಾದ ಯಾವ ಮಾನವರು ತೀರ್ಥಗಳಲ್ಲಿ ತದ್ಗತ ಮನಸ್ಕರಾಗಿ ಭಕ್ತಿಯಿಂದ ಕರ್ಮವನ್ನು ಮಾಡುತ್ತಾರೆಯೋ ಅವರು, ಹೇಗೆ ಬ್ರಹ್ಮಜ್ಞಾನಿಗಳು, ಬ್ರಹ್ಮಪರಾಯಣರು ವೇದ್ಯನಾದ ಪರಬ್ರಹ್ಮ ವಸ್ತುವನ್ನು ಅನನ್ಯ ಚೇತಸ್ಕನಾಗಿ ಪ್ರವೇಶಿಸಿಉತ್ತಮನಾದ ಪರಬ್ರಹ್ಮನನ್ನು ಹೊಂದುತ್ತಾರೆಯೋ, ಹಾಗೆ ಪರಮಾತ್ಮನನ್ನು ಹೊಂದುವರು.

ಗಯಾದಲ್ಲಿ ತೀರ್ಥವಿಲ್ಲದ ಸ್ಥಾನವಿಲ್ಲವು. ಇಲ್ಲಿ ಸರ್ವ ತೀರ್ಥಗಳ ಸನ್ನಿಧಾನವಿರುವುದು. ಅವುಗಳಲ್ಲಿ **ಗಯಾತೀರ್ಥವು** ಸರ್ವಶ್ರೇಷ್ಠವಾದುದು.

ಸೂರ್ಯನು, ಮೀನ, ಮೇಷ, ಕನ್ಯಾ, ಧನುಸ್ಸು ಮತ್ತು ಕುಂಭರಾಶಿಗಳಲ್ಲಿರುವಾಗ ಗಯಾದಲ್ಲಿ ಪಿಂಡಪ್ರದಾನ ಮಾಡುವುದರಿಂದ ಬರುವ ಫಲವು ತ್ರಿಲೋಕದಲ್ಲಿಯೂ ದುರ್ಲಭವು.

ಸೂರ್ಯನು ಮಕರ ರಾಸಿಯ (ಸಂಕ್ರಮಣದ)ಲ್ಲಿರುವಾಗ, ಚಂದ್ರ ಸೂರ್ಯರ ಗ್ರಹಣಗಳು ಬಂದಾಗ, ಗಯಾದಲ್ಲಿ ಪಿಂಡವನ್ನು ಹಾಕುವುದು ತ್ರಿಲೋಕಗಳಲ್ಲೂ ಲಭಿಸದಿರುವ ಮಹಾಫಲವನ್ನು ಕೊಡುವುದು.

ಗಯಾದಲ್ಲಿ ಪಿಂಡದಾನಮಾಡುವುದರಿಂದ ಏನುಫಲ ಬರುತ್ತದೆಂಬುದು ಕೋಟಿ ಕಲ್ಪಗಳಲ್ಲಿ ಹೇಳಿದಗೂ ಮುಗಿಯದು. ಅದು ಅನಂತ ಪುಣ್ಯಫಲ ಪ್ರದವು.

॥ ೨ ॥

ನಾರದರು :—ಗಯಾಸುರನು ಹೇಗೆ ಹುಟ್ಟಿದನು? ಆತನ ಪ್ರಭಾವವೆಂಥದು? ಆತನು ಯಾವ ಸ್ವಭಾವದವನು? ಅವನ ಸ್ವರೂಪವು ಹೇಗೆ? ಆತನಿಂದ ಹೇಗೆ ತಪಸ್ಸು ಮಾಡಲ್ಪಟ್ಟಿತು? ಆತನ ದೇಹವು ಹೇಗೆ ಪವಿತ್ರವಾದುದು?

ಸನತ್ಕುಮಾರರು :—ಲೋಕಪಿತಾಮಹನಾದ ಬ್ರಹ್ಮನು ವಿಷ್ಣುವಿನ ನಾಭೀ ಕಮಲದಿಂದ ಜನಿಸಿದನು. ದೇವೋತ್ತಮನಾದ ವಿಷ್ಣುವಿನಿಂದ

ಆಜ್ಞಾಪ್ತನಾಗಿ, ಆತನು ವಿವಿಧ ಪ್ರಜೆಗಳನ್ನು ಸೃಜಿಸಿದನು. ಪೂರ್ವದಲ್ಲಿ ಅಸುರ ಭಾವದಿಂದ ಅಸುರರನ್ನು ಸೃಷ್ಟಿಸಿದರು. ಸೌಮನ್ಯಭಾವದಿಂದ "ಸುಮನಸ"ರೆಂಬ ದೇವತೆಗಳನ್ನು ಸೃಜಿಸಿದನು.

ದೇವದಾನವರೆಲ್ಲರಲ್ಲೂ ಮಹಾಬಲ ಪರಾಕ್ರಮವುಳ್ಳವನು ಗಯಾಸುರನು. ಆತನ (ಉಚ್ಚಯ) ಎತ್ತರವು ಒಂದೂಕಾಲು ಲಕ್ಷ ಯೋಜನವೆಂತಲೂ, 60 ಯೋಜನ ಸ್ಥೂಲ (ದಪ್ಪ) ವೆಂತಲೂ, ವೈಷ್ಣವರಿಂದ ಸ್ಮೃತನಾಗಿ **ಕೋಲಾಹಲವೆಂಬ** ಪರ್ವತದಲ್ಲಿ ಬಹು ಸಹಸ್ರಾರು ವರ್ಷಗಳು ಅತ್ಯಂತ ದಾರುಣವಾದ, ಶ್ವಾಸೋಚ್ಛ್ವಾಸವಿಲ್ಲದೆ, ನಿರುಚ್ಛ್ವಾಸನಾಗಿ, ಅಲ್ಲಾಡದೆ ಸ್ಥಿರನಾಗಿ, ತಪಸ್ಸನ್ನಾಚರಿಸಿದನು. ಅಂಥ ಆತನ ತಪಸ್ಸಿನಿಂದ ಪರಿತಪ್ತರಾದ ದೇವತೆಗಳು ಭಯ ಭೀತರಾಗಿ ದಿಕ್ಕು ತೋರದ ಅತಿಶಯ ಸಂಕ್ಷೋಭೆಯನ್ನು ಹೊಂದಿದರು. ಅವರೆಲ್ಲರೂ ಒಟ್ಟಿಗೆ ಸೇರಿ ಬ್ರಹ್ಮಲೋಕಕ್ಕೆ ಹೋಗಿ ಪಿತಾಮಹನನ್ನು ಕುರಿತು "ದೇವ, ನಮ್ಮನ್ನು ಗಯಾಸುರನ ದೆಶೆಯಿಂದ ರಕ್ಷಿಸು" ಎಂದರು. ಬ್ರಹ್ಮನು ಅವರನ್ನು ಕುರಿತು "ದೇವತೆಗಳಿರಾ, ಶಂಕರನಲ್ಲಿ ಹೋಗೋಣ" ಎಂದನು. ಕೈಲಾಸಕ್ಕೆ ಹೋಗಿ, ಎಲ್ಲರೂ ಶಂಕರನನ್ನು ಕುರಿತು, "ಶಿವನೇ, ಮಹಾಸುರನ ದೆಶೆಯಿಂದ ರಕ್ಷಿಸು, ರಕ್ಷಿಸು" ಎಂದು ಬ್ರಹ್ಮಾದಿಗಳು ಶಂಭುನನ್ನು ಕುರಿತು ಹೇಳಿದರು.

ಆತನು—"ಶೀಘ್ರವಾಗಿ ನಾವೆಲ್ಲರೂ ಹೋಗಿ, ಹರಿಯನ್ನು ಶರಣು ಹೊಂದೋಣ, ಕ್ಷೀರಾಬ್ಧಿಯಲ್ಲಿರುವ, ಆ ದೇವದೇವೇಶನು ನಮ್ಮೆಲ್ಲರಿಗೂ ಶ್ರೇಯಸ್ಸನ್ನುಂಟುಮಾಡಿ ಕಾಪಾಡುತ್ತಾನೆ" ಎಂದನು. ಬ್ರಹ್ಮನೂ, ಮಹೇಶ್ವರನೂ ಆ ದೇವತೆಗಳೂ ಅಲ್ಲಿಗೆ ಹೋಗಿ ವಿಷ್ಣುವಿಗೆ ನಮಸ್ಕರಿಸಿ—ದೇವತೆಗಳು ಸ್ತೋತ್ರಮಾಡಿದರು—

ಓಂ ನಮೋ ವಿಷ್ಣವೇ ಭೂಭರ್ತ್ರೇ ಸರ್ವೇಷಾಂ ಪ್ರಭವಿಷ್ಣವೇ ।
ರೋಚಿಷ್ಣವೇ ಜಿಷ್ಣವೇ ಚ ರಾಕ್ಷಸಾದಿ ಗ್ರಸಿಷ್ಣವೇ ॥
ಧರಿಷ್ಣವೇ ಽಖಿಲಸ್ಯಾಸ್ಯಯೋಗಿನಾಂ ಪಾರದೃಷ್ವಯೇ
ಬರ್ಹಿಷ್ಣವೇ ಽಹ್ಯಸಂತಾಯ ನಮೋ ಭ್ರಾಜಿಷ್ಣವೇ ನಮಃ ॥

"ಪ್ರಣವಪ್ರತಿಪಾದ್ಯನೂ, ಸರ್ವಸದ್ಗುಣ ಗಣಗಳಿಂದ ಪರಿಪೂರ್ಣನೂ ಅಧಿಕತ್ವೇನ, ಉಚ್ಚತ್ವೇನ, ಸರ್ವ ದೇವತೆಗಳಿಂದಲೂ, ವೇದಾದಿ ಸದಾಗಮಗಳಿಂ

ದಲವ ಜ್ಞಾತನೂ, ಸರ್ವತ್ರ ವ್ಯಾಪ್ತನೂ, ಭೂಮ್ಯಾದಿ ಸಕಲ ಜಗದ್ಭರ್ತನೂ, ರಕ್ಷಕನೂ, ಸರ್ವರನ್ನೂ ವೃದ್ಧಿಪಡಿಸಿ ದೈವೀ ಸಂಪತ್ತನಿತ್ತು ಮೆರೆಯಿಸುವವನೂ ಪ್ರಕಾಶ ರೂಪನೂ, ಭಕ್ತರ ಮನೋರಥಗಳನ್ನು ಈಡೇರಿಸಿ ಕೊಡುವವನೂ, ಸದಾ ಜಯಶೀಲನೂ, ಅಪರಾಜಿತನೂ, ರಾಕ್ಷಸಾಸುರ ದೈತ್ಯದಾನವಾದಿ ದುಷ್ಟ ಶಕ್ತಿಯನ್ನು ನಿಗ್ರಹಿಸುವವನೂ, ಸರ್ವಜಗತ್ತಿಗೂ ಧಾರಕನೂ, ಅಖಿಲ ಯೋಗಿಗಳಿಗೂ ದರ್ಶನವಿತ್ತು ಮೋಕ್ಷಾದಿ ಪ್ರಮರ್ಥಗಳನ್ನು ಕೊಟ್ಟು, ಪಾರ ಗಾಣಿಸುವವನೂ, ಯಜ್ಞಾದಿ ಸತ್ಕರ್ಮಫಲ ಭೋಕ್ತನೂ, ಕರ್ಮ ಕರ್ತನೂ, ಕಾರಯಿತೃವೂ, ಫಲದಾತನೂ, ಆದ ಅಂತ್ಯರಹಿತನಾಗಿ ಅನಾದ್ಯನಂತನಾದ ಪ್ರಕಾಶರೂಪಿಯಾದ, ಅನಂತರೂಪಿ ಭಗವಂತನಿಗೆ ನಮೋ ನಮಃ, ನಮ ಸ್ಕಾರ, ನಮಸ್ಕಾರವು."

ಸನತ್ಕುಮಾರರು :—"ನಾರದನೇ, ಈ ರೀತಿ ಸ್ತುತ್ಯನಾದ ವಾಸು ದೇವನು ಆ ದೇವತೆಗಳಿಗೆ ದರ್ಶನವನ್ನು ಕೊಟ್ಟ ವಿಷ್ಣುವು "ದೇವತೆಗಳಿರಾ, ಏತಕ್ಕಾಗಿ ಬಂದಿರುವಿರಿ?" ಎಂದು ಕೇಳಲು, "ಹೇದೇವ, ಗಯಾಸುರನ ಭಯದ ದೆಸೆಯಿಂದ ನಮ್ಮನು ರಕ್ಷಿಸು" ಎಂದು ಅವರು ಪ್ರಾರ್ಥಿಸಲು ಹರಿಯು "ಬ್ರಹ್ಮಾದಿ ನೀವೆಲ್ಲರೂ ಆ ದೈತ್ಯನಲ್ಲಿ ಹೊರಡಿ." ನಾನು ಈಗಲೇ ಬರುತ್ತೇನೆ" ಎಂದು ಹೇಳಿ ಬ್ರಹ್ಮರುದ್ರಾದಿಗಳಿಗೆ ರಕ್ಷಕನೂ ಸ್ವಾಮಿಯೂ ಆದ ಕೇಶವನು ಗರುಡಾರೂಢನಾಗಿ, ಗಯಾಸುರನಿಗೆ ವರಪ್ರದಾನ ಮಾಡಲು, ಆತ ನಿದ್ದಲ್ಲಿಗೆ ಹೊರಟನು, ಸರ್ವ ದೇವತೆಗಳೂ ತಮ್ಮ ತಮ್ಮ ಉತ್ತಮ ವಾಹನ ಗಳನ್ನೇರಿ ಆ ಹರಿಯನ್ನನುಸರಿಸಿ ಹೋಗಿ ಸೇರಿ, ಗಯಾಸುರನನ್ನು ಕುರಿತು ಆ ವಾಸುದೇವಾದಿಗಳು "ಎಲೈ ಗಯಾಸುರನೇ, ಏತಕ್ಕಾಗಿ ಹೀಗೆ ತಪ ಸನ್ನು ಮಾಡುತ್ತಿರುವಿ? ಹೇಳು. ನಾವೆಲ್ಲರೂ ನಿನ್ನ ತಪಸ್ಸಿಗೆ ಮೆಚ್ಚಿ: ಸಂತುಷ್ಟ ರಾಗಿ ಬಂದಿರುವೆವು. ಏನು ವರಬೇಕು ಕೇಳು." ಎನ್ನಲು, ಗಯಾಸುರನು— ಬ್ರಹ್ಮ, ವಿಷ್ಣು, ಮಹೇಶ್ವರರು ನನಗೆ ಸಂತುಷ್ಟರಾಗಿದ್ದರೆ, ಸರ್ವದೇವ ದ್ವಿಜಾತಿಗಳೆಲ್ಲರಕ್ಕಿಂತಲೂ, ಎಲ್ಲ ಯಜ್ಞ, ತೀರ್ಥ, ಶಿಲೋಚ್ಚಯಗಳು ಪರ್ವ ತೋತ್ತಮಗಳು ಕ್ಷೇತ್ರಗಳೆಲ್ಲದರಕ್ಕಿಂತಲೂ, ದೇವತೆಗಳೆಲ್ಲರಕ್ಕಿಂತಲೂ, ನಾನು ಪವಿತ್ರನಾಗಬೇಕು. ನಾಶರಹಿತರೂ ಪರಿಶುದ್ಧರಾದ ಸಕಲ ಋಷಿಗಳ ಕ್ಕಿಂತಲೂ ನಾನು ಶುದ್ಧನೂ, ಮಂಗಳರೂಪಿಯೂ, ಮಂಗಳಪ್ರದನೂ ಆಗಿರ

ಬೇಕು, ಜ್ಞಾನಿಗಳ ದೆಶೆಯಿಂದಲೂ, (ಕರ್ಮಿಗಳ) ಕರ್ಮಯೋಗಿಗಳ ದೆಶೆ ಯಿಂದಲೂ, ಧರ್ಮಾತ್ಮರುಗಳ ದೆಶೆಯಿಂದಲೂ ಮತ್ತೆ ಪುನಃ ಮಂತ್ರ ಜಪ ಮಾಡುವ, ಮಂತ್ರಿಗಳೆಲ್ಲರ ದೆಶೆಯಿಂದಲೂ, ಸಕಲ ರಾಜತಂತ್ರಜ್ಞ ಮಂತ್ರಿಗಳ ದೆಶೆಯಿಂದಲೂ ಸಕಲ ಮಂತ್ರಗಳ ದೆಶೆಯಿಂದಲೂ ನಾನು ಸದಾ ಪವಿತ್ರ ನಾಗಿರಬೇಕು." ಎಂದು ವರವನ್ನು ಕೇಳಿಕೊಳ್ಳಲು, ಆತನನ್ನು ಕುರಿತು ಪವಿತ್ರವುಂಟಾಗಲಿ. ಎಂದು ಆ ದೈತ್ಯನಿಗೆ ಹೇಳಿ, ಎಲ್ಲ ದೇವತೆಗಳೂ ಸ್ವರ್ಗಕ್ಕೆ ಹೊರಟುಹೋದರು. ಅನಂತರ ದೈತ್ಯನನ್ನು ನೋಡಿ ಅವನನ್ನು ಸ್ಪರ್ಶಮಾಡಿ (ಮುಟ್ಟಿ) ಸರ್ವರೂ ಹರಿಪುರಕ್ಕೆ ಹೋದರು.

ಲೋಕತ್ರಯವೂ ಶೂನ್ಯವಾಯಿತು. ಯಮಪುರಿ (ನರಕಲೋಕವೂ) ಯೂ ಶೂನ್ಯವಾ (ಬರಿದಾ) ಯಿತು. ಅನಂತರ ಯಮನು ಇಂದ್ರಾದಿಗಳಿಂದ ಕೂಡಿಕೊಂಡು ದೇವತೆಗಳು ಬ್ರಹ್ಮ (ಸತ್ಯ) ಲೋಕಕ್ಕೆ ಹೋಗಿ, ಬ್ರಹ್ಮ ನನ್ನು ಕುರಿತು—"ನಾವು ಗಯಾಸುರನಿಂದ ವಿಲೋಪಿತರಾದವು. ಅಧಿಕಾರ, ಆಡಳಿತ ರಹಿತರಾದೆವು, ಹೇ ಪಿತಾಮಹರೇ, ನೀವು ಕೊಟ್ಟ ಅಧಿಕಾರವನ್ನು ನೀವೇ ತೆಗೆದುಕೊಳ್ಳಿ" ಎಂದರು. ಬ್ರಹ್ಮನು—"ಅವ್ಯಯನೂ ಚತುರ್ವಿಧ ನಾಶಶೂನ್ಯನೂ ಆದ ವಿಷ್ಣುವಿನಲ್ಲಿ ಹೋಗೋಣ." ಎಂದು ಹೇಳಿ ಶ್ರೀಹರಿಯಲ್ಲಿ ಹೋಗಿ, ಆ ಬ್ರಹ್ಮಾದಿಗಳೆಲ್ಲರೂ ವಿಷ್ಣುವನ್ನು ಕುರಿತು "ನಿನ್ನಿಂದ ವರವನ್ನು ಪಡೆದ ಆ ಅಸುರನನ್ನು ನೋಡಿ, ಸ್ವರ್ಗಕ್ಕೆ ಹೋದೆವು. ಈಗ ಲೋಕತ್ರಯ ವೆಲ್ಲವೂ ಶೂನ್ಯವಾಗಿವೆ." ಹೀಗೆ ದೇವತೆಗಳಿಂದ ಹೇಳಿದ್ದನ್ನು ಕೇಳಿ ವಾಸು ದೇವನು ತುಷ್ಟನಾಗಿ ಬ್ರಹ್ಮನನ್ನು ಕುರಿತು. "ನೀನು ಗಯಾಸುರನಲ್ಲಿ ಹೋಗಿ ಯಜ್ಞಕ್ಕೋಸ್ಕರವಾಗಿ ನಿನ್ನ ದೇಹವನ್ನು ಕೊಡು" ಎಂದು ಅವನನ್ನು ಪ್ರಾರ್ಥಿಸು ಎಂದನು. ಈ ರೀತಿ ವಿಷ್ಣುವಿನಿಂದ ಉಕ್ತನಾದ ಬ್ರಹ್ಮನು ದೇವತೆಗ ಳೊಡಗೂಡಿ ಮಹಾಸುರನಾದ ಗಯನನ್ನು ನೋಡಿದನು. ದೇವತೆಗಳ ಜೊತೆಯಲ್ಲಿ ಬಂದ ಬ್ರಹ್ಮದೇವನನ್ನು ಕಂಡು ಗಯಾಸುರನು, ನ್ಯಾಯವಿಧಿ ಯಂತೆ, ಯಥಾವಿಧವಾಗಿ ಭಕ್ತಿಯಿಂದ ಪೂಜಿಸಿ, ಅತಿಥಿಯನ್ನು ಸತ್ಕರಿಸಿ, ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ವಿನಯದಿಂದ ಕೂಡಿ,—

ಗಯಾಸುರನು—

ಅದ್ಯ ಮೇ ಸಫಲಂ ಜನ್ಮ ಅದ್ಯ ಮೇ ಸಫಲಂ ತಪಃ ।
ಯದಾಽಗತೋಽತಿಥಿರ್ಬ್ರಹ್ಮಾ ಸರ್ವಂ ಪ್ರಾಪ್ತಂಮಮಾದ್ಯ ವೈ ॥
ಯೋಗಿನ್ ಯೋಗಾಂಗವಿತ್ಸರ್ವಲೋಕಸ್ವಾಮಿನ್ ಪಿತರ್ಗುರೋ ।
ಯದರ್ಥಮಾಗತೋ ಬ್ರಹ್ಮನ್ ತತ್ಕಾರ್ಯಂ ಕರವಾಣ್ಯಹಂ ॥

"ಈಗ ನನ್ನ ಜನ್ಮವು ಸಾರ್ಥಕವಾಯಿತು, ಈಗ ನನ್ನ ತಪಃ ಫಲವು ಸಿದ್ಧಿಸಿತು. ಯಾವಾಗ ಬ್ರಹ್ಮನು ನನ್ನಲ್ಲಿ ಅತಿಥಿಯಾಗಬಂದನೋ, ಆಗಲೇ ನನ್ನ ಇಷ್ಟಾರ್ಥ (ಮನೋಗತ) ಗಳೆಲ್ಲವೂ ಪ್ರಾಪ್ತವಾದವು, ಹೇ ಯೋಗಿಯೇ, ಸರ್ವ ಯೋಗಾಂಗಗಳನ್ನೂ ಬಲ್ಲವನೇ, ಲೋಕಸ್ವಾಮಿಯೇ, ನನ್ನ ತಂದೆಯೇ ಗುರುವೇ, ಹೇ ಬ್ರಹ್ಮನ್, ಏತಕ್ಕೋಸ್ಕರವಾಗಿ ಬಂದಿರುವಿರಿ? ನನ್ನಿಂದ ಏನು ಕಾರ್ಯವಾಗಬೇಕೋ ಅದನ್ನು ಹೇಳಿದರೆ ನಾನು ಮಾಡುತ್ತೇನೆ" ಎಂದನು.

ಬ್ರಹ್ಮನು—ಪೃಥ್ವಿಯಲ್ಲಿ ಯಾವ ಯಾವ ತೀರ್ಥಗಳಿವೆಯೋ ಅವೆಲ್ಲವನ್ನು ನಾನು ಸಂಚಾರಮಾಡುತ್ತಾ, ನೋಡುತ್ತಾ ಬಂದೆ. ಯಜ್ಞಕ್ಕೋಸ್ಕರವಾಗಿ ಅವು ಯಾವುವೂ ಶರೀರತಃ ಪವಿತ್ರವಾಗಿಲ್ಲವು. ವಿಷ್ಣುವಿನ ಪ್ರಸಾದದಿಂದ, ನಿನ್ನ ದೇಹವು, ನಿನ್ನ ತಪಸ್ಸಿನಿಂದಲೂ, ಹರಿಯ ಅನುಗ್ರಹದಿಂದಲೂ, ಪವಿತ್ರತ್ವವನ್ನು ಪಡೆಯಿತು. ಆದುದರಿಂದ ಎಲೈ ಅಸುರನೇ, ಈ ಪವಿತ್ರವಾದ ನಿನ್ನ ದೇಹವನ್ನು ಯಜ್ಞಾರ್ಥವಾಗಿ ಕೊಡು" ಎಂದನು.

ಗಯಾಸುರನು—"ಹೇ ದೇವ ದೇವೇಶನೇ, ನಾನು ಧನ್ಯನಾದೆನು, ಯಾವ ಈ ದೇಹವು ನಿನ್ನಿಂದ ಪ್ರಾರ್ಥಿತವಾಯಿತೋ, ಅದರಿಂದ, ನಾನು ನನ್ನ ಪಿತೃವಂಶದಲ್ಲಿ ಹುಟ್ಟಿದ್ದಕ್ಕೂ, ಕೃತಾಥನಾದನೆಂದು ಮಾತ್ರವಲ್ಲದೆ, ಮಾತೃವಂಶದಲ್ಲೂ ಅದೇರೀತಿ ಕೃತಾರ್ಥನಾದೆನು; ಆ ಉಭಯ ವಂಶಗಳೂ ಸಾರ್ಥಕವಾದವು. ನಿನ್ನಿಂದಲೇ ಉತ್ಪಾದಿತವಾ (ಹುಟ್ಟಿ) ದ ಈ ದೇಹವು ನಿನ್ನಿಂದಲೇ ಪವಿತ್ರವೂ ಮಾಡಲ್ಪಟ್ಟಿತು. ಯಾಗವು ಅಗತ್ಯವಾಗಿ ಸರ್ವರ ಉಪಕಾರಕ್ಕಾಗಿಯೇ ಆಗುವುದು." ಹೀಗೆಂದು ಹೇಳಿ ಆ **ಗಯಾಸುರನು** ಶ್ವೇತ ಕಲ್ಪದಲ್ಲಿ ನೈರುತ್ಯ ದಿಕ್ಕನ್ನು ಆಶ್ರಯಿಸಿ ಈ ಭೂಮಿಯಲ್ಲಿ ಕೋಲಾಹಲಗಿರಿಯಲ್ಲಿ ಬಿದ್ದನು. ಶಿರಸ್ಸನ್ನು ಉತ್ತರಕ್ಕೂ, ಪಾದಗಳೆರಡನ್ನೂ ದಕ್ಷಿಣ ದಿಕ್ಕಿಗೂ, ಚಾಚಿ ದೇಹವನ್ನು ಮಲಗಿಸಿದನು. ಬ್ರಹ್ಮನು ಯಜ್ಞಕ್ಕೆ ಬೇಕಾದ

ಸಂಭಾರ (ಪದಾರ್ಥ) ಗಳನ್ನೆಲ್ಲಾ ಸಿದ್ಧಮಾಡಿ, ಮನಸ್ಸಿನಲ್ಲಿ ಇಚ್ಛೆ ಮಾಡುವ ಮಾತ್ರದಿಂದಲೇ ಮಾನಸ ಋತ್ವಿಕರನ್ನು ಸೃಜಿಸಿದನು. ಅಗ್ನಿಶರ್ಮನು, ಮರಣರಹಿತ ಅಮೃತನೆನಿಸಿದ ಶೌನಕನು, ಅತಿ ಮೃದುವಾದ ಪ್ರಜಾಲಿಯು, ಕುಮಥಿ, ವೇದವೇತ್ತನಾದ ಕೌಂಡಿನ್ಯನು, ಹಾರೀತ, ಕಾಶ್ಯಪ, ಕೃಪ, ಗಾರ್ಗ್ಯ, ಕೌಶಿಕ, ವಾಶಿಷ್ಟಮುನಿ, ಅವ್ಯಯನಾದ ಭಾರ್ಗವ (ಪರುಶುರಾಮ) ನು, ವೃದ್ಧ ಪಾರಾಶರನು, ಕಾಣ್ವ, ಮಾಂಡವ್ಯ, ಕೇವಲ, ಶ್ರುತಿಯಲ್ಲಿಯೇ ಆಸಕ್ತನಾದ ಶ್ವೇತಸುತನು, ಆತನ ಪುತ್ರ ಸುತಾಲನು, ದಮನನು, ಕುಹೋತ್ರನು ಕರ್ಕಋಷಿ, ಲೋಗಾಕ್ಷ ಹಾಗೆಯೇ ಮಹಾಬಾಹುವಾದ ಜೈಗೀಷವ್ಯ ದಧೀಚಿ ಋಷಿ ಪಂಚಭುವನು, ವಿಪ್ರರ್ಷಿ ಋಷಭನು. ಕರ್ಕನು ಕಾತ್ಯಾಯನ, ಗೋಭಿಲ ಮುನಿಗಳು, ಮಹಾವ್ರತಾನುಷ್ಠಾತ್ಯಗಳಾದ ಮಿಶ್ರರೆಂಬುವರು. ಸುಪಾಲಕರು ಗೌತಮರು, ವೇದಶಿರೋವ್ರತರು, ಅವ್ಯಗ್ರರಾದ ಜಟಾಮಾಲಿಗಳೂ, ಚಾಟುಹಾಸರು, ದಾರುಣರು. ಆತ್ರೇಯರು ಮಹಾ ಅಂಗಿರಸರು, ಮಹಾ ವ್ರತಸ್ಥರಾದ ಉಪಮನ್ಯುಗಳು ಗೋಕರ್ಣರು. ಗುಹಾವಾಸಿಗಳಾದ ಉಮಾ ವ್ರತಪರಾಯಣರಾದ ಶಿಖಂಡಿ ಋಷಿ, ಇವರೇ ಮೊದಲಾದ ಇನ್ನೂ ಅನೇಕ ವಿಪ್ರೇಂದ್ರರನ್ನು ದೇವಲೋಕ ಪಿತಾಮಹನು ಪರಿಕಲ್ಪಿಸಿ, ಗಯಾಸುರನ ಶರೀರದಲ್ಲಿ ಯಜ್ಞವನ್ನು ಮಾಡಿದನು.

ಅಗ್ನಿ ಶರ್ಮನೂ ಸಹ ಮುಖದ ದೆಶೆಯಿಂದ ಎಲ್ಲ ದೇವರ್ಷಿಯೇ (ನಾರದನೇ,) ದಕ್ಷಿಣಾಗ್ನಿ, ಗಾರ್ಹ್ಯಪತ್ಯ, ಅವನೀಯ, ತಪೋಮಯವಾದ ಸಭ್ಯಾವಸತ್ಥಾವೆಂಬ ಈ ರೀತಿಯ ಪಂಚಾಗ್ನಿಗಳನ್ನು ಸೃಜಿಸಿದನು. ಇವುಗಳಲ್ಲೇ ಯಜ್ಞಮಾಡತಕ್ಕದ್ದೆಂದು ಪ್ರಕೀರ್ತಿತಗಳಾಗಿವೆ. ಯಜ್ಞದ ಪ್ರತಿಷ್ಠಾಕ್ಕಾಗಿ ವಿಪ್ರರಿಗೆ ದಕ್ಷಿಣೆಗಳೂ ಕೊಡಲ್ಪಟ್ಟವು. ಬ್ರಹ್ಮನು ಪೂರ್ಣಾಹುತಿಯನ್ನು ಹವನಮಾಡಿ, ಅವಭೃತ ಸ್ನಾನವನ್ನು ಮಾಡಿದನಂತರ ಅಸುರನನ್ನು ಯಜ್ಞವಾಟದಲ್ಲಿ ದೇವತೆಗು ತಂದು ಬ್ರಹ್ಮನ ಶಿರಸ್ಸಿನಲ್ಲಿ ಚೆನ್ನಾಗಿ ಇಟ್ಟರು (ವ್ಯರೋಪಿಸಿದರು) ಆಗ ಶ್ರೇಷ್ಠನಾದ ದೈತ್ಯಮಹಾಸುರನು ಚಲಿಸಿದನು. ಬ್ರಹ್ಮನು ಚಕಿತನಾಗಿ, ಧರ್ಮರಾಜನನ್ನು ಕುರಿತು "ನಿನ್ನ ಮನೆಯಲ್ಲಿರುವ, ಶಿಲೆಯನ್ನು ತಂದು ಇಲ್ಲಿ ಶೀಘ್ರವಾಗಿ ಈ ದೈತ್ಯನ ಶಿರಸ್ಸಿ ಹೇರಿ ಚಲಿಸದಂತೆ ನನ್ನ ಆಜ್ಞೆಯಂತೆ ಧರಿಸು" ಎಂದನು. ಯಮನು ಅವನ ಅಪ್ಪಣೆ

ಯನ್ನು ಕೇಳಿ, ಶಿಲೆಯನ್ನು ಅವನ ತಲೆಯ ಮೇಲೆ ಇಟ್ಟನು. ಆ ಶಿಲೆಯನ್ನು ಹಾಗೆ ಧರಿಸಿದ ನಂತರವೂ, ಅಸುರನು ಆ ಶಿಲೆಯ ಜೊತೆಯಲ್ಲೇ ಚಲಿಸಿದನು. ದೇವತೆಗಳು ಪಾದಗಳಿಂದ ಲಕ್ಷೆ (ಚಿನ್ಹೆ) ಗಳನಿಟ್ಟರೂ ಅಸುರನು ಚಲಿಸಿದನು. ಬ್ರಹ್ಮನು ವ್ಯಾಕುಲನಾಗಿ, ಕ್ಷೀರಾಬ್ಧಿಶಾಯಿಯಾದ ವಿಷ್ಣುವಿನಲ್ಲಿ ಹೋಗಿ ನಮಸ್ಕರಿಸಿ, ಭಕ್ತಿಯಿಂದ ಪ್ರಣತನಾಗಿ, ಆಧೃತನಾಗಿ ಪ್ರಭುವನ್ನು ಕುರಿತು .

ಬ್ರಹ್ಮಾ—

ಬ್ರಹಾಂಡಸ್ಯ ಪತೇ ನಾಥ ನಮಾಮಿ ಜಗತಾಂ ಪತೇ ।
ಪತಿಂ ಕೀರ್ತಿಮತಾಂ ನೃಣಾಂ ಭುಕ್ತಿಮುಕ್ತಿಪ್ರದಾಯಕಂ ॥

"ಬ್ರಹಾಂಡದ ಪತಿಯೇ, ಹೇನಾಥ, ಜಗತ್ಪತಿಯೇ, ಕೀರ್ತಿಮಂತರಾದ ಮಾನವರ ಪತಿಯೇ, ಭಕ್ತ ಜನರಿಗೆ ಭುಕ್ತಿಮುಕ್ತಿಪ್ರದನಾದ ನಿನ್ನನ್ನು ನಮಸ್ಕರಿಸುತ್ತೇನೆ. ಎಂದು ಸ್ತುತಿಸುತ್ತಿರಲು, ವಿಷ್ವಕ್ಸೇನನು ವಿಷ್ಣುವನ್ನು ಕುರಿತ ದೇವ, ನಿನ್ನನ್ನು ಬ್ರಹ್ಮನು (ಪದ್ಮಭವನು) ಸ್ತುತಿಸುತ್ತಿರುವನು.

ಹರಿಯು—"ಆತನನ್ನು ನೀನು ಹೋಗಿ ಕರೆದುಕೊಂಡು ಬಾ" ಎಂದು ಆಜ್ಞೆಮಾಡಲು, ಆತನು ವಿಷ್ಣುವಿನ ಅಪ್ಪಣೆಯಂತೆ ಅವನನ್ನು ಕರೆತರಲು, ಹರಿಯು ಅಜನನ್ನು ಕುರಿತು "ನೀನು ಏತಕ್ಕೆ ಬಂದಿದ್ದಿ ? ಅದನ್ನು ಹೇಳು" ಎಂದನು.

ಬ್ರಹ್ಮಾ—"ದೇವದೇವೋತ್ತಮನೇ, ಯಾಗವನ್ನು ಮಾಡುತ್ತಿರಲು ಗಯಾಸುರನು ಚಲಿಸಿದನು. ಆತನ ತಲೆಯಮೇಲೆ ದೇವರೂಪಿಯಾದ ಧರ್ಮಶಿಲೆಯು ಇಟ್ಟರೂ ಸಹ ರುದ್ರಾದಿ ದೇವತೆಗಳು ಅದರಮೇಲೆ ಸಂಸ್ಥಿತರಾದಾಗ್ಯೂ ಅಸುರನು ಚಲಿಸಿದನು, ಮಾಧವನೇ, ಈಗ ಅವನು ನಿಶ್ಚಲಾರ್ಥವಾಗಿ ಚಲಿಸದಿರಲು ನೀನೇ ಅನುಗ್ರಹಿಸಬೇಕು" ಎಂಬ ಬ್ರಹ್ಮನ ವಚನವನ್ನು ಕೇಳಿ ತನ್ನ ಶರೀರದ ದೆಸೆಯಿಂದ ಆಕರ್ಷಿಸಿ ಈಚೆಗೆ ತೆಗೆದು ನಿಶ್ಚಲಾರ್ಥವಾಗಿ ತನ್ನ ಒಂದು ಮೂರ್ತಿಯನ್ನು ಭಗವಾನ್ ಹರಿಯು ಬ್ರಹ್ಮನಿಗೆ ಕೊಟ್ಟನು. ಆ ಮೂರ್ತಿಯನ್ನು ಬ್ರಹ್ಮನು ತಂದು ಆ ಶಿಲೆಯಲ್ಲಿ ಇಟ್ಟು ಧರಿಸಿದನು, ಸ್ಥಾಪಿಸಿದನು. ಆದರೂ ಚಲಿಸಿದ್ದನ್ನು ಕಂಡು ಪುನಃ ದೇವವನ್ನೇ

ಇಲ್ಲಿಗೆ ಆಹ್ವಾನಿಸಿ ಕರೆತಂದನು. ವಿಷ್ಣುವು ಕ್ಷೀರಾಬ್ಧಿಯಿಂದ ಸ್ವಯಂ ಬಂದು ಶಿಲೆಯಲ್ಲಿ ಸಂಸ್ಥಿತನಾದನು. ಜನಾರ್ದನನೆಂಬ ಹೆಸರಿನಿಂದಲೂ, ಪುಂಡರೀಕಾಕ್ಷನೆಂಬ ನಾಮದಿಂದಲೂ, ಸ್ವಯಂ ಆದಿ ಗದಾಧರನು ನಿಶ್ಚಲಾರ್ಥವಾಗಿ ನಿಂತನು. ಶಿಲಾದಲ್ಲಿ ನಿಶ್ಚಲಾರ್ಥವಾಗಿ ಈ ರೀತಿ ಐದು ಬಗೆಯಾಗಿ ಪ್ರಪಿತಾಮಹನು ನಿಂತನು. ಪಿತಾಮಹನು ಫಲ್ಗ್ವೀಶನು, ಕೇದಾರನು, ಕನಕೇಶ್ವರನು ಎಂಬುದಾಗಿ ಸ್ವಯಂ ಬ್ರಹ್ಮನು ಅಲ್ಲೇ ಗಜರೂಪೀ ವಿನಾಯಕನೂ ಆದನು. ಸೂರ್ಯ (ರವಿಯು) ನು ಗಯಾದಿತ್ಯ, ಉತ್ತರಾರ್ಕ, ದಕ್ಷಿಣಾರ್ಕ ವೆಂಬುದಾಗಿ ಮೂರು ರೂಪದಿಂದಲೂ ಲಕ್ಷ್ಮಿಯು ಸೀತಾ ಎಂಬ ನಾಮದಿಂದ ಮಂಗಳಾ ಎಂದು ಕರೆಯಿಸಿಕೊಂಡು ನೆಲಸಿದಳು. ಗಾಯತ್ರಿ ಮತ್ತು ಸಾವಿತ್ರಿಯರು ತ್ರಿಸಂಧ್ಯೆ ನಾಮಕ ಸರಸ್ವತಿಯೂ ನಿಂತರು. ಇಂದ್ರನು, ಬೃಹಸ್ಪತಿ, ಪೂಷಾ, ಅಷ್ಟ ವಸುಗಳು, ಮುನೀಶ್ವರರೂ, ವಿಶ್ವೇ ದೇವತೆಗಳು ಅಶ್ವಿನಿ ದೇವತೆಗಳಿಬ್ಬರೂ, ಮರುತ್ತಗಳು, ವಿಶ್ವನಾಯಕನು, ಯಕ್ಷರು, ಉರುಗರು, ಗಂಧರ್ವರು ಈ ಎಲ್ಲ ದೇವತೆಗಳೂ ತಮ್ಮ ಶಕ್ತ್ಯನುಸಾರ ಬಂದು ನೆಲಿಸಿ ನಿಂತರು. ಈ ದೈತ್ಯನು ಆದ್ಯಗದೆಯಿಂದ ಸ್ಥಿರೀಕೃತನಾದನು, ಚಲಿಸದಂತಾದನಾದುದರಿಂದ ಹರಿಯಿಂದ ಸ್ಥಿತನಾದುದರಿಂದಲೇ ಆದಿಗದಾಧರನೆಂದು ವಿಷ್ಣುನಾಮವು" ಎಂದು ಕರೆದರು.

ಗಯಾಸುರನು ದೇವತೆಗಳನ್ನು ಕುರಿತು "ನಾನು ಏತಕ್ಕಾಗಿ ಹೀಗೆ ವಂಚಿತನಾದೆನು? ಯಜ್ಞಕ್ಕೋಸ್ಕರವಾಗಿ ನನ್ನ ನಿರ್ಮಲವೂ ಶುದ್ಧವೂ ಆದ ದೇಹವು ಬ್ರಹ್ಮನಿಗೆ ಕೊಡಲ್ಪಟ್ಟಿತು. ವಿಷ್ಣುವಿನ ವಚನ ಮಾತ್ರದಿಂದಲೇ ಏನುತಾನೇ ಆಗಲಾರದು? ನಾನು ಈಗ ನಿಶ್ಚಲನಾಗಿದೇನೆ ಯಾವ ದೇವತೆಗಳಿಂದ ವಿಶೇಷವಾಗಿ ಗದೆಯಿಂದ, ಹಾಗೆಯೇ ಹರಿಯಿಂದ, ನಾನು ಬಹಳವಾಗಿ ಪೀಡಿತನಾಗಿದ್ದೇನೆ-ಪೀಡಿಸಲ್ಪಟ್ಟಿದ್ದೇನಾದ್ದರಿಂದಲೇ ದೇವತೆಗಳೆಲ್ಲರೂ ಸದಾ ಪ್ರಸನ್ನರಾಗಿರಲಿ, ಗದಾಧರಾದಿಗಳೆಲ್ಲರೂ ಸಂತುಷ್ಟರಾಗಿರಲಿ" ಎಬ ಗಯಾಸುರನ ಮಾತನ್ನು ಕೇಳಿ ಅವರೆಲ್ಲರೂ ಆತನನ್ನು ಕುರಿತು "ನಾವೆಲ್ಲರೂ ಪ್ರಸನ್ನರಾಗಿದ್ದೇವೆ, ನಿನಗೆ ಬೇಕಾದ ವರವನ್ನು ಕೇಳು" ಎಂದರು.

ಗಯಾಸುರನು—"ಎಲ್ಲಿಯವರೆವಿಗೆ ಈ ಪೃಥಿವಿಯೂ, ಪರ್ವತಗಳೂ, ಸೂರ್ಯ, ಚಂದ್ರ, ನಕ್ಷತ್ರಗಳೂ ಇರುವುವೋ ಆ ಪರ್ಯಂತರ ಈ ಶಿಲೆಯಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರೂ, ಇತರ ಸಕಲ ದೇವತೆಗಳೂ ವಾಸಮಾಡಿಕೊಂಡು ಸ್ಥಿರ ಸನ್ನಿಧಾನದಿಂದ ಇರಲಿ. ಈ ಕ್ಷೇತ್ರವೂ ನನ್ನ ಹೆಸರಿನಿಂದಲೇ ಸ್ಥಿರವಾಗಿರಲಿ."

"ಪಂಚಕೋಶವು, ಗಯಾ ಕ್ಷೇತ್ರವು, ಗಯಾ ಶಿರಸ್ಸ ಒಂದು (ಕ್ರೋಶ) ಗಾವುದವು. ಇದರ ಮಧ್ಯದಲ್ಲಿ ಮೂರು ಲೋಕದಲ್ಲಿ ಯಾವ ತೀರ್ಥಗಳಿರುವುವೋ ಆ ಸಕಲ ತೀರ್ಥಗಳೂ ಗಂಗೆಯೇ ಮೊದಲಾದ ಸಮೀಚಿನ ಮಹಾ ನದಿಗಳೂ, ವಿಧಿವಿಧಗಳಾದ ಮಾನಸಾದಿ ಸಮಸ್ತ ದೇವ ಸರಸ್ಸುಗಳು ಆ ದೇವತೆಗಳೂ ಅವುಗಳ ಅಭಿಮಾನಿ (ತೀರ್ಥಾಭಿಮಾನಿ) ದೇವತೆಗಳು ಜನರಿಗೆ ಫಲಪ್ರದರಾಗಿ ಹಿತವನ್ನುಂಟುಮಾಡಲಿ. ಸ್ನಾನ ದಾನಾದಿಗಳು, ತರ್ಪಣ, ಶ್ರಾದ್ಧ, ಪಿಂಡದಾನಗಳಿಂದ ಫಲಾದಿಗಳನ್ನು ಒಬ್ಬ ವಿಷ್ಣುವೇ (ತ್ರಿಧಾ) ಮೂರು ರೂಪದಿಂದ ಬ್ರಹ್ಮಾಂತರ್ಗತ ಬ್ರಹ್ಮನಾಮಕ, ಶಿವಸ್ಥಿತ ಶಿವರೂಪಿಯಾಗಿ ಬುಧರಿಂದ ಸಂಕೀರ್ತನಾಗಿ ಮಹಾ ಫಲಗಳನ್ನು ಅನುಗ್ರಹಿಸಿಕೊಡಲಿ. ಅಲ್ಲಿಯವರೆಗೂ ಗಯಾಸಿರ ಕ್ಷೇತ್ರವು ಭೂಮಿಯಲ್ಲಿ ಸದಾ ಖ್ಯಾತವಾಗಿರಲಿ, ಇಲ್ಲಿಗೆ ಬಂದು ಸತ್ಕರ್ಮಾನುಷ್ಠಾನ ಮಾಡುವವನು ತನ್ನನ್ನೂ, ಸಹಸ್ರ ಕುಲ ಕುಲಗಳನ್ನೂ ಉದ್ಧಾರ ಮಾಡಲಿ, ಹೇ ದೇವತೆಗಳಿರಾ, ನೀವೂ ಸಹಾ ವ್ಯಕ್ತಾ ಅವ್ಯಕ್ತ ಸ್ವರೂಪದಿಂದ ಸರ್ವದಾ ಇಲ್ಲಿ ಸ್ಥಿರರಾಗಿ ವಾಸಮಾಡಿಕೊಂಡಿರಿ. ಗದಾಧರನು ಸ್ವಯಂ ತನ್ನ ಪೂಜೆಯನ್ನು ಮಾಡುವ ಜನರ ಪಾಪಗಳನ್ನು ನಾಶಮಾಡುವನು. ಇಲ್ಲಿ ಪಾರ್ವಣ (ಪಿಂಡ) ಶ್ರಾದ್ಧವನ್ನು ಮಾಡುವವರೆಲ್ಲರೂ ಬ್ರಹ್ಮಲೋಕಕ್ಕೆ ಹೋಗಲಿ. ಇಲ್ಲಿ ಸೇವೆ ಮಾಡುವವರ ಬ್ರಹ್ಮಹತ್ಯಾದಿ ಪಂಚ ಮಹಾಪಾತಕಗಳೂ, ಸರ್ವ ಪಾಪಗಳೂ, ವಿನಾಶಹೊಂದಲಿ, ನೈಮಿಷ, ಪುಷ್ಕರ, ಗಂಗಾ, ಪ್ರಯಾಗಗಳು ಮೋಕ್ಷವನ್ನು ಕೊಡುವುವು. ಇವು ಮತ್ತು ಇತರ ಯಾವ ತೀರ್ಥಗಳು ಭೂಲೋಕದಲ್ಲಿ ಅಂತರಿಕ್ಷಗಳಲ್ಲಿವೆಯೋ, ಅವೆಲ್ಲವೂ ಇಲ್ಲಿಗೆ ಬಂದು ತಮ್ಮ ಸನ್ನಿಧಾನದಿಂದ ಮಾನವರಿಗೆ ಸದಾ ಪುಣ್ಯಪ್ರದಾನಗಳಿಂದ ಹಿತವನ್ನುಂಟುಮಾಡಲಿ. ಬಹಳವಾಗಿ ಹೇಳುವುದರಿಂದೇನು? ನಿಮ್ಮಗಳಲ್ಲಿ ಒಬ್ಬ ದೇವತೆಯಾದರೂ, ಎಲ್ಲೈ

ಸುರೇಶಾಸಾದಿಗಳಿರಾ, ಇಲ್ಲಿ ನಿಲ್ಲದೆ ಇದ್ದ ಪಕ್ಷದಲ್ಲಿ ನಾನೂ ಇರಲಾಗುವುದಿಲ್ಲ. ನಮ್ಮ ನಿಮ್ಮ ಸಮಯ "ಒಪ್ಪಂದ" ಕರಾರು, ಪರಸ್ಪರರಹಿತವನ್ನು ಪ್ರತಿ ಪಾಲನೆಯನ್ನು ತಪ್ಪದೆ ನಡೆಯಿಸೋಣವಾಗಲಿ" ಎಂಬ ಗಯಾಸುರನ ವಚನವನ್ನು ಕೇಳಿ ವಿಷ್ಣುವೇ ಮೊದಲಾದ ದೇವತೆಗಳು "ನಿನ್ನಿಂದ ಪ್ರಾರ್ಥಿಸಲ್ಪಟ್ಟ ಸರ್ವವೂ ಹಾಗೆಯೇ ಆಗುವುವು, ಸಂಶಯಪಡಬೇಕಾದುದಿಲ್ಲವು. ಇಲ್ಲಿ ಶ್ರಾದ್ಧಾದಿಗಳಿಂದ ಪಿಂಡಪ್ರದಾನ ಮಾಡಿದವನು ಪಿತೃಗಳ ನೂರು ಕುಲಗಳನ್ನೂ, ತನ್ನನ್ನೂ ಸಹ ಉದ್ಧಾರ ಮಾಡಿ, ರೋಗಾದ್ಯುಪದ್ರವರಹಿತವಾದ ಬ್ರಹ್ಮಲೋಕಕ್ಕೆ ಹೋಗಿ ಸೇರುವರು. ಎಂದು ನಮ್ಮ ಪಾದಗಳನ್ನು ಅರ್ಚಿಸಿ ಪರಮಗತಿಯನ್ನು ಹೊಂದುವರು" ಎಂದು ವರಗಳನ್ನು ಕೊಡಲು ಗಯಾಸುರ ದೈತ್ಯನು ಪರಮ ಹರ್ಷಿತನಾಗಿ ನಿಶ್ಚಲನಾದನು.

ಹೀಗೆ ದೇಪತೆಗಳು ಇರುತ್ತಿರಲು ಅಜ (ಬ್ರಹ್ಮ)ನು ಬ್ರಾಹ್ಮಣರಿಗೆ (55) ಐವತ್ತೈದು ಗ್ರಾಮಗಳನ್ನೂ, ಪಂಚ ಕ್ರೋಶವನ್ನೂ, ಹಾಗೆಯೇ ಗಯಾಕ್ಷೇತ್ರವನ್ನೂ ದಿವ್ಯವಾದ ಮನೆಗಳನ್ನೂ ಕಟ್ಟಿಸಿ ಅವುಗಳಲ್ಲಿ ವಾಸಮಾಡತಕ್ಕ ಸರ್ವ ಉಪಸ್ಕರ (ಸಾಮಗ್ರಿ)ಗಳನ್ನೂ ತುಂಬಿ, ಕಾಮಧೇನು ಕಲ್ಪವೃಕ್ಷ, ಪಾರಿಜಾತ ಮೊದಲಾದ ಇಷ್ಟಾರ್ಥಪ್ರದ ದೇವತರುಗಳನ್ನೂ, ಘೃತಕುಲ್ಯ (ಹೊಳೆ) ಮಧುಶ್ರವಿಸುವ (ಜೇನು ಹೊಳೆ) ಕುಲ್ಯಗಳು, ಮೊಸರು (ದಧಿ) ಆಜ್ಯ (ತುಪ್ಪದ) ಸರೋವರಗಳನ್ನೂ, ಬಂಗಾರದ ಭಾವಿಗಳು, ಅನೇಕ ಅನ್ನ ಮೊದಲಾದ ಪರ್ವತಗಳನ್ನೂ, ಭಕ್ಷ್ಯ, ಭೋಜ್ಯ, ಸರ್ವಫಲ ಹಣ್ಣು ಹಂಪಲು ಮೊದಲಾದವುಗಳನ್ನು ಕೊಟ್ಟನು. "ಎಲೈ ವಿಪ್ರೇಂದರಿರಾ, ಬೇರೆ ಯಾರೊಬ್ಬರನ್ನೂ ಯಾವರೀತಿಯಲ್ಲೂ ನೀವು ಯಾಚಿಸಬೇಡಿರಿ" ಎಂದು ಬ್ರಹ್ಮನು ಹೇಳಿದನು. ಹೀಗೆ ಎಲ್ಲವನ್ನೂ ದಾನಮಾಡಿ ಆದಿ ಗದಾಧರನಿಗೆ ನಮಸ್ಕರಿಸಿ ತನ್ನ ಬ್ರಹ್ಮಲೋಕಕ್ಕೆ ಹೊರಟುಹೋದನು.

ಬ್ರಾಹ್ಮಣರು ಧರ್ಮಾರಣ್ಯದಲ್ಲಿ ಯಜ್ಞವನ್ನು ಮಾಡಿಸಿ ಧರ್ಮನನ್ನು ಯಾಚಿಸಿ ಲೋಭದಿಂದ ಅಂಥ ಧರ್ಮ ಯಜ್ಞನಲ್ಲಿ ಧನಾದಿಗಳನ್ನು ಪ್ರತಿಗ್ರಹಿಸಿದರು, ದಾನವನ್ನು ತೆಗೆದುಕೊಂಡರು, ತಾಂಬೂಲವನ್ನೂ ಪಂಚರತ್ನಗಳನ್ನೂ ಬಲಾತ್ಕಾರದಿಂದ ರಾಜನು ಕೊಟ್ಟದ್ದನ್ನು ಸ್ವೀಕರಿಸಿದರು. ಧರ್ಮ

ಯಾಗದ ಧೂಮ (ಹೊಗೆಯು)ವು ಸ್ವರ್ಗಲೋಕಕ್ಕೆ ಹೋಗುತ್ತಿರಲು ಇದನ್ನು ಕಂಡು ಬ್ರಹ್ಮನು ಬಂದು, ಆ ಬ್ರಾಹ್ಮಣರುಗಳಿಗೆ ಶಾಪವನ್ನು ಕೊಟ್ಟನು. "ನಾನು ಸಕಲವನ್ನೂ ಕೊಟ್ಟು ಸಮೃದ್ಧವಾಗಿದ್ದರೂ ನೀವು ಲೋಭವನ್ನು ಮಾಡಿದುದರಿಂದಲೂ, ಅದರಿಂದ ತೃಷ್ಣಾದಿಂ (ಅಧಿಕ ಆಸೆಯಿಂ)ದ ಕೂಡಿರು ವುದರಿಂದಲೂ, ನೀವು ಸದಾ ಹೀಗೆ ದುರಾಶೆಯುಳ್ಳವರಾಗಿ. ತೃಪ್ತಿಯಿಲ್ಲದವರಾ ಗಿಯೇ ಇರಿ, ಎಲೈ ದ್ವಿಜರೇ, ನಿಮಗೆ ಮೇಘದ ಮಳೆಯೇ ಗತಿಯಾಗಲಿ, ನದಿಯು ಮಳೆ ಬಂದರೆ ನೀರು ಮೇಘಾಶ್ರಯವುಳ್ಳದ್ದಾಗಲಿ, ಪರ್ವತಗಳು ಪಾಷಾಣ, ಕಲ್ಲು, ಗುಂಡು, ಬಂಡೆಗಳಿಂದ ಕೂಡಲಿ, ಮಳೆ ಬಂದರೆ ನದೀ ಪೂರ, ಪ್ರವಾಹವೂ, ಮಣ್ಣು ಕಲ್ಲುಗಳ ಪ್ರಚುರವುಳ್ಳ ಗೃಹಗಳು, ಇರಲಿ, ಕಾಮಧೇನು ಕಲ್ಪವೃಕ್ಷಗಳು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿಯೇ ಇರಲಿ," ಹೀಗೆಂದು ಶಪಿಸಲ್ಪಟ್ಟ ಬ್ರಾಹ್ಮಣರು, ಬ್ರಹ್ಮನನ್ನು ಕುರಿತು ಪ್ರಾರ್ಥಿಸುತ್ತಾ "ನಿನ್ನಿಂದ ಕೊಡಲ್ಪಟ್ಟವುಗಳೆಲ್ಲವೂ ಶಾಪದಿಂದ ನಷ್ಟವಾಗಿ ಹೊರಟು ಹೋ ದವು. ಪೂಜ್ಯನೇ, ಹೇ ಭಗರ್ವ, ಜೀವನಾರ್ಥವಾಗಿ ನಮಗೆ ಪ್ರಸಾದವನ್ನು ಕೊಡಲು ಅರ್ಹನಿರುವಿ" ಎಂದು ಕೇಳಲು ಅದನ್ನು ಕೇಳಿದ ಬ್ರಹ್ಮನು ದಯೆ ಯಿಂದ ಕೂಡಿ ಬ್ರಾಹ್ಮಣರನ್ನು ಕುರಿತು "ನೀವು ಆಚಂದ್ರಾರ್ಕವಾಗಿ ತೀರ್ಥೋಪಜೀವಿಗಳಾಗಿ ಕ್ಷೇತ್ರವಾಸಿಗಳಾಗಿರಿ. ಪುಣ್ಯಶಾಲಿಗಳಾದ ಜನರು ಯಾರು ಈ ಗಯಾದಲ್ಲಿ ಶ್ರಾದ್ಧ ಮಾಡಿ ಬ್ರಹ್ಮಲೋಕಕ್ಕೆ ಹೋಗುತ್ತಾರೆಯೋ ಅವರು ನಿಮ್ಮನ್ನು ಪೂಜಿಸುತ್ತಾರೆ. ಅವರಿಂದ ನಾನೂ ಸಹ ಸದಾ ಪೂಜಿತ ನಾಗುವೆನು" ಎಂದನು.

ಗಯಾಸುರನ ಜಠರ (ಹೊಟ್ಟೆಯು)ವು ವಿರಜಾದ್ರಿಯಿಂದ ಆಕ್ರಾಂತ ವಾಗಿದೆ. ನಾಭಿಕೂಪ ಸಮೀಪದಲ್ಲಿ ವಿರಜಾದೇವಿಯು ಸ್ಥಿತಳಾಗಿರುವಳು. ಅಲ್ಲಿ ಪಿಂಡಾದಿಗಳನ್ನು ಕೊಟ್ಟು ಶ್ರಾದ್ಧ ಮಾಡುವವನು ಇಪ್ಪತ್ತೊಂದು (ತ್ರಿಃಸಪ್ತ) ಕುಲಗಳನ್ನು ಉದ್ಧರಿಸುವನು.

ಮಹೇಂದ್ರಗಿರಿಯಿಂದ ಅದೈತ್ಯನ ಎರಡು ಪಾದಗಳೂ ನಿಶ್ಚಲವಾಗಿ ರುವುವು. ಅಲ್ಲಿಯೂ ಪಿಂಡಪ್ರದಾನ ಮಾಡಿದ ಮಾನವನು ಏಳು ಕುಲ ಗಳನ್ನು ಉದ್ಧರಿಸುವನು.

॥ ೩ ॥

ನಾರದನು—"ಗಯಾಸುರನನ್ನು ಆಕ್ರಮಿಸಿದ (ಆತನ ಮೇಲೆ ಹೇರಿದ) ಶಿಲೆಯು ಹೇಗೆ ಉತ್ಪನ್ನವಾಯಿತು? ಅದರ ರೂಪವೆಂಥಾದ್ದು? ಅದರ ಮಹಾತ್ಮ್ಯೆಯು ಏನು? ಅದರ ಹೆಸರು (ನಾಮವು) ಏನು? ಅದನ್ನು ಹೇಳಿರಿ" ಎಂದನು.

ಸನತ್ಕುಮಾರರು:—ಅದರ ವಿಚಾರವು ಬಹು ಪುಣ್ಯಕರವಾದುದು. ಸರ್ವ ವಿಜ್ಞಾನ ಪಾರಗನಾದ ಮಹಾತೇಜಸ್ವಿಯಾದ ಧರ್ಮನೆಂಬುವನಿದ್ದನು. ಭರ್ತೃವ್ರತ ಪರಾಯಣಳಾದ ವಿಶ್ವರೂಪಾ ಎಂಬುವಳು ಆತನ ಪತ್ನಿಯು. ಆಕೆಯಲ್ಲಿ ಧರ್ಮನ ದೆಶೆಯಿಂದ ಧರ್ಮವ್ರತಾ ಎಂಬ ಸತಿಯು ಮಗಳಾಗಿ ಜನಿಸಿದಳು. ಆ ಕನ್ಯೆಯು ಸರ್ವಲಕ್ಷಣ ಸಂಪನ್ನಳು, ಲಕ್ಷ್ಮೀದೇವಿಯಂತೆ ಗುಣಾಧಿಕವುಳ್ಳವಳು. ಆಕೆಯಲ್ಲಿರುವ ಯಾವ ಸದ್ಗುಣಗಳಿವೆಯೋ ಅವು ಅನ್ಯತ್ರಬೇರೆಯವರಲ್ಲಿ ಜಗತ್ರಯದಲ್ಲಿ ಎಲ್ಲೂ ಇಲ್ಲವು. ಹುಡುಕಿದರೂ ಸಹ ಸಿಗಲಾರದು. ಧರ್ಮನು ಧರ್ಮವ್ರತೆಗೆ ಅನುರೂಪನಾದ ವರನನ್ನು ಮೂರು ಲೋಕದಲ್ಲೂ ಹುಡುಕಿದರೂ, ಆಕೆಗೆ ತಕ್ಕ ವರನನ್ನು ಕಾಣಲಾಗಲಿಲ್ಲ. ಕೊನೆಗೆ ಅನುಗುಣ ವರನು ಲಭಿಸಲು, ವರಸಿದ್ಧಿಗಾಗಿ, ಮಗಳನ್ನು ಕುರಿತು "ಅನುರೂಪ ವರನಿಗೋಸ್ಕರವಾಗಿ ತಪಸ್ಸನ್ನು ಮಾಡು" ಎಂದು ತಂದೆ ಹೇಳಲು "ಹಾಗೆಯೇ ಆಗಲಿ" ಎಂದು ಹೇಳಿ ಆ ಕನ್ಯೆಯು ವನಕ್ಕೆ ಹೋಗಿ ಇತರರು ಯಾರಿಗೂ ಆಚರಿಸಲು ಅಶಕ್ಯವಾದ ಅತ್ಯಂತ ದುಸ್ತರವಾದ ತಪವ ನ್ನಾಚರಿಸಿದಳು. ಶ್ವೇತವರಾಹ ಕಲ್ಪದಲ್ಲಿ ಹತ್ತು ಸಹಸ್ರ ವರ್ಷಕಾಲ ಕೇವಲ ವಾಯು ಭಕ್ಷಣೆ ಮಾಡುತ್ತಾ, ಗಾಳಿ ಕುಡಿದು ನೀರು ಆಹಾರವಿಲ್ಲದೆ ಉಗ್ರ ತಪಸ್ಸನ್ನು ಮಾಡಿದಳು.

ಬ್ರಹ್ಮದೇವರ ಮಾನಸ ಪುತ್ರರಾದ ಮರೀಚಿ ಋಷಿಗಳೆಂದು ಪ್ರಸಿದ್ಧ ರಾದವರು ಪ್ರವೃತ್ತಿ ಲಕ್ಷಣ ಧರ್ಮವನ್ನು ಆಚರಣೆ ಮಾಡಲು, ಬ್ರಹ್ಮನಿಂದ ಪ್ರೇರಿತರಾಗಿ ಭೂಮಂಡಲವನ್ನು ಸರ್ವತ್ರ ಅಲೆದು ಸಂಚರಿಸಿ, ಕೊನೆಗೆ ರೂಪ ಯೌವ್ವನ ಸಂಪನ್ನಳೂ, ತಪಸ್ಸಿನಲ್ಲಿ ಸ್ಥಿತಳಾದವಳೂ, ಆದ ಕನ್ಯಾರತ್ನ ವನ್ನು ನೋಡಿ ಆಕೆಯನ್ನು ಕುರಿತು ಮರೀಚಿಯು "ನೀನು ಯಾರು?

ಯಾರ ಮಗಳು ? ಯಾರ ಸಂಬಂಧದವಳು? ಹೇಳು. ಎಲೈ ಸುವ್ರತೆಯೇ, ನೀನು ನಿನ್ನ ಈ ರೂಪದಿಂದ ನನ್ನನ್ನು ವಿಮೋಹಿತನನ್ನಾಗಿ ಮಾಡಿರುವಿ. ನಾನು ಬ್ರಹ್ಮದೇವರ ಪುತ್ರನಾದ, ವೇದಪಾರಗನಾದ "ಮರೀಚಿ ಯೆಂದು ವಿಖ್ಯಾತನಾಗಿರುವೆನು" ಎಂದನು.

ಆ ಮರೀಚಿಯು ವಚನವನ್ನು ಕೇಳಿ ಕನ್ಯೆಯು ಆ ಮುನಿಯನ್ನು ಕುರಿತು ನಾನು "ಧರ್ಮವ್ರತಾ" ಎಂಬ ಹೆಸರಿನಿಂದ ಧರ್ಮಪುತ್ರಿಯಾಗಿ ತಪಸ್ಸನ್ನಾಚರಿಸುತ್ತಿರುವೆನು. ಹೇ ವಿಪ್ರೇಂದ್ರರೇ, ಪ್ರತಿವತಾರ್ಥವಾಗಿ, ಭರ್ತೃವಿನ ಲಾಭಾರ್ಥವಾಗಿ, ತಪಸ್ಸನ್ನು ಮಾಡುತ್ತಿರುವೆನು. ನನ್ನ ಇಷ್ಟಾರ್ಥ ಲಭಿಸುವವರೆಗೂ, ಮನೋರಥ ಪ್ರಾಪ್ತಿಯಾಗುವತನಕ ಈ ತಪಸ್ಸಿನಲ್ಲಿ ನನ್ನ ಪ್ರವೃತ್ತಿಯು" ಎಂದು ಹೇಳಲು, ಮರೀಚಿ ಮುನಿಯು ಆ ಧರ್ಮವ್ರತೆಯನ್ನು ಪ್ರೀತಿಪೂರ್ವಕವಾಗಿ, ಎಲೈ ಶುಭ ವ್ರತಳೇ, ಪತಿವ್ರತಾದರ್ಶನದಿಂದ ನನಗೆ ಇಚ್ಛೆಯು ಲಭಿಸುವುದು. ನಾನು ಅಹೋರಾತ್ರಿಯೂ ಪತಿವ್ರತೆಯನ್ನು ಪಡೆಯಬೇಕೆಂಬ ಇಚ್ಛೆಯಿಂದ ಇಡೀ ಪೃಥ್ವಿಯನ್ನೇ ಸಂಚರಿಸುತ್ತಿದೇನೆ. ನೀನೇ ಪತಿವ್ರತೆಯಾಗಿ ಉತ್ಪನ್ನಳಾಗಿದ್ದಲ್ಲಿ, ಆಕೆಯನ್ನೇ ಭಜಿಸಿ ಇಚ್ಛಿಸುತ್ತಿರುವ ನನ್ನನ್ನು ಉತ್ತಮ ವರನನ್ನಾಗಿ ಭಜಿಸಿ ಸೇವಿಸು, ನಿನಗೆ ಸಮಾನ ಕನ್ಯೆಯು ಲೋಕದಲ್ಲಿ ನನಗೆ ಸಿಕ್ಕುವುದಿಲ್ಲವು. ನನಗೆ ಸಮಾನ ವರನೂ ನಿನಗೆ ದೊರೆಯುವುದಿಲ್ಲವು. ಆದುದರಿಂದ ಎಲೈ ಧರ್ಮವ್ರತಳೇ, ಧರ್ಮಪುತ್ರಿಯೇ, ಈಗಲೇ ನೀನು ನನ್ನನ್ನು ಭಜಿಸು." ಎಂದನು. ಧರ್ಮವ್ರತೆಯು ಮುನಿಯನ್ನು ಕುರಿತು, "ಸುವ್ರತರೇ, ನಮ್ಮ ತಂದೆ ಧರ್ಮನನ್ನು ಯಾಚಿಸಿ ಕೇಳಿರಿ" ಎಂದಳು.

ಅದನ್ನು ಅರಿತ ಮುನಿಯು ಧರ್ಮನ ಸಮೀಪಕ್ಕೆ ಹೋಗಲು, ಧರ್ಮನು ಆ ತೇಜಃ ಪುಂಜನಾಗಿ ಬಂದ ವರನನ್ನು ನೋಡಿ, ನಮಸ್ಕರಿಸಿ, ಆಸನ, ಅರ್ಘ್ಯ ಪಾದ್ಯಾದಿಗಳಿಂದ ಆತನನ್ನು ಪೂಜಿಸಿ "ನೀವು ಏತಕ್ಕಾಗಿ ಬಂದಿರುವಿರಿ ? ನನ್ನಿಂದೇನಾಗಬೇಕು ?" ಎಂದು ಕೇಳಲು, ಮರೀಚಿ ಮುನಿಯು ಆ ಧರ್ಮನನ್ನು ಕುರಿತು "ಕನ್ಯಾರ್ಥಿಯಾಗಿ ಪೃಥ್ವಿಯಲ್ಲಿ ಪರ್ಯಟನೆ ಮಾಡಿಕೊಂಡು ಬರುವಾಗ ನಿಮ್ಮ ಪುತ್ರಿಯಾದ ವರ ಕನ್ಯೆಯನ್ನು

ಕಂಡೆನು. ಆ ಕನ್ಯೆಯನ್ನು ನನಗೆ ಕೊಡಿ. ನಿಮಗೆ ಶ್ರೇಯಸ್ಸಾಗುವುದು" ಎಂದನು.

ಧರ್ಮನು ಆತನನ್ನು ಅರ್ಘ್ಯಾದಿಗಳಿಂದ ಭಕ್ತಿಯಿಂದ ಅರ್ಚಿಸಿ "ಹಾಗೆಯೇ ಆಗಬಹುದು" ಎಂದು ಒಪ್ಪಿಗೆಯನ್ನಿತ್ತು ಧರ್ಮವ್ರತೆಯನ್ನು ಕರೆತಂದು ಆಕೆಯನ್ನು ಮರೀಚಿ ಋಷಿಗೆ ಕೊಟ್ಟನು. ಆತನಿಗೆ ವರವನ್ನೂ ಕೊಟ್ಟನು. ಆತನ ಆ ವಾಕ್ಯವೂ ಹಾಗೆಯೇ ಅನುಷ್ಠಾನ ಮಾಡಲ್ಪಟ್ಟಿತು. ಅಗ್ನಿಹೋತ್ರದಿಂದ ಸಹಿತನಾಗಿ ಆಕೆಯನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ, ಆ ಮುನಿಯು ಆಕೆಯೊಡನೆ ಶ್ರೀದೇವಿಯೊಡನೆ ವಿಷ್ಣುವೂ, ಪಾರ್ವತಿಯೊಡನೆ ಶಂಭುವೂ, ಸಾವಿತ್ರಿಯ ಜೊತೆಯಲ್ಲಿ ಬ್ರಹ್ಮನೂ ಕ್ರೀಡಿಸುವಂತೆ ಬಹುಕಾಲ ರಮಣ, ಮಾಡಿ ಕ್ರೀಡಿಸಿ ಆಕೆಯಲ್ಲಿ ವಿಷ್ಣುವಿನಿಂದ ರಕ್ಷಿತರಾದ, ಭಗವದ್ಭಕ್ತರಾದ, ಅನುರೂಪರಾದ ಒಂದು ನೂರು ಜನ ಪುತ್ರರನ್ನು ಪಡೆದನು.

ಒಂದು ಕಾಲದಲ್ಲಿ ಮರೀಚಿಯು ಫಲಪುಷ್ಪಾರ್ಥವಾಗಿ ವನಕ್ಕೆ ಹೋಗಿ ಬಂದು ಶ್ರಾಂತನಾಗಿ ಆ ತನ್ನ ಪತಿವ್ರತೆ ಪತ್ನಿಯನ್ನು ಕರೆದು "ಊಟವನ್ನು ಮುಗಿಸಿ ಈ ನಮ್ಮ ಶಯನದ (ಹಾಸಿಗೆಯ)ಲ್ಲಿ ಕುಳಿತು ನನ್ನ ಪಾದ ಸಂಹನನವನ್ನು ಮಾಡು; ಕಾಲುಗಳನ್ನು ಒತ್ತು" ಎಂದನು.

ಧರ್ಮವ್ರತೆಯು "ಹಾಗೆಯೇ ಆಗಲಿ" ಎಂದು ಹೇಳಿ ಮಲಗಿರುವ ಆ ಮುನಿಯ ಪಾದಗಳನ್ನು ಒತ್ತುತ್ತಾ ಘೃತದಿಂದ ಅಭ್ಯಂಜನ (ತುಪ್ಪ ಹಚ್ಚಿ ನೀವಿ) ಮಾಡುತ್ತಾ ಇರಲು ಮುನಿಯು ನಿದ್ರೆ ಹೋದನು. ಆಗ ಬ್ರಹ್ಮನು ಆ ಸ್ಥಳಕ್ಕೆ ಬಂದನು. ಬ್ರಹ್ಮನು ಬಂದದ್ದನ್ನು ಕಂಡು ಆತನನ್ನ ಉಪಚರಿಸಿ ಅರ್ಚಿಸಲು ಮನಸ್ಸಿನಲ್ಲಿ ಇಚ್ಛಿಸಿದಳು. "ಈಗ ಪತಿಯ ಪಾದಸಂಹನನವನ್ನೇ ಮಾಡುತ್ತಿರಲೇ? ಅಥವಾ ಬ್ರಹ್ಮದೇವನನ್ನು ಪೂಜಿಸಲೆ?" ಎಂದು ಆಕುಲಳಾಗಿ, ಆತನು ತನ್ನ ಗುರುವಿಗೂ (ಪತಿಗೂ) ಗುರುವಾದವನು, ಎಂದು ತಿಳಿದು ಬ್ರಹ್ಮನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಸತ್ಕಾರದಿಂದ ಆತನನ್ನು ಪೂಜಿಸಿದಳು. ಸಿದ್ಧಪಡಿಸಿದ್ದ ಸಂಸ್ಕೃತವಾಗಿದ್ದ ಹಾಸಿಗೆಯಲ್ಲಿ ಮಲಗಿ ಅಜನು ವಿಶ್ರಮಿಸದನು. ಇದಾದ ನಂತರ ಭರ್ತನು (ಮರೀಚ ಮುನಿಯು)

ಕನ್ನ ಹಾಸಿಗೆಯಿಂದ ಎದ್ದನು. ಸಮೀಪದಲ್ಲಿ ಧರ್ಮವ್ರತೆಯು ಇಲ್ಲದುದನ್ನು ಕಂಡು, ಆ ವಿಪ್ರನು ಮಹಾ ಕೋಪಗೊಂಡು ಆಕೆಯನ್ನು ಕುರಿತು "ಪಾದಸಂ ಕನನವನ್ನು ಬಿಟ್ಟು, ನನ್ನ ಆಜ್ಞೆಯನ್ನು ತ್ಯಜಿಸಿ, ಅನ್ಯತ್ರ ಹೋದುದರಿಂದ ಆ ಪಾಪದ ಬೆಕಿಯಿಂದ ಸುಟ್ಟು ದಗ್ಧಳಾಗಿ, ಶಿಲೆಯಾಗು." ಎಂದು ಹೇಳಿ ಆಕೆಗೆ ಶಾಪ ಕೊಟ್ಟನು.

ಭರ್ತನಿಂದ ಶಪ್ತಳಾದ ಧರ್ಮವ್ರತಳು ಮರೀಚನನ್ನು ಕುರಿತು ಕೋಪ ದಿಂದ "ನೀವು ಮಲಗಿದಮೇಲೆ ನಿಮ್ಮ ತಂದೆಯಾದ ಜನಕರೂ ಗುರುಗಳಾದ ಆ ಬ್ರಹ್ಮದೇವರು ಬಂದರು. ನೀವು ಎದ್ದು ನಿಮ್ಮ ಗುರುಗಳ ಪೂಜೆಯನ್ನು ನೀವು ಸದಾ ಮಾಡಬೇಕಾನುದನ್ನು ಧರ್ಮಚಾರಿಣ್ಯೆಯಾದ ನನ್ನಿದ ಆಚರಿ ಸಲ್ಪಟ್ಟಿತು. ಎಲೈ ಮುನಿಯೇ, ನಿಮ್ಮ ಕಾರ್ಯವನ್ನು ನಾನು ಮಾಡಿರುತ್ತೇನೆ. ದೋಷರಹಿತಳಾದ ನಾನು ನಿನ್ನಿಂದ ಶಪ್ತಳಾದುದರಿಂದ, ನಾನು ನಿನಗೆ ಶಾಪ ವನ್ನು ಕೊಡುತ್ತೇನೆ. "ಪತಿಯೇ, ಭರ್ತನೇ, ನೀನು ಮಹಾದೇವರ ದೆಸೆ ಯಿಂದ ಶಾಪವನ್ನು ಪಡೆಯುವಿ. ಇದಕ್ಕೆ ಸಂಶಯವಿಲ್ಲವು" ಎಂದಳು. ವ್ಯಾಕುಲನಾದ ಪತಿಯನ್ನು ಕಂಡು ಸ್ವಯಂ ವ್ಯಾಕುಲಳಾದ ಆಕೆಯು ಮಲಗಿರುವ ಆ ಪ್ರಜಾಪತಿ ಬ್ರಹ್ಮನಿಗೆ ನಮಸ್ಕರಿಸಿ ಸೌದೆಗಳಿಂದ ಅಗ್ನಿಯನ್ನು ಪ್ರಜ್ವಲಿಸಿ ಜ್ವಾಲಾಮಾಲೆ ಉರಿಮಾಡಿ ಗಾರ್ಹ್ಯಪತ್ಯಾಗ್ನಿಯಲ್ಲಿ ಪರಮ ದುಷ್ಕರವಾದ ತಪಸ್ಸನ್ನು ಮಾಡಿದಳು. ಹಾಗೆ ಆಕೆಯಿಂದ ಶಪ್ತನಾದ ಮರೀಚಿಯೂ ಅತಿ ದಾರುಣವಾದ ತಪಸ್ಸನ್ನು ಮಾಡಿದನು. ಆ ಪತಿ ವ್ರತೆಯ ತಪಸ್ಸಿನಿಂದಲೂ, ಮರೀಚಿಯ ತಪಸ್ಸಿನಿಂದಲೂ, ಇಂದ್ರಾದಿ, ದೇವತೆಗಳೆಲ್ಲರೂ ಭಯಪಟ್ಟು, ಸಂತಪ್ತರಾಗಿ ಹರಿಯನ್ನು ಶರಣು ಹೊಂದಿ ಕ್ಷೀರಾಂಬುಧಿಯಲ್ಲಿ ಸುಪ್ತನಾಗಿರುವ ಆತನನ್ನು ಕುರಿತು "ಹೇ ಹರೇ, ಪತಿ ವ್ರತೆಯ ತಪಸ್ಸಿನಿಂದ ಸಂತಪ್ತರಾಗಿದ್ದೇವೆ. ಆಕೆಯ ತಪಸ್ಸಿನಿಂದ ಸಂತಪ್ತ ವಾದ ತ್ರಿಲೋಕವನ್ನೂ ಹೇ ಕೇಶವನೇ, ರಕ್ಷಿಸು" ಎಂದು ಪ್ರಾರ್ಥಿಸುತ್ತಿರುವ ಇಂದ್ರಾದಿಗಳ ವಚನವನ್ನು ಕೇಳಿ ವಿಷ್ಣುವು ಧರ್ಮವ್ರತೆಯ ಸಮೀಪಕ್ಕೆ ಬಂದನು. ಇದೇ ಕಾಲದಲ್ಲೇ ಭಗವಾನ್ ಅಜ (ಅಜ)ನೂ ಎಚ್ಚೆತ್ತನು. ಅಗ್ನಿ ಮಧ್ಯದಲ್ಲಿ ಸ್ಥಿತಳಾಗಿದ್ದ ಆ ಧರ್ಮವತೆಯನ್ನು ಕುರಿತು, ಕೇಶವನೊಡನೆ "ಎಲೈ ಪತಿವ್ರತೆಯೇ ಅಗ್ನಿ ಮಧ್ಯೆ ತಪಸ್ಸು ಮಾಡುವುದು ಯಾರಿಂದ ಶಕ್ಯ?

ನೀನು ಮಾಡಿದ ಈ ಪರಮ ತಪಸ್ಸು ಸರ್ವ ಲೋಕಗಳಿಗೂ ಭಯವನ್ನುಂಟು ಮಾಡಿರುವುದು. ಹೇ ಧರ್ಮಜ್ಞಳೇ ನಮ್ಮಿಂದ ನಿನಗೆ ಏನು ಬೇಕೋ ನಿನಗೆ ಇಷ್ಟವಾದುದಾವುದೋ ಅಂಥ ವರವನ್ನು ವರಿಸಿ, ಕೇಳು" ಎಂಬ ವಿಷ್ಣ್ವಾದಿಗಳ ವಚನವನ್ನು ಕೇಳಿ ಧರ್ಮವ್ರತೆಯು ಅವರನ್ನು ಕುರಿತು "ಭರ್ತೃನಿನ ಶಾಪವನ್ನು ಸಂಪೂರ್ಣವಾಗಿ ಕಳೆದುಕೊಳ್ಳಲು ನಾನು ಅಶಕ್ತಳು. ನನಗೆ ಮರೀಚಿಯಿಂದ ಶಾಪವು ಕೊಡಲ್ಪಟ್ಟಿದೆ. ಅದು ಅಪಗತವಾಗಿ ಹೋಗಲಿ." ಎಂದಳು.

ಈ ರೀತಿಯಾದ ಆ ಧರ್ಮವ್ರತೆಯ ವಾಕ್ಯವನ್ನು ಕೇಳಿ ಆಕೆಯನ್ನು ಕುರಿತು ಪುನಃ ಆ ದೇವತೆಗಳೆಲ್ಲರೂ "ಹೇ ಧರ್ಮವ್ರತೇ, ಎಲೈ ಧರ್ಮಪ್ರಿಯೇ, ಈ ಶಾಪವು ಪರಮರ್ಷಿಯಿಂದ ಕೊಡಲ್ಪಟ್ಟಿದೆ. ಆ ದು ದ ರಿಂದ ಅದನ್ನು ನಿರಾಕರಿಸಿ, ಪರಿಹರಿಸಲು ದೇವ ದ್ವಿಜರಾರಿಂದಲೂ ಶಕ್ಯವಿಲ್ಲವು. ಆದುದರಿಂದ ಬೇರೆ ವರವನ್ನು ಕೇಳು. ಹೇ ಶುಭವ್ರತಳೇ, ತ್ರಿಲೋಕದಲ್ಲೂ ವೇದೋಕ್ತರೀತಿಯಲ್ಲಿ ಧರ್ಮದ ಸಂಸ್ಥಿತಿಯಾಗುವಂತೆ ಹೇಳು.

ಈ ರೀತಿಯಾದ ದೇವತೆಗಳ ವಚನವನ್ನು ಕೇಳಿ ಧರ್ಮವ್ರತೆಯು ಹೇ ದ್ವಿಜಾಮರರೇ, ಭರ್ತೃಶಾಪದ ದೆಶೆಯಿಂದ ವಿಮೋಚನೆ ಮಾಡಲು ನೀವು ಸಮರ್ಥರಲ್ಲವೆ!! ನಿಮಗೆ ಶಕ್ಯವಿಲ್ಲವೆ? ಹಾಗಾದರೆ ನನಗೆ ಅನುತ್ತಮವೂ, ಅಸದೃಶವೂ ಆದ ಈ ರೀತಿ ವರವನ್ನು ಕೊಡಿರಿ.—

ಬ್ರಹಾಂಡದಲ್ಲೇ ಉತ್ಕೃಷ್ಟವೂ ಪರಮ ಪಾವನವೂ ಆದ ಶಿಲೆಯಾಗಿ ನಾನು ಆಗುವೆನು. ನದೀ, ನದ, ಸರೋವರಗಳು, ತೀರ್ಥಗಳು, ದೇವಾದಿಗಳೆಲ್ಲರ ದೆಶೆಯಿಂದಲೂ ನಾನು ಪಾವನಳಾಗಬೇಕು. ಋಷ್ಯಾದಿಗಳ ದೆಶೆಯಿಂದಲೂ, ಮುನಿಗಳ ದೆಶೆಯಿಂದಲೂ, ಮುಖ್ಯ ದೇವತೆಗಳ ದೆಶೆಯಿಂದಲೂ ನಾನು ಉತ್ತಮ ಪಾವನಳಾಗಬೇಕು. ಹೇ ದೇವತೆಗಳಿರಾ, ಸರ್ವ ತೀರ್ಥಗಳೂ, ಯಜ್ಞಗಳು, ಕ್ಷೇತ್ರ ಮೊದಲಾದವುಗಳು, ನಕ್ಷತ್ರ ಪ್ರಮುಖಗಳೂ, ಗ್ರಹಗಳೂ, ಅವುಗಳ ಅಭಿಮಾನ ದೇವತೆಗಳೂ ಸದಾ ನನ್ನಲ್ಲಿ ನಿಂತು ವಾಸಿಸಲಿ. ಸಮಸ್ತ ದೇವತೆಗಳೂ, ಸರ್ವ ದೇವಿಯರೂ, ಹಾಗೆಯೇ ಮುನಿಗಳೂ, ಮೂರ್ತಾ ಮೂರ್ತ ಸ್ವರೂಪದಿಂದಲೂ, ಪಾದರೂಪಗಳಿಂದಲೂ,

ದೇವತೆಗಳೂ ಸಹ ವ್ಯಕ್ತಾವ್ಯಕ್ತ ಸ್ವರೂಪದಿಂದಲೂ, ಸರ್ವದಾ ನನ್ನಲ್ಲಿ ಸ್ಥಿತರಾಗಿರಲಿ. ನನ್ನನ್ನು ನೋಡಿದ ಮಾತ್ರದಿಂದಲೇ ಸರ್ವ ಜನರೂ ಪಾಪ ಮತ್ತು ಉಪ ಪಾತಕಗಳಿಂದ ಮುಕ್ತರಾಗಬೇಕು. ದೇವಶಾರ್ದೂಲರಾದ ಹೇ ಬ್ರಹ್ಮ, ವಿಷ್ಣು, ಮಹೇಶ್ವರರುಗಳಿರಾ, ಶಿಲೆಯಲ್ಲಿ ಸ್ಥಿತಗಳಾಗಿರುವ ತೀರ್ಥಗಳಲ್ಲಿ ಯಾರು ಸ್ನಾನವನ್ನು ಮಾಡಿ ತರ್ಪಣವನ್ನೂ, ಪಾರ್ವಣ ಶ್ರಾದ್ಧವನ್ನೂ ಯಾರನ್ನು ಉದ್ದೇಶ್ಯಮಾಡಿ ಆಚರಿಸುತ್ತಾರೆಯೋ, ಅವರೆಲ್ಲರೂ ವಿಷ್ಣುಲೋಕಕ್ಕೆ ಹೋಗಲಿ. ಗದಾಧರನು ದೃಶ್ಯ ತೀರ್ಥವೂ ಸರ್ವತೀರ್ಥೋತ್ತಮವಾಗಿ ಪಿತೃಗಳಿಗೂ, ಶ್ರಾದ್ಧ ಕರ್ತೃಗಳಿಗೂ ಸದಾ ಮುಕ್ತಿಯನ್ನು ಕೊಡುವುದಾಗಲಿ, ಜರಾಯುಜವಾಗಲಿ, ಅಂಡಜವಾಗಲಿ, ಸ್ವೇದಜವಾಗಲಿ, ಉದ್ಭಿಜವೇ ಆಗಲಿ, ಯಾವ ಪ್ರಾಣಿ ಮಾತ್ರದವರು ಶಿಲೆಯಲ್ಲಿ ದೇಹ ಬಿಟ್ಟು ಮೃತರಾದವರು ಎಲ್ಲರೂ ವಿಷ್ಣುಸಮಾನ ರೂಪ (ಸ್ವರೂಪ)ವನ್ನು ಹೊಂದಲಿ. ಶ್ರೀಹರಿಯು ಪೂಜಿತನಾದರೆ ಹೇಗೆ ಸರ್ವ ಯಜ್ಞಗಳೂ ಪೂರ್ಣವಾಗವುವೋ, ಹಾಗೆಯೇ ಇಲ್ಲಿ ಮಾಡಿದ ಶ್ರಾದ್ಧ, ತರ್ಪಣ, ಸ್ನಾನಗಳು ಅಕ್ಷಯವಾಗಲಿ. ಎಲೈ ಸುರೇಶಾನರೇ, ನನ್ನ ದೇಹದಲ್ಲಿ ಯಾರು ಶ್ರುತಾದಿಗಳಿಂದ ಯಜನ ಮಾಡುತ್ತಾರೆಯೋ ಅವರು ಶೀಘ್ರವಾಗಿಯೇ ಸಿದ್ಧರೂ, ಸಿದ್ಧಿ ಭಾಗಿಗಳೂ ತಪ್ಪದೇ ಆಗಲಿ, ಇಲ್ಲಿ ಶ್ರಾದ್ಧಾದಿಗಳನ್ನು ಮಾಡಿದ ಮನುಜರು ತಾವು ತಮ್ಮನ್ನೂ ಮತ್ತು ಕುಲಸಹಸ್ರವನ್ನೂ ಉದ್ಧರಿಸಿ ವಿಷ್ಣುಲೋಕಕ್ಕೆ ಒಯ್ಯಲ್ಪಡಲಿ. ಎಲ್ಲಿಯುವರೆವಿಗೆ ಗಂಗಾದಿ ಉತ್ತಮ ಸರಿತ್ತು (ನದಿ)ಗಳು, ಶುಭಪ್ರದವಾದ ಹ್ರದಗಳೂ, ದೇವಖಾತ ಮತ್ತು ಸರೋವರಗಳು, ಸಮುದ್ರಗಳೂ, ಎಲೈ ಸರ್ವೇಶ್ವರರೇ, ಮಾನಸ ಮೊದಲಾದ ಸರೋವರಗಳೂ, ಇರುತ್ತವೆಯೋ, ಒಬ್ಬ ವಿಷ್ಣುವೇ ಮೂರ್ತಿತ್ರಯಗಳೆಂದು ಬುಧರಿಂದ (ದೇವತೆಗಳು ಮತ್ತು ಜ್ಞಾನಿಗಳಾದ ಪಂಡಿತರುಗಳಿಂದ) ಸಂಕೀರ್ತಿಸಲ್ಪಡುತ್ತಾನೆಯೋ ಅಲ್ಲಿಯುವರೆವಿಗೂ ಶಿಲೆಯಲ್ಲಿ ಸರ್ವ ತೀರ್ಥಗಳೂ ದೇವತೆಗಳಿಂದ ಕೂಡಿಕೊಂಡೇ ಸದಾ ಸ್ಥಿತರಾಗಿರಲಿ. ಮುನಿಗಳೂ, ಗಂಧರ್ವರ ಸಮೂಹಗಳೂ, ವಾಸಿಸಿ ಇಲ್ಲ ಇರಲಿ. ಬ್ರಹ್ಮಾಂಡವಿರುವವರೆಗೂ ಶಿಲೆಯೂ ಇದ್ದೇ ಇರಲಿ. ನನ್ನ ಅಶ್ಮ (ಶಿಲಾ) ರೂಪ ದೇಹದಲ್ಲಿ ಯಾರು ಶೃತಾದಿಕವನ್ನು ಯಜ್ಞಮಾಡಿ ಪೂಜಿಸುತ್ತಾರೆಯೋ, ಅಗ್ನಿಯಲ್ಲಿ ಹೋಮ ಮಾಡುತ್ತಾರೆಯೋ ಅವು

ಅಕ್ಷಯವಾಗಿ ಫಲಪ್ರದಗಳಾಗಲಿ ಜಪ, ಹೋಮ, ತಪಸ್ಸು, ಶ್ರಾದ್ಧಗಳೆಲ್ಲವೂ ಅಕ್ಷಯ್ಯಗಳಾಗಲಿ. ಭೋ ದೇವತೆಗಳಿರಾ, ಶಿಲಾ ಪರ್ವತ ರೂಪದಿಂದ ನೀವೆಲ್ಲರೂ:ಸ್ಥಿತರಾಗಿರುವವರಾಗಿರಿ. ಆ ದೇವರೂಪಿಯು ಆಕೆಯ ವಾಕ್ಯಗಳನ್ನು ಕೇಳಿ, ದೇವತೆಗಳೆಲ್ಲರೂ ಪತಿವ್ರತೆಯನ್ನು ಕುರಿತು "ನಿನ್ನಿಂದ ಪ್ರಾರ್ಥಿತವಾದ ಸರ್ವವೂ ಸಂಶಯವಿಲ್ಲದೆ ಆಗುವುದು. ಗಯಾಸುರನ ಶಿರಸ್ಸಿನಲ್ಲಿ ಯಾವಾಗ ಶಿಲೆಯು ಸ್ಥಿರವಾಗಿ ಇಟ್ಟು ಸ್ಥಾಪಿಸಲ್ಪಡುವುದೋ, ಆಗ ನಾವೆಲ್ಲರೂ ಪಾದಾದಿ ರೂಪಗಳಿಂದ ನಿನ್ನಲ್ಲಿ ಸುಸ್ಥಿರವಾಗಿ ಸ್ಥಿತರಾಗಿ ನಿಲ್ಲುವೆವು" ಎಂದು ಈ ರೀತಿಯಾಗಿ ಶಿಲೆ ರೂಪಗಳಿಗೆ ವರವನ್ನು ಕೊಟ್ಟು :ಅನಂತರ ಸಕಲ ದೇವತೆಗಳೂ ಅಂತರ್ಧಾನ ಹೊಂದಿದರು.

ಗೀತವಾದಿತ್ರದಿಂದ ಕೂಡಿದ ಉದ್ಯಂತ ಪರ್ವತ, ದೊಡ್ಡದಾದ, ಭಸ್ಮಕೂಟಗಿರಿ, ಗೃಧ್ರಕೂಟ, ಪ್ರೇತಕೂಟ, ಆದಿಪಾಲ, ಅರವಿಂದಕ, ಕ್ರೌಂಚಪಾದ, ಅಕ್ಷಯ್ಯವಟ, ಫಲ್ಗುತೀರ್ಥ, ಮಧುಶ್ರವಾ, ಘೃತಕುಲ್ಯಾ, ದೈವಿಕಾ, (ಫಗ್ಗು) ಮಹಾನದೀ, ವೈತರಣೀ ಮೊದಲಾದವುಗಳಿಂದ ಆದಿ ಗಧಾದರನು ವ್ಯಕ್ತರೂಪದಿಂದ ಇರುವನು.

ಆದಿ ಗಧಾಧರನ ವ್ಯಕ್ತರೂಪಗಳು

ವಿಷ್ಣುಪದ, ರುದ್ರಪದ, ಬ್ರಹ್ಮಪದಗಳು, ಕಾಶ್ಯಪಪದ, ಪಂಚಾಗ್ನಿಗಳ ಪದಗಳು, ಇಂದ್ರ ಪದ, ಅಗಸ್ತ್ಯ ಪದ, ರವಿ ಪದ, ಕಾರ್ತಿಕೇಯ ಪದ, ಕ್ರೌಂಚ ಪದ, ಮಾತಂಗೆ ಪದ, ದಧೀಚಿ ಪದ, ಚಂದ್ರ ಪದ, ಗಾಣೇಶ ಪದ, ಕಾಣ ಪದ ಇವೆಲ್ಲವೂ ವ್ಯಕ್ತಾವ್ಯಕ್ತ ಲಿಂಗ (ಪದಚಿಹ್ನೆಗಳಿಂದ) ಇರುವುವು.

ವಿ.ಸೂ.—ಇಲ್ಲಿ ಪಂಚಾಗ್ನಿಯ ಪದಗಳು ಉಕ್ತವಾಗಿದೆ. 32ನೇ ಪುಟದಲ್ಲಿ ದಕ್ಷಿಣಾಗ್ನಿ, ಮತ್ತು ಗಾರ್ಹ್ಯಪತ್ಯವೆಂದು ಎರಡನ್ನು ಹೇಳಿದೆ. ಅಲ್ಲಿಯೇ ಸತ್ಯಪದ, ಆವಸಥ್ಯಪದಗಳೂ ನಿರೂಪಿಸಲ್ಪಟ್ಟಿದೆ. 33ನೇ ಪುಟದಲ್ಲಿ ಇತರ ಪದಗಳೆಂಬಲ್ಲಿ ಅಲ್ಲಿ ನಿರೂಪಿಸದಿರುವ, ಇಲ್ಲಿ ಹೇಳಿರುವ ಉಳಿದ

ಅಗ್ನಿತ್ರಯುಗಳನ್ನೂ, ಕ್ರೌಂಚ, ಮಾತಂಗ, ದಧೀಚಿ, ಗಾಣೇಶ, ಕಣ್ವ ಪದಗಳನ್ನು ತೆಗೆದುಕೊಳ್ಳಬಹುದು. ಇವು ಅನ್ಯತ್ರ ಇಲ್ಲೇ ಈ ಗ್ರಂಥದಲ್ಲೇ ಹೇಳಲ್ಪಟ್ಟಿವೆ.

ಆದ್ಯ ಗದಾಧರನು ಚಕ್ರನು, ಶ್ರೀರ್ವಾ ಗದಾಧರನೂ, ಗಾಯತ್ರೀ, ಸಾವಿತ್ರೀ, ತ್ರಿಸಂಧ್ಯೆ ನಾಮಕ ಸರಸ್ವತಿಯೂ, ಗಯಾದಿತ್ಯ, ಉತ್ತರಾರ್ಕ, ದಕ್ಷಿಣಾರ್ಕ, ಸ್ನೈವಿಃಪ, ಶ್ವೇತಾರ್ಕ, ಗಣನಾಥ, ಅಷ್ಟವಸುಗಳು, ಮುನೀಶ್ವರರು, ಏಕಾದಶ ರುದ್ರರು, ಹಾಗೆಯೇ ಸಪ್ತ ಋಷಿಗಳು, ಸೋಮನಾಥ, ಸಿದ್ಧೇಶ, ಕಪರ್ದೀಶ, ವಿನಾಯಕ, ನಾರಾಯಣ, ಮಹಾಲಕ್ಷ್ಮೀ, ಬ್ರಹ್ಮಾ, ಶ್ರೀ ಪುರುಷೋತ್ತಮ, ಮಾರ್ಕಂಡೆಯೇಶ, ಕೋಟೀಶ, ಅಂಗಿರೇಶ, ಪಿತಾಮಹ, ಜನಾರ್ಧನ, ಮಂಗಳಾ, ಉತ್ತಮನಾದ ಪುಂಡರೀಕಾಕ್ಷ ಇತ್ಯಾದಿಗಳೆಲ್ಲರೂ ವ್ಯಕ್ತರೂಪದಿಂದ ಸ್ಥಿತರಾಗಿರಲು, ಆದಿ ಗದಾಧರನು ಬ್ರಹ್ಮನೊಡನೆ ರುದ್ರಾದಿಗಳಿಂದ ಗಯಾಸುರನು ಚಲಿಸದಂತೆ ನಿಶ್ಚಲನನ್ನಾಗಿ ಮಾಡಿದ ನಂತರ (ವೇಧಾ) ಬ್ರಹ್ಮನು ಹರ್ಷದಿಂದ ಕೂಡಿ ಆದಿ ಗದಾಪಾಣಿಯನ್ನು ಈರೀತಿ ಸ್ತುತಿಸಿದನು.

(ಬ್ರಹ್ಮ):— ಗದಾಧರನ ಸ್ತೋತ್ರ

ಗದಾಧರಂ ವ್ಯಪಗತಕಾಲಕಲ್ಮಷಂ ।
ಗಯಾಗತಂ ಗದಿತಗುಣಂ ಗುಣಾತಿಗಂ ॥
ಗುಹಾಗತಂ ಗಿರಿವರಗೌರಗೇಹಗಂ ।
ಗಣಾರ್ಚಿತಂ ಗದಿನಮಹಂ ನಮಾಮಿ ॥

ಗದೆಯನ್ನು ಧರಿಸಿರುವ ಯಾವನ ದೆಶೆಯಿಂದ ಕಾಲಕೃತ (ಪಾಪ) ಕಲ್ಮಷಗಳು ಹೋಗುತ್ತವೆಯೋ, ಗಯಾಕ್ಷೇತ್ರದಲ್ಲಿರುವ ಯಾವನ ಗುಣಗಳು ಭಕ್ತರಿಂದ ನಿರೂಪಿಸಿ ಹೇಳಲ್ಪಟ್ಟಿದೆಯೋ, ಸತ್ವ, ರಜಃ, ತಮೋಗುಣಗಳನ್ನು ಯಾವನು ಅತಿಕ್ರಮಿಸಿ ಸ್ಥಿತನಾಗಿದಾನೆಯೋ, ಭಕ್ತರ ಹೃದಯ ಗುಹೆಯಲ್ಲಿ ವಾಸಿಸುತ್ತಿದ್ದಾನೆಯೋ, ಶ್ರೇಷ್ಠವಾದ ಕೋಲಾಹಲ ಪರ್ವತದ ಶುದ್ಧ ಗೃಹದಲ್ಲಿರುವಂಥ ದೇವತೆಗಳ ಸಮೂಹದಿಂದ ಪೂಜಿತನಾದ ಗದಾಯುಧವನ್ನು ಹಿಡಿದಿರುವ ಆ ಗದಾಧರನನ್ನು ನಮಸ್ಕರಿಸುತ್ತೇನೆ.

ಅಹಃ ಶ್ರಿಯಂ ತ್ರಿದಶಗಣಾದಿ ಸುಶ್ರಿಯಂ ।
ಭವಶ್ರಿಯಂ ದಿತಿಭವಧಾರುಣಶ್ರಿಯಂ ॥
ಕಲಿಶ್ರಿಯಂ ಕಲಿಮಲಮರ್ದನಶ್ರಿಯಂ ।
ಗದಾಧರಂ ನೌಮಿ ತಮಾಶ್ರಿತಶ್ರಿಯಂ ॥

ಅಹಸ್ಸಂಪತ್ತು (ಯಾರದೋ)ಳ್ಳ ಯಾರಿಂದ ದೇವಗಣಾದಿಗಳಲ್ಲಿ ದೈವಿಕವಾದ ಸಮೀಚೀನ ಸಂಪತ್ತಿದೆಯೋ ಸಂಸಾರದಲ್ಲಿ ಯಾರ ಅನುಗ್ರಹದಿಂದ ಸಂಪತ್ತಿದೆಯೋ, ದಿತಿ ದೇವಿಯಲ್ಲಿ ಜನಿಸಿದ ದೈತ್ಯರ ಸಂಹಾರರೂಪ ಸಂಪತ್ತು ಯಾರಲ್ಲಿದೆಯೋ, ಕಲಿಯುಗದಲ್ಲಿ ಯಾರ ಸ್ಮರಣೆಮಾತ್ರದಿಂದ ಪಾಪರಾಶಿಯು ನಷ್ಟವಾಗಿ ಯಾರಿಂದ ಭಕ್ತರಲ್ಲಿ ಸಂಪತ್ತಿದೆಯೋ, ಯಾವನ ಚರಿತ್ರೆಯ ಶ್ರವಣದಿಂದ ಕಲಿಕೃತಗಳಿಂದ ಪಾಪಗಳ ಪ್ರಾಯಶ್ಚಿತ್ತ ರೂಪ ಸಂಪತ್ತು ಇರುವುದೋ, (ಎಂದರೆ ಕಲಿಮಲವೆಂಬ ಸಕಲ ಪಾಪರಾಶಿಯು ಯಾವನ ಪ್ರಸಾದದಿಂದ ನಷ್ಟವಾಗುವುದೆಂದು ಅರ್ಥವು.) ಆಶ್ರಿತರಾದವರಿಗೆ ಯಾರ ಅನುಗ್ರಹ ವಿಶೇಷದಿಂದ ಸಂಪತ್ತು ದೊರೆಯುತ್ತದೆಯೋ, ಅಂಥಾ ಗದಾ ಧರನನ್ನು ನಮಸ್ಕರಿಸುತ್ತೇನೆ.

ದೃಢಾದ್ದೃಢಂ ಪರಿದೃಢಗಾಢಸಂಸ್ತುತಂ ।
ಕಾಮಾದೃತಂ ಸುದೃಢಮರೂಢಿರೂಢಿಗಂ ॥
ತಮಾಢ್ಯಗಂ ದೃಢದುರಿತಾಢ್ಯಂಢೌಕಿತಂ ।
ಸ್ವಢೌಕಿತಂ ದೃಢತರಗೋತ್ರಸೂಕ್ತಿಭಿಃ ॥

(ದೃಢಾತ್ ದೃಢವೆನಿಸಿದ) ವಜ್ರದಕ್ಕಿಂತಲೂ ದೃಢನಾದ, ಪರಿತಃ (ದೃಢರಾದ) ಬ್ರಹ್ಮಾದಿಗಳಿಂದ ಅತ್ಯಂತ ಸಂಸ್ತುತನಾದ ಕಾಮದಿಂ (ಮದನನಿಂ)ದ ಅಪ್ರಾಪ್ತನಾದ, ಅಜರಾಮರನಾದುದರಿಂದ ಸುದೃಢನಾದ ಅಪ್ರಕಟಿತಯೂ ಸರ್ವ ಪದಾರ್ಥಗಳಲ್ಲಿರುವುದರಿಂದ ಅರೂಢರೂಢಿಗನೆನಿಸಿದ ಆಢ್ಯರಲ್ಲಿ ವಿಭೂತಿರೂಪದಿಂದಿರುವ ದೃಢದುರಿತಾಢ್ಯಢೌಕಿತ ನೆಂದರೆ ವರ್ತಮಾನ ಪಾಪಿಗಳಿಂದ ಅಪ್ರಾಪ್ತನಾದ, ಚಿರಂಜೀವಿಗಳಾದ ಮಾರ್ಕಂಡೇಯಾದಿಗಳು, ಗೋತ್ರಮೂಲ ಭೂತರಾದ ಯಾವಶಿಷ್ಟರೂ, ಸೂರಿಗಳೂ, ಜ್ಞಾನಿಗಳೂ, ಇರುವರೊ ಅಂಥವರ ಸೂಕ್ತಿಗಳೆನಿಸಿದ ಸುಸಂಸ್ಕೃತ ವಾಕ್ಯಗಳಿಂದ ಸಂಸ್ತುತನಾದ ಆ ಗದಾಧರನನ್ನು ನಮಸ್ಕರಿಸುತ್ತೇನೆ.

ವಿಡೇಪಕಂ ಕರಣಕಲಾವಿವರ್ಜಿತಂ ।
ವಿಜನ್ಮಕಂ ದಿನಕರವೇದಿಭೂಷಿತಂ ॥
ಗದಾಧರಂ ಧ್ವನಿಮುಖವರ್ಜಿತಂ ಪರಂ ।
ನಮಾಮ್ಯಹಂ ಸತತಮನಾದಿಮೀಶ್ವರಂ ॥

ಪಾಂಚ ಭೌತಿಕ ದೇಹರಹಿತನಾದ, (ಕರಣಕಲಾ) ಕಾರ್ಯ ಕಲಾಪ ಗಳಿಂದ ವಿವರ್ಜಿತನಾದ, ಜನನಾದಿಗಳಿಲ್ಲದ, ಸೂರ್ಯನ ಮಂಡಲದಲ್ಲಿ ವಿಭೂ ಷಿತನಾದ, ವಾಕ್ಯದ ದೆಶೆಯಿಂದ (ಧ್ವನಿಮುಖವರ್ಜಿತ) ಪ್ರತ್ಯಕ್ಷನೂ, ಉತ್ಕೃ ಷ್ಟನೂ, ಅನಾದಿಯೂ, ಈಶ್ವರನೂ ಆದ ಗದಾಧರನನ್ನು ನಾನು ಸತತ ನಮಸ್ಕರಿಸುತ್ತೇನೆ.

ಮನೋಽತಿಗಂ ಮತಿಗತಿವಿರ್ಜಿತಂ ಪರಂ ।
ಸದದ್ವಯಂ ಶ್ರುತಿಶಿಸಿರ ಸ್ತುತಂ ಬುಧೈಃ ॥
ಚಿದಾತ್ಮಕಂ ಕಲಿಗತಕಾರಣಾತಿಗಂ ।
ಗದಾಧರಂ ಹೃದಯುಗತಂ ನಮಾಮಿ ತಂ ॥

ಮನಸ್ಸಿಗೆ ಗೋಚನನಲ್ಲದ, ಬುಧರುಗಳಿಂದಲೂ ಪ್ರಾಪ್ಯನಲ್ಲದ (ಮತಿ ಗತಿವರ್ಜಿತನಾದ) ಸದದ್ವಯನಾದ (ಸದ್ರೂಪಮೇಕಂ ಬುಧೈಃ) ಜ್ಞಾನಿ ಗಳಿಂದ ಸದ್ರೂಪನೆಂದು ಪರಮ ಮುಖ್ಯನಾದುದರಿಂದ ಸಮಾಭ್ಯಧಿಕನೆಂದು ತಿಳಿಸಿಕೊಳ್ಳಲ್ಪಡುವ, ಜ್ಞಾನಿಗಳಿಂದ ಶ್ರುತಿ ಶಿರಸ್ಸಿನಿಂದ, ಉಪನಿಷತ್ತು ಮತ್ತು ವೇದಾಂತ ವಾಕ್ಯದಲ್ಲಿ ಸ್ಥಿತನಾದ, ಚಿತ್ಸ್ವರೂಪನಾದ, ಕಲಿಗತ ಕಾರಣ ಗಳೆನಿಸಿದ ಕಾಮ ಕ್ರೋಧಾದಿಗಳುಳ್ಳವರಿಂದ ಅಪ್ರಾಪ್ತನಾದ, ಹೃದಯಗುಹೆ ಯಲ್ಲಿ ಸ್ಥಿತನಾಗಿ ವಾಸವಾಗಿರುವ, ಪ್ರಸಿದ್ಧನಾದ, ವೇದ ಪ್ರತಿವಾದ್ಯನಾದ ಗದಾಧರನನ್ನು ನಮಸ್ಕರಿಸುತ್ತೇನೆ.

ಸನತ್ಕುಮಾರರು—ಎಲೈ ನಾರದನೇ, ಈರೀತಿ ದೇವತೆಗಳಿಂದ ಕೂಡಿ ಬ್ರಹ್ಮನಿಂದ ಸ್ತುತ್ಯನಾದ ಆದಿ ಗದಾಧರನು "ವರಗಳನ್ನು ವಿವರಿಸು" ಎಂದು ಹೇಳಲು, ಬ್ರಹ್ಮನು "ದೇವರೂಪಿಣಿಯಾದ ಈ ಶಿಲೆಯಲ್ಲಿ ನಿನ್ನನ್ನು ಬಿಟ್ಟು ನಾವು ಇರಲಾಗುವುದಿಲ್ಲ, ನಿತ್ಯವ್ಯಕ್ತ್ಯಾದಿ ರೂಪದಿಂದ ನಿನ್ನ ಜೊತೆ ಯಲ್ಲೇ ಸಂಸ್ಥಿತರಾಗಿರುವೆವು" ಎಂದು ಚತುರ್ಮುಖನು ಹೇಳಲು "ಹಾಗೆಯೇ ಆಗಲ" ಎಂದು ಆದಿ ಗದಾಧರನು ಲಕ್ಷ್ಮೀದೇವಿಯೊಡನೆ

ಲೋಕರಕ್ಷಣಾರ್ಥವಾಗಿಯೂ, ಜಗತ್ತಿನ ಜನರಿಗೆ ಮುಕ್ತಿಯನ್ನು ಕೊಡಬೇಕೆಂಬ ಕಾರಣದಿಂದಲೂ, ಪುಂಡರೀಕಾಕ್ಷನು ಸುವ್ಯಕ್ತನಾದ ಜನಾರ್ಧನನೆಂದು ಶ್ರುತಿಯಲ್ಲಿ ಹೇಳಿದಂತೆ ದೇವತೆಗಳಿಂದಲೂ, ಅಗಮ್ಯನೂ, ಅಪ್ರಾಪ್ಯನೂ, ಆದಿಭೂತನೂ, ಸನಾತನೂ, ಆದ ಮೂರ್ತಿಯು ಶ್ವೇತವರಾಹ ಕಲ್ಪದಲ್ಲಿ ಪುನಃ ಸುವ್ಯಕ್ತನಾಗುವೆನು ಪೂರ್ವದಲ್ಲಿ ವರಾಹಕಲ್ಪದಲ್ಲಿ ಅವ್ಯಕ್ತನಾದ ದೇವನು ನನ್ನಲ್ಲಿಗೆ ಬಂದ ರೂಪಿಯೇ ಈಗ ಸಜ್ಜನ ಲೋಕವನ್ನು ಸಂಸಾರದಿಂಪ ದಾಟಿಸುವುದಕ್ಕೂ, ದೇವತೆಗಳನ್ನು ರಕ್ಷಿಸುವುದಕ್ಕೂ, ಗಯಾ ಶಿರಸ್ಸಿನಲ್ಲಿ ಸುವ್ಯಕ್ತನಾಗುವೆನು. ಸಂಶಯಬೇಡ.

ಯಾರು ಆದಿ ಗಧಾರನನ್ನು ಭಕ್ತಿಯಿಂದ ದರ್ಶನ ಮಾಡಿ ನೋಡುತ್ತಾರೆಯೋ, ಅವರು ಕಷ್ಟವೇ ಮೊದಲಾದ ವ್ಯಾಧಿಗಳಿಂದ ನಿರ್ಮುಕ್ತರಾಗಿ ಹರಿಯನ್ನು ಚನ್ನಾಗಿ ಹೊಂದಿ ಸೇರುತ್ತಾರೆ ಮತ್ತು ಯಾರು ಭಕ್ತಿಯಿಂದ ಆದಿ ಗದಾಧರ ದೇವನನ್ನು ನೋಡುತ್ತಾರೆಯೋ, ಅವರು ಧನ, ಧಾನ್ಯ ಆಯುಸ್ಸು, ಆರೋಗ್ಯ ಕಳತ್ರ (ಹೆಂಡತಿ ಮಕ್ಕಳು ಮೊಮ್ಮಕ್ಕಳು), ಪುತ್ರ ಪೌತ್ರರುಗಳನ್ನೂ, ಸದ್ಗುಣ, ಕೀರ್ತಿ, ಯಶಸ್ಸು ಸುಖಗಳನ್ನೂ ಪಡೆಯುವರು.

ಯಾರು ಶ್ರದ್ಧೆಯಿಂದ ಸಮಸ್ಕರಿಸುತ್ತಾರೆಯೋ ಅವರು ರಾಜ್ಯವನ್ನೂ ಬ್ರಹ್ಮಪುರವನ್ನೂ ಹೊಂದಿ ಭೋಗಗಳನ್ನು ಅನುಭವಿಸಿ, ಸತತ ಪುಣ್ಯವನ್ನೂ ಪುಣ್ಯ ಫಲವನ್ನೂ ಪಡೆದು ಸುಖಪಡುವರು.

ಯಾರು ಗಂಧ ದಾನದಿಂದಲೂ, ಸುಗಂಧಯುಕ್ತ ಪುಷ್ಪದಾನದಿಂದಲೂ ಧೂಪದಾನದಿಂದಲೂ, ಪೂಜಿಸುವರೋ, ಅವರಿಗೆ ರಾಜ್ಯಪ್ರಾಪ್ತಿಯೂ, ದೀಪ ದಾನದಿಂದ, ದೀಪ್ತಿ ಮತ್ತು ಉತ್ತಮ ತೇಜಸ್ಸೂ, ಲಭಿಸುವುದು. ಧ್ವಜ ದಾನದಿಂದ ಪಾಪಹಾನಿಯಾಗಿ ಯಾತ್ರೆ ಮಾಡಿದವನು ಬ್ರಹ್ಮಲೋಕ ಭಾಗಿಯಾಗುವನು.

ಶ್ರಾದ್ಧಪಿಂಡ ಪ್ರದಾನದಿಂದ ಪಿತೃಗಳನ್ನು ವಿಷ್ಣುಲೋಕಕ್ಕೆ ಕರ್ತನು ಒಯ್ದು ತಲಪಿಸುವನು. ಯಾರು ಶ್ರಾದ್ಧ ದಾನದಿಂದಲೂ ಮಂತ್ರದಿಂದಲೂ, ಆದಿ ಗದಾಧರನನ್ನು ಭಕ್ತಿಯಿಂದ ಅರ್ಚಿಸಿ, ಪೂಜಿಸಿ, ಸಂತೋಷಪಡಿಸುತ್ತಾರೆಯೋ ಅವರು ತಮ್ಮ ಪಿತೃಗಳನ್ನು ಒಯ್ದು ವೈಕಂಠದಲ್ಲಿ ಲಕ್ಷ್ಮೀಪತಿಯಾದ ಮಾಧವನನ್ನು ಹೊಂದಿಸುವರು.

ಪರಮ ಪ್ರೀತಿಯಿಂದ ಶಿವನೂ ಸಹ ಆದಿ ಗದಾಧರನನ್ನು ಮಾಡಿದ ಸ್ತುತಿಯು—

ಶಿವ ಉವಾಚ —

ಅವ್ಯಕ್ತರೂಪೋ ಯೋ ದೇವೋ ಮುಂಡಪೃಷ್ಠಾದಿ ರೂಪತಃ ।
ಫಲ್ಗುತೀರ್ಥಾದಿ ರೂಪೇಣ ನಮಾಮ್ಯಾದಿಗದಾಧರಂ ॥ ೧ ॥

ವ್ಯಕ್ತರೂಪೋ ಹಿ ಯೋ ದೇವೋ ಜನಾರ್ದನಸ್ವರೂಪತಃ ।
ಮುಂಡಪೃಷ್ಠೇ ಸ್ವಯಂ ಹ್ಯಾಸ್ತೇ ನಮಾಮ್ಯಾದಿಗದಾಧರಂ ॥ ೨ ॥

ಶಿಲಾಯಾಂ ದೇವರೂಪಿಣ್ಯಾಂ ಸ್ಥಿತೋ ಬ್ರಹ್ಮಾದಿಭಿಃ ಸುರೈ ।
ಪೂಜಿತಂ ಸಂಸ್ತುತಂ ದೇವಂ ನಮಾಮ್ಯಾದಿಗದಾಧರಂ ॥ ೩ ॥

ಮಹದಾದೇಶ್ಚ ಜಗತೋ ವ್ಯಕ್ತಸ್ಯೈಕಂ ಹಿ ಕಾರಣಂ ।
ಅವ್ಯಕ್ತಂ ಜ್ಞಾನರೂಪಂ ತಂ ನಮಾಮ್ಯಾದಿಗದಾಧರಂ । ॥ ೪ ॥

ಯಂ ಚ ದೃಷ್ಟ್ವಾ ತಥಾ ಸ್ಪೃಷ್ಟ್ವಾ ಪೂಜಯಿತ್ವಾ ಪ್ರಣಮ್ಯ ತಾಂ ।
ಶ್ರಾದ್ಧಾದ್ಯೈರ್ಬ್ರಹ್ಮಲೋಕಾಪ್ತಿರ್ನಮಾಮ್ಯಾದಿಗದಾಧರಂ ॥ ೫ ॥

ದೇಹೇಂದ್ರಿಯಮನೋಬುದ್ಧಿ ಪ್ರಾಣಾಹಂಕಾರವರ್ಜಿತಂ ।
ಜಾಗ್ರತ್ಸ್ವಪ್ನವಿನಿರ್ಮುಕ್ತಂ ನಾಮಾಮ್ಯಾದಿಗದಾಧರಂ ॥ ೬ ॥

ವ್ಯಕ್ತಾವ್ಯಕ್ತಸ್ವರೂಪೇಣ ಪದರೂಪೇಣ ಸಂಸ್ಥಿತಂ ।
ಮುಖಾದಿ ಲಿಂಗರೂಪೇಣ ನಮಾಮ್ಯಾದಿಗದಾಧರಂ ॥ ೭ ॥

ನಿತ್ಯಾನಿತ್ಯವಿನಿರ್ಮುಕ್ತಂ ಸತ್ಯಮಾನಂದಮವ್ಯಯಂ ।
ತುರೀಯ ಜ್ಯೋತಿರಾತ್ಮಾನಂ ನಮಾಮಾದಿಗದಾಧರಂ ॥ ೮ ॥

ಮುಂಡಪುಷ್ಪ ಮೊದಲಾದ ರೂಪದಿಂದಲೂ, ಫಲ್ಗುತೀರ್ಥಾದಿ ರೂಪದಿಂದಲೂ, ಯಾವ ದೇವನು ಅವ್ಯಕ್ತರೂಪದಿಂದ ಇದಾನೆಯೋ ಅಂಥಾ ಆದಿ ಗದಾಧರ ದೇವನನ್ನು ನಮಸ್ಕರಿಸುತ್ತೇನೆ. ॥ ೧ ॥

ಯಾವ ಕ್ರೀಡಾದಿ ಗುಣವಿಶಿಷ್ಟನಾದ ದೇವನು ಜನಾರ್ದನ ರೂಪದಿಂದಲೂ, ವ್ಯಕ್ತರೂಪನಾಗಿ ಸ್ವಯಂ ಮುಂಡಪುಷ್ಪದಲ್ಲಿ ಇದಾನೆಯೋ ಅಂಥ ಆದಿ ಗದಾಧರನಿಗೆ ನಾನು ನಮಸ್ಕಾರ ಮಾಡುತ್ತೇನೆ ॥ ೨ ॥

ದೇವರೂಪಿಣಿಯಾದ ಶಿಲೆಯಲ್ಲಿ ಬ್ರಹ್ಮಾದಿ ದೇವತೆಗಳಿಂದ ಪೂಜಿತನೂ, ಭಕ್ತಿಯಿಂದ ಸ್ತುತ್ಯನೂ ಆದ ಆದಿ ಗದಾಧರನನ್ನು ನಮಸ್ಕರಿಸುತ್ತೇನೆ. ॥ ೩ ॥

ಮಹತ್ತತ್ವಾದಿ ಸರ್ವ ಚರಾಚರ ಜಗತ್ತಿ (ಪ್ರಪಂಚಕ್ಕೂ)ಗೂ ಮುಖ್ಯ ಕಾರಣನಾಗಿರುವ ವ್ಯಕ್ತರೂಪಿಗೂ, ಜ್ಞಾನರೂಪದಿಂದ ಅವ್ಯಕ್ತರೂಪವುಳ್ಳ ಆ ಗದಾಧರನಿಗೆ ನಮಸ್ಕಾರ ಮಾಡುತ್ತೇನೆ. ॥ ೪ ॥

ಯಾರನ್ನು ದರ್ಶನ ಮಾಡಿ, ಸ್ಪರ್ಶಿಸಿ, ಶ್ರಾದ್ಧಾದಿಗಳಿಂದ ಪೂಜಿಸಿ, ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆಯೋ ಅಂಥ ಆದಿ ಗದಾಧರನಿಗೆ ನಮಸ್ಕಾರ ಮಾಡುತ್ತೇನೆ. ॥ ೫ ॥

ಪ್ರಾಕೃತಗಳಾದ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ, ಅಹಂಕಾರಗಳಿಂದ ರಹಿತನೂ, ಸ್ವಯಂ, ಗ್ರುತ್, ಸ್ವಪ್ನ, ಸುಷುತ್ತ್ಯಾದಿ ಅವಸ್ಥೆಗಳಿಗೆ ಪ್ರೇರಕನಾಗಿ ತಾನು ಮಾತ್ರ ಅವುಗಳ ಸಂಪರ್ಕವಿಲ್ಲದೆ, ವಿನಿರ್ಮುಕ್ತನಾಗಿದಾನೆಯೋ, ಅಂಥ ಆದಿ ಗದಾಧರನನ್ನು ನಮಸ್ಕರಿಸುತ್ತೇನೆ. ॥ ೬ ॥

ವ್ಯಕ್ತಾವ್ಯಕ್ತ ಸ್ವರೂಪದಿಂದ ಪದರೂಪದಿಂದ ಸಂಸ್ಥಿತನಾಗಿ, ಮುಖಾದಿ ಲಿಂಗ (ಚಿಹ್ನೆ) ರೂಪದಿಂದಿರುವ ಆದಿ ಗದಾಧರನನ್ನು ನಾನು ನಮಸ್ಕಾರ ಮಾಡುತ್ತೇನೆ. ॥ ೭ ॥

ಅನಿತ್ಯತ್ವ ದೇಹಹಾನಿ, ದುಃಖಪ್ರಾಪ್ತಿ, ಅಪೂರ್ಣತೆಗಳೆಂಬ ನಾಲ್ಕುವಿಧ ನಾಶರಹಿತನೂ, ನಿತ್ಯ ವಸ್ತುಗಳಿಂದಲೂ, ಬೇರೆಯಾಗಿ ನಿತ್ಯವಸ್ತುಗಳಿಗೆ ನಿತ್ಯತ್ವವನ್ನು ಕೊಟ್ಟು, ನಿತ್ಯೋನಿತ್ಯಾನಾಂ ಎಂಬಂತೆ ಪರಮ ನಿತ್ಯನೂ, ಸತ್ಯರೂಪನೂ, ಆನಂದರೂಪನೂ, ಆನಂದಮಯ (ಪೂರ್ಣ)ನೂ ಆದ ಸರ್ವಸ್ವಾಮಿಯಾದ ಆದಿ ಗದಾಧರ ನಾಮಕ ಪರಮಾತ್ಮನನ್ನು ನಮಸ್ಕರಿಸುತ್ತೇನೆ. ॥ ೮ ॥

ಸ್ತೋತ್ರದ ಫಲ

ಎಂಬೀ ಅರ್ಥಗರ್ಭಿತವಾದ ಈ ಸ್ತೋತ್ರದಿಂದ ಮಹೇಶನಿಂದ ಸಂಸ್ತುತನಾದ ಆದಿ ಗದಾಧರನು ಬ್ರಹ್ಮಾದಿ ದೇವತೆಗಳೊಡನೆ ದೇವಶಿಲೆಯಲ್ಲಿ ಸ್ಥಿತನಾದನು. ಮುಂಡಪೃಷ್ಟಾದ್ರಿಯಲ್ಲಿ ಸಂಸ್ಥಿತನಾಗಿ ನೆಲೆಸಿರುವ ಆದಿ ಗದಾಧರನನ್ನು ಯಾರು ಭಕ್ತಿಯಿಂದ ಸ್ತೋತ್ರ ಮಾಡಿ ಪೂಜಿಸಿ, ಅಭಿವಂದಿಸುತ್ತಾರೆಯೋ, ಅವರೆಲ್ಲರೂ ವಿಷ್ಣುಲೋಕಕ್ಕೆ ಹೋಗುತ್ತಾರೆ. ಧರ್ಮಾರ್ಥಿಯು ಧರ್ಮವನ್ನು ಪಡೆಯುತ್ತಾನೆ, ಅರ್ಥಾರ್ಥಿಯು ದ್ರವ್ಯವನ್ನೂ, ಮನೋರಥಗಳನ್ನೂ ಪಡೆಯುತ್ತಾನೆ, ಕಾಮವನ್ನಿಚ್ಛಿಸುವವನು ತನ್ನ ಅಭಿಲಷಿತ ಕಾಮನೆಗಳನ್ನೂ, ಮೋಕ್ಷವನ್ನಪೇಕ್ಷಿಸುವವನು ಮೋಕ್ಷವನ್ನೂ ಹೊಂದುತ್ತಾನೆ. ಬಂಜೆಯು ಗದಾಧರನನ್ನು ಪೂಜಿಸಿ, ಸೇವಿಸಿ, ಪುತ್ರನನ್ನು ಪಡೆಯುವಳು. ರಾಜನು ವಿಜಯವನ್ನೂ, ಶೂದ್ರನು ಸುಖವನ್ನೂ ಹೊಂದುವನು. ಪುತ್ರಾರ್ಥಿಯು ವೇದವೇದಾಂಗ ಪಾರಗರಾದ ಮಕ್ಕಳನ್ನು ಪಡೆಯುವಳು, ಶ್ರೀಹರಿಯ ಪೂಜಾದಿಗಳಿಂದ ಮನಸ್ಸಿನಲ್ಲಿ ಇಚ್ಛಿಸಿದ ಸರ್ವ ಕಾಮನೆಗಳನ್ನೂ ತಪ್ಪದೆ ಪಡೆದು, ಐಹಿಕಾಮುಷ್ಮಿಕ ಸುಖಗಳನ್ನು ಪಡೆದು ಅನುಭವಿಸುವನು. ಎಂದು ಉಪದೇಶಿಸಿರುವರು. (೫ ಅ. ವಾ. ಪು.)

ವಾಯು ಪುರಾಣದಲ್ಲಿ ಪಿಂಡಪ್ರದಾನದಲ್ಲಿ ಕಂಡ ಹೆಚ್ಚಿನ ಮಂತ್ರಗಳಿವು — (ಅ. ೬)

ಪಿಂಡಪ್ರದಾನ ಶ್ಲೋಕಗಳು

ಮಾತಾಮಹಕುಲೇ ಮೃತಾ ಯೇ ಚ ಗತಿರ್ಯೇಷಾಂ ನ ವಿದ್ಯತೇ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಮಾತಾಮಹ (ತಾಯಿ ತಂದೆಯ) ಕುಲದಲ್ಲಿ ಮೃತರಾಗಿ ಯಾರಿಗೆ ಗತಿ ಯಿಲ್ಲವೊ, ಅವರ ಉದ್ಧಾರಕ್ಕಾಗಿ, ಈ ಪಿಂಡವನ್ನು ನಾನು ಕೊಡುತ್ತೇನೆ.

ಅಸಿಪತ್ರವನೇ ಘೋರೇ ಕುಂಭೀಪಾಕೇ ಚ ಯೇ ಗತಾಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಘೋರವಾದ ಅಸಿಪತ್ರವೆಂಬ ನರಕದಲ್ಲೂ, ಕುಂಭೀಪಾಕ ನರಕ

ದಲ್ಲೂ ಯಾರು ಹೋಗಿ ದುಃಖ ಪಡುತ್ತಿರುವರೋ ಅಂಥವರ ಉದ್ಧಾರಕ್ಕಾಗಿ ನಾನು ಆ ಪಿಂಡವನ್ನು ಕೊಡುತ್ತೇನೆ,

ಅಸಂಖ್ಯ ಯಾತನಾಸಂಸ್ಥಾ ಯೇ ನೀತಾ ಯಮ ಶಾಸನೈಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಯಮನ ಶಾಸನದಿಂದ ಒಯ್ಯಲ್ಪಟ್ಟು, ಅಸಂಖ್ಯ ಯಾತನೆಯಿರುವ ನರಕದಲ್ಲಿ ಯಾರು ದುಃಖ ಪಡುತ್ತಿರುವರೋ ಅವರ ಉದ್ಧಾರಕ್ಕಾಗಿ ಈ ಪಿಂಡವನ್ನು ನಾನು ಕೊಡುತ್ತೇನೆ.

(೨ಂನೇ ಪುಟದ ಕೊನೆಯಲ್ಲಿ ಸೇರಬೇಕಾದ ಮಂತ್ರಗಳು)

ವಂಶದ್ವಯೇಽಸ್ಮಿನ್ ಮಮ ದಾಸಭೂತಾಃ ।
ಭೃತ್ಯಾಸ್ತಥೈವಾಶ್ರಿತಸೇವಕಾಶ್ಚ ॥
ಮಿತ್ರಾಣಿ ಸಖ್ಯಃ ಪಶವಶ್ಚ ವೃಕ್ಷಾಃ ।
ದೃಷ್ಟಾಶ್ಚ ಸ್ಪೃಷ್ಟಾಶ್ಚ ಕೃತೋಽಪಕಾರಾಃ ॥
ಜನ್ಮಾಂತರೇ ಯೇ ಮಮ ಸಂಗತಾಶ್ಚ ।
ತೇಭ್ಯಃ ಸ್ವಧಾ ಪಿಂಡಮಹಂ ದದಾಮಿ ॥

ಈ ಎರಡು ವಂಶಗಳಲ್ಲೂ ಯಾರು ನನಗೆ ದಾಸಭೂತರೂ, ಭೃತ್ಯರೂ, ಹಾಗೆಯೇ ಆಶ್ರಿತರೂ, ಸೇವಕರೂ, ಮಿತ್ರರೂ, ಸಖ್ಯ (ಸ್ನೇಹಿತ)ರೂ ಆಗಿದ್ದರೋ ಪಶುಗಳೂ, ವೃಕ್ಷಗಳೂ ಆಗಿಯೂ ದೃಷ್ಟ (ನೋಡದವ)ರೂ ಸ್ಪರ್ಶ ಮಾಡಿದವ (ಮುಟ್ಟಿದವರ)ರೂ ಮತ್ತು ಉಪಕಾರ ಮಾಡಿದವರೂ, ಉಪಕಾರವನ್ನು ಪಡೆದವರೂ, ಜನ್ಮಾಂತರದಲ್ಲಿ ನನ್ನ ಜೊತೆ ಸಂಗತರಾಗಿ, ಸೇರಿದ್ದವರಿಗೆಲ್ಲರಿಗೂ "ಸ್ವಧಾ" ಈ ಪಿಂಡವನ್ನು ನಾನು ಕೊಡುತ್ತೇನೆ.

ಈ ಸರ್ವ ಮಂತ್ರಗಳನ್ನೂ ಸ್ತ್ರೀಯರ ವಿಷಯದಲ್ಲಿ ಸ್ತ್ರೀಲಿಂಗದಿಂದ ಅವರನ್ನು ಸಮಾಹ್ವಾನ ಮಾಡಿ, ಯಥಾ ಪೂರ್ವದಂತೆ ಮಾತೃ ಮೊದಲಾದ ಸ್ತ್ರೀಯರಿಗೆ ಪಿಂಡವನ್ನು ಕೊಡಬೇಕು. ಸ್ವಗೋತ್ರ ಶ್ವಶುರಗೋತ್ರಗಳಲ್ಲಿ ಅನ್ಯೋನ್ಯ ಸ್ಪರ್ಶವಾಗದಂತೆ ದಂಪತಿಗಳಿಗೆ ಅವರವರ ಜೊತೆಯಲ್ಲೇ ಕೊಡಬೇಕು. ಪ್ರತ್ಯೇಕ ಕೊಡದೆ ಒಟ್ಟಿಗೆ ಸೇರಿಸಿ (ಅಪೃಥಕ್ ಅ)ವರ ಶ್ರಾದ್ಧವು

ವ್ಯರ್ಥವಾಗುವುದು. ಪಿಂಡಗಳಲ್ಲಿ ಉದಕ ತರ್ಪಣವನ್ನು ಕೊಟ್ಟು, ಪಿಂಡ ಪಾತ್ರೆಯಲ್ಲಿ ತಿಲವನ್ನು ಹಾಕಿ, ಶುಭೋದಕದಿಂದ ಅದನ್ನು ಪೂರ್ಣಮಾಡಿ ತುಂಬಬೇಕು. ಎಲ್ಲರಿಗೂ ಮೂರು ಸಲ ಪರೀಷೇಚನ ಮಾಡಿ, ನಮಸ್ಕರಿಸಿ, ಕ್ಷಮಾಪಣೆ ಬೇಡಬೇಕು.

ಕ್ಷಮಾಪನ ಮಂತ್ರ

(ವೇದಮಂತ್ರ)

ಯೇ ಚ ಪೋತ್ರ ಯೇ ಚಾ ಸ್ಮಾನಾಶಂಸಂತೇ ।
ಯಾಶ್ಚ ವೋ ತ್ರ ಯಾಶ್ಚಾನಾಶಾಸಂತೇ ಚ ॥
ವಸಂತಾಂ ತಾಶ್ಚ ವಸಂತಾಂ ತೃಪ್ಯಂತು ಭವಂಶ
ಸ್ತೃಪಂತು ಭವತ್ಯಸ್ತೃಪ್ಯತ ತೃಪ್ಯತ
ಪುತ್ರಾನ್ ಪೌತ್ರಾನಭಿವರ್ಧಯಂತಾ ರಾಪೋ ಮಧುಮತೀರಿಮಾಃ ।
ಸ್ವಧಾಂ ಪಿತೃಭ್ಯೋ ಅಮೃತಂ ದುಹಾನಾ ಆಪೋ ದೇವೀರು
ಭಯತಸ್ತರ್ಪಯತು ॥

ಎಂದು ಪ್ರಾರ್ಥಿಸಿ ಪಿತೃಗಳನ್ನು ವಿಸರ್ಜನೆ ಮಾಡಿ ದೇವತೆಗಳನ್ನು ಸಾಕ್ಷಿಗಳಾಗಿ ಶ್ರವಣ ಮಾಡಬೇಕು. (ಪುಟ ೨೧ನೋಡಿ)

(ವಾ. ಪು. ಅ. ೬)

ವಾಯುಪುರಾಣ ೮ನೇ ಅಧ್ಯಾಯದಲ್ಲಿ

ಗಯಾರಾಜನ ಕಥೆ

ಸನತ್ಕುಮಾರರು —

ನಾರದರೇ, ಪೂರ್ವದಲ್ಲಿ ಗಯನೆಂಬ ಪ್ರಸಿದ್ಧನಾದ ರಾಜನು ಈ ಗಯಾ ಕ್ಷೇತ್ರದಲ್ಲಿ ಯಜ್ಞವನ್ನು ಮಾಡಿದನು. ಆಗ ಆತನು ಬಹುವಾಗಿ ಅನ್ನದಾನ ಮತ್ತು ಬಹು ದಕ್ಷಿಣೆ ದಾನಗಳಿಂದ ದೇವ ಬ್ರಾಹ್ಮಣರನ್ನು ಅದ್ಭುತ ರೀತಿಯಲ್ಲಿ ಸಂತೋಷದಿಂದ ತೃಪ್ತಿಪಡಿಸಿದನು. ಆಗ ಅಲ್ಲಿ ಸಂಗ್ರಹಿಸಿದ್ದ ದ್ರವ್ಯ ಸಮೂಹಗಳನ್ನು ಲೆಕ್ಕ ಮಾಡಲು ಸಹ ಶಕ್ಯವಿಲ್ಲವು. ಅವು ಅಸಂಖ್ಯಾತವು.

ಗಯಾ ಕ್ಷೇತ್ರದಲ್ಲಿ ಆ ಸವಾರಂಭದಲ್ಲಿ ಇದ್ದುದು ಅನ್ನಪರ್ವತಗಳು ಇಪ್ಪತ್ತೈದು ಈ ಲೋಕದಲ್ಲಿ ಮರಳುರಾಶಿಗಳು ಹೇಗೋ ಸ್ವರ್ಗಲೋಕದಲ್ಲಿ ಥಾರಕ ಸುವರ್ಣಗಳು ಹೇಗೋ ಹಾಗೆ ಬಹುಸಂಖ್ಯಾತಗಳಾದ ಸುವರ್ಣ ನಾಣ್ಯರಾಶಿಯು ಬಹು ದಕ್ಷಿಣೆ, ಬ್ರಹ್ಮಣಾದಿ ಸಕಲ ಅರ್ಹ ಜನರಿಗೆ ಆ ಮಹಾರಾಜನು ಪ್ರದಾನಮಾಡಿ ಕೊಟ್ಟನು ಸುವರ್ಣ ವೃಷ್ಟಿಯನ್ನೇ ಮಾಡಿಬಿಟ್ಟನು. ಇನ್ನು ಇಲ್ಲಿ ಯಾರೊಬ್ಬರೂ ನಹಿ, ನಹಿ, ನೈವೇಹ ಇಲ್ಲವು. ಇಲ್ಲವೇ ಇಲ್ಲವು. ಇತರರು ಯಾರೊಬ್ಬರು ಮುಂದೆಸಹಾ ಅಂಥ ಯಜ್ಞವನ್ನು ಮಾಡಲಾರರು. ಮಾಡುವುದಿಲ್ಲವು. ದ್ವಿಜರು ಬರುತ್ತಾರೆ ಪೂರ್ಣ ತೃಪ್ತರಾಗಿ ದೇಶ ದೇಶದಿಂದ ಆಗಮಿಸಿ ಸಂತೃಪ್ತಿ ಹೊಂದಿ ಹೋಗುತ್ತಾರೆ, ಮತ್ತೆ ಪುನಃ ದೇಶ ದೇಶದಲ್ಲಿಯೂ ಆ ರಾಜನ ವ್ಯವಸ್ಥೆಯಂತೆ ಆ ವಿಪ್ರೋತ್ತಮರು ಸುಪೂಜಿತರಾಗುತ್ತಾರೆ.

ಇದರಿಂದ ವಿಷ್ಣು ಮೊದಲಾದವರೆಲ್ಲ ದೇವತೆಗಳೂ ಸಂತುಷ್ಟರಾಗಿ ಗಯನನ್ನು ಕುರಿತು "ವರವನ್ನು ಕೇಳು" ಎಂದರು. ಗಯನು ಅವರನ್ನು ಪ್ರಾರ್ಥಿಸುತ್ತಾನೆ. "ಪೂರ್ವದಲ್ಲಿ ಯಾವ ವಿಪ್ರರು ಬ್ರಹ್ಮನಿಂದ ಶಪ್ತರಾದರೋ ಆ ದ್ವಿಜರು ಪೂತರಾಗಿ ಶಾಪದಿಂದ ಮುಕ್ತರಾಗಿ, ಪಾವನರೂ, ಕ್ರತುಪೂಜಿತರೂ ಆಗಲಿ. ಗಯಾ ಶ್ರಾದ್ಧವಿಧಾನಕ್ಕಾಗಿ ಹದಿನಾಲ್ಕು ಜನ ದ್ವಿಜರು ಮೂರ್ತಿಮಂತರು ಅವರ ವಾಕ್ಯಗಳನ್ನು ಸ್ವಯಂ ಬ್ರಹ್ಮನೇ ಆಗಿದ್ದರೆ ಹೇಗೆ ಭಯ ಭಕ್ತಿಯಿಂದ ಕೇಳಿ ನಡೆಯುತ್ತಾರೆಯೋ, ಅದರಂತೆ ನಡೆಯಿಸಬೇಕು. ಗೌತಮರು ಕಾಶ್ಯಪ, ಕೌತ್ಸ, ಕೌಶಿಕ, ಕಣ್ವ, ಭರದ್ವಾಜ, ಔಶನಶ, (ಶುಕ್ರಾಚಾರ್ಯರು) ವಾತ್ಸ್ಯ, ಪಾರಾಶರ, ಹಾಗೆಯೇ ಸನತ್ಕುಮಾರ, ಮಾಂಡವ್ಯ, ಲೌಗಾಕ್ಷಿ, ಲೋಮಶ, ಮಹಾತ್ಮರಾದ ವಶಿಷ್ಟರು ಮತ್ತು ಆತ್ರೇಯರು ಇವರಲ್ಲಿ 14 ಜನರು ಗೋತ್ರ ಪ್ರವರ್ತಕರು. ಇವರೂ ಇವರ ಪಾರಂಪರ್ಯ ಅನುಯಾಯಿಗಳೂ, ಪೂಜಾರ್ಹರು. ಈ ಪಟ್ಟಣವು ನನ್ನ ಹೆಸರಿನಿಂದ ಗಯಾಪುರೀ ಎಂತಲೂ, ಹಾಗೆಯೇ ಬ್ರಹ್ಮಪುರವೆಂತಲೂ ಖ್ಯಾತವಾಗಿ ಸುಪ್ರಸಿದ್ಧವಾಗಿರಬೇಕು." ಎಂದು ಪ್ರಾರ್ಥಿಸಲು ಅವರೆಲ್ಲರೂ "ಏವಮಸ್ತು ಇದೇರೀತಿಯಾಗಲಿ" ಎಂದು ವರವನ್ನು ಕೊಟ್ಟು ಆ ದೇವತೆಗಳೆಲ್ಲರೂ ಅದೃಶ್ಯರಾದರು. ಗಯಾ

ಜರಾನೂ ಸಹ ವಿಶೇಷವಾಗಿ ಬೇಕು ಬೇಕಾದ ಭೋಗಗಳೆಲ್ಲವನ್ನೂ ಇಹ ಲೋಕದಲ್ಲಿ ಅನುಭವಿಸಿ ಕೊನೆಗೆ ವಿಷ್ಣುಲೋಕಕ್ಕೆ ಹೋದನು.

ಶಂಕರನಿಂದ ಮರೀಚಿ ಋಷಿಗೆ ಶಾಪ ಬಂದದ್ದು

ಪೂರ್ವದಲ್ಲಿ ರಮ್ಯವಾದ **ರುಕ್ಮ ಪಾರಿಜಾತಕ** ವನದಲ್ಲಿ ಪಾರ್ವತಿ ಯೊಡನೆ ಶಂಕರನು ಏಕಾಂತ (ರಹಸ್ಯವಾಗಿ) ದಲ್ಲಿ ಹತ್ತು ಸಹಸ್ರ ವರ್ಷಕಾಲ ಕ್ರೀಡಿಸುತ್ತಿರಲು **ಮರೀಚಿ ಮುನಿಯು** ಫಲಪುಷ್ಪಗಳನ್ನು ತರಲು ಆ ಪಾರಿಜಾತಕ ವನಕ್ಕೆ ಹೋದನು. ಅವನನ್ನು ನೋಡಿ "ನೀನು ನಮ್ಮ ಸುಖ ವಿಘಾತಕನಾದುದರಿಂದ ದುಃಖವುಳ್ಳವನಾಗು." ಎಂದು ಶಂಕರನು ಶಪಿಸಿದನು. ಅದರಿಂದ ಭಯಪಟ್ಟ ಮರೀಚಿ (ಋಷಿ)ಯು ಶಿವನನ್ನು ಸ್ತೋತ್ರ ಮಾಡಿದನು. ಅವನ ಸ್ತುತಿಯಿಂದ ಸಂತುಷ್ಟನಾದ ಶಂಭುವು "ಉತ್ತಮ ವರವನ್ನು ಕೇಳು" ಎಂದನು.

ಮರೀಚಿಯು "ನನಗೆ ಶಾಪದ ದೆಶೆಯಿಂದ ಮುಕ್ತಿಯಾಗಲಿ" ಎಂದು ಎಂದು ಶಂಕರನನ್ನು ಪ್ರಾರ್ಥಿಸಿದನು. ಶಿವನು "ನಿನಗೆ **ಗಯಾದಲ್ಲಿ ಮುಕ್ತಿಯಾಗಲಿ.**" ಎಂದು ಶಿವನಿಂದ ಉಕ್ತವಾಗಿ ಮರೀಚಿ ಋಷಿಯು ಗಯಾಕ್ಕೆ ಶೀಘ್ರವಾಗಿ ಹೋದನು.

ಮರೀಚಿಯು ಶಾಪ ವಿಮೋಚನೆಗಾಗಿ ಶಿಲಾದಲ್ಲಿ ತಪಸ್ಸು

ಶಿಲಾದಲ್ಲಿ ಕುಳಿತು ಸರ್ವರಿಗೂ ದುಷ್ಕರವಾದ ಘೋರ ತಪಸ್ಸನ್ನಾಚರಿ ಸಿದನು. ಶಂಕರನಿಂದ ಶಾಪಗ್ರಸ್ಥನಾದ ಮರೀಚಿಯು ಪೂರ್ವದಲ್ಲಿ ಕಪ್ಪಗೆ ಕೃಷ್ಣವರ್ಣ ಹೊಂದಿದ್ದನು. ಇಲ್ಲಿ ದಾರುಣವಾದ ತಪಸ್ಸು ಮಾಡಿದುದ ರಿಂದ ಶುಕ್ಲತ್ವವನ್ನು ಶುಭ್ರವಾದ ಬಿಳೀ ದೇಹವನ್ನು ಪಡೆದನು. ಹರಿಯು ಮರೀಚಿಯನ್ನು ಕುರಿತು "ಪುತ್ರನೇ, ಏನುಬೇಕು ನಿನಗೆ ಇಷ್ಟವಾದ ವರವನ್ನು ಕೇಳಿ ವರಿಸು" ಎನ್ನಲು ಮಾಧವನನ್ನು ಕುರಿತು ಮರೀಚಿಯು "ನೀನು ನನಗೆ ಸಂತುಷ್ಟನಾಗಿ ಅನುಗ್ರಹಿಸಿದಮೇಲೆ ನಿನ್ನ ಪ್ರಸಾದ ಹೊರತು ನನಗೆ

ಬೇರೆ ಇನ್ನೇನಾಗಬೇಕಾಗಿದೆ? ನಾನು ಹರನ ಶಾಪದಿಂದ ವಿಮುಕ್ತನಾದೆನು. ಶಿಲೆಯುಪರವು ಪಾವನಳಾಗಿರಲಿ, ಸಾಕ್ಷಾತ್ ಪಿತೃಮುಕ್ತಿಕರಿಯೂ ಆಗಲಿ" ಎಂದು ಕೇಳಲು "ಹಾಗೆಯೇ ಆಗಲಿ ತಥಾಸ್ತು" ಎಂದು ಹೇಳಿ ಮಾಧವನು ಸ್ವರ್ಗಕೆ ಹೊರಟುಹೋದನು.

ಗಯಾಖ್ಯಾನ ಪಠಣ ಶ್ರವಣಗಳ ಫಲಶ್ರುತಿ

ಈ ಪುಣ್ಯಕರವಾದ ಗಯಾಖ್ಯಾನವನ್ನು ಯಾರು ಶ್ರದ್ಧೆಯಿಂದ ಕೇಳುತ್ತಾರೆಯೋ, ಸತತ ಪಠನ ಮಾಡುತ್ತಾರೆಯೋ, ಅಂಥವರು ಪರಮಗತಿಯನ್ನು ಹೊಂದುವರು. ಸಂಪದ್ಯುಕ್ತವಾದ ಭುಕ್ತಿ ಮುಕ್ತಿಪ್ರದವಾದ ಶ್ರೀಮದ್ಗಯಾ ಮಹಾತ್ಮ್ಯೆಯನ್ನು ಭಕ್ತಿಯಿಂದ ಪುರಾಣ ಹೇಳುವ (ವ್ಯಾಸ) ಪುರುಷನನ್ನು ವಿತ್ತಶಾಠ್ಯ ಮಾಡದೆ, ಲೋಭವನ್ನು ಬಿಟ್ಟು ಗೋ, ಭೂ, ಹಿರಣ್ಯ ವಸ್ತ್ರಾಲಂಕಾರಾದಿಗಳನ್ನು ದಾನ ಕೊಟ್ಟು ಪೂಜಿಸಿದರೆ, ಪುಣ್ಯವನ್ನು ಪಡೆಯುವನು. ರಾಜಸೂಯ, ಅಶ್ವಮೇಧ ಯಾಗಮಾಡಿದ ಫಲವನ್ನು ಅಂಥ ಶ್ರೋತೃವಕ್ತೃಗಳಿಬ್ಬರೂ ಪಡೆಯುವರು.

ಗ್ರಂಥದ ಮಹಿಮೆ

ಯಾರ ಮನೆಯಲ್ಲಿ ಈ ಮಹಾತ್ಮ್ಯೆಯ ಗ್ರಂಥವು ಇರುತ್ತದೆಯೋ ಅವರ ಗೃಹದಲ್ಲಿ ಲಕ್ಷ್ಮೀದೇವಿಯು ಸುಪ್ರಸನ್ನಳಾಗಿ ವಾಸಿಸುವಳು. ಸದಾ ಸಂಪತ್ತಿರುವುದು. ಈ ಪುಣ್ಯಕರ ಉಪಾಖ್ಯಾನವಿರುವವರ ಗೃಹದಲ್ಲಿ ಅಗ್ನಿ, ಚೋರ, ಸರ್ಪಭಯಗಳಿಲ್ಲವು. ಶ್ರಾದ್ಧಕಾಲದಲ್ಲಿ ಉತ್ತಮವಾದ ಗಯಾ ಮಹಾತ್ಮೆಯನ್ನು ಪಠಿಸಿದರೆ ವಿಧಿಹೀನವಾದ ಶಾದ್ಧವೂ, ಸಹ ಗಯಾ ಶ್ರಾದ್ಧಕ್ಕೆ ಸಮಾನವಾಗಿ ಪಿತೃಗಳಿಗೆ ಸಂಪೂರ್ಣ ತೃಪ್ತಿಯನ್ನು ಕೊಡುವುದು.

ಈ ಆಖ್ಯಾನವಿರುವವರ ಮನೆಯಲ್ಲಿ ತ್ರಿಲೋಕದಲ್ಲಿ ಏನೇನು ತೀರ್ಥಗಳಿವೆಯೋ ಆ ಸಕಲ ತೀರ್ಥಾಭಿಮಾನಿ ದೇವತೆಗಳೂ ಅಲ್ಲಿ ವಾಸಿಸು

ವರೆಂತಲೂ ಇದನ್ನು ಪಠಣೆ ಮಾಡಿದರೂ, ಕೇಳಿದರೂ ಅಂಥ ಉಭಯ ಅಧಿಕಾರಿಗಳೂ ಸಂಪೂರ್ಣ ಫಲವನ್ನು ಪಡೆಯುವರೆಂಬುವ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲವೆಂದು ಸನತ್ಕುಮಾರರು ಸಂಗೀತಗುರುಗಳಾದ **ನಾರದರಿಗೆ** ಉಪದೇಶಿಸಿ, ಪುಣ್ಯ ವನಗಳಿಂದ ಕೂಡಿದ ತಮ್ಮ ಆಶ್ರಮಕ್ಕೆ ಹೋದರೆಂದು **ವಾಯುಪುರಾಣ ಶ್ವೇತ ವರಾಹ ಕಲ್ಪದಲ್ಲಿ ವಿಸ್ತಾರವಾಗಿ ಎಂಟು ಅಧ್ಯಾಯಗಳಲ್ಲಿ ಗಯಾ ಮಹಾತ್ಮೆಯು ಹೇಳಲ್ಪಟ್ಟಿದೆ. (ಅ. ಲ.)**

ಅನೇನ ಗಯಾ ಮಹಾತ್ಮ್ಯಕಥನೇನ ಅಸ್ಮದ್ಗುರ್ವಂತರ್ಗತ ಶ್ರೀ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಮಧ್ವವಲ್ಲಭ ಜನಾರ್ದನ ವಾಸುದೇವಾಭಿನ್ನ ಗಯಾ ಗದಾಧರಾತ್ಮಕ ಶ್ರೀ ಬದರೀ ನಾರಾಯಣಃ ಪ್ರಿಯತಾಂ ಪ್ರೀತೋ ವರದೋ ಭವತು.

ಇತಿ ಶಂ ಓಂ ಶಾಂತಿಃ ಓಂ ತತ್ಸತ್

ಶ್ರೀಚೀಮ್ನಹಳ್ಳೀ ಕೃಷ್ಣಾರ್ಯ ಹೃದಬ್ಜಾಮಲಮಂದಿರಃ ।
ಹಯಗ್ರೀವೋ ರಮಾಕಾಂತಃ ಪ್ರಿಯತಾಂ ಸೇವಯಾನಯಾ ॥

ಶ್ರೀ ಕೃಷ್ಣಾರ್ಪಣಮಸ್ತು

ಸುಬೋಧ ಮಾಸಪತ್ರಿಕೆಯು ಡಿಸೆಂಬರು 1965ನೇ ತಿಂಗಳಲ್ಲಿ ಮ. ರಾ. ಶ್ರೀ. ಶ್ರೀಪರ್ಾ ಯಂ. ರಾಮರಾಯರವರಿಂದ ವಿಮರ್ಶೆ

ಶ್ರೀ ಬದರೀಕ್ಷೇತ್ರ ಮಹಾತ್ಮ್ಯೆ

ಶಾಸ್ತ್ರರತ್ನಂ, ವೇದಾಂತ ವಿಶಾರದ, ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು. ಪ್ರಕಾಶಕರು. ಸಿ. ಆರ್. ವೆಂಕಟೇಶ ವಿಠ್ಠಲಾಚಾರ್ಯರು, ಎಂ.ಎ.ಬಿ.ಕಾಂ. ನಂ. ೨೫, ಹನುಮದನ ಸದನಂ, ೬ನೇ ರೋಡು, ಚಾಮರಾಜಪೇಟೆ, ಬೆಂಗಳೂರು ೧/೮. ಕ್ರೌನ್ ೧೮—೬+೧೨+೭೬+xx ಪುಟಗಳು. ಬೆಲೆ: ರೂ. ೧-೨೫.

ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು, ಈವರೆಗೇ ಮರುಚ್ಛಾಸ್ತ್ರಸಾರ ಸಂಗ್ರಹ, ಸದ್ಭಕ್ತಿ ದರ್ಪಣ, ತತ್ತ್ವಮಸಿ ವಿಮರ್ಶೆ ಇತ್ಯಾದಿ ಅನೇಕ ಗ್ರಂಥಗಳನ್ನು ಸಂಸ್ಕೃತ ಮತ್ತು ಕನ್ನಡಭಾಷೆಗಳಲ್ಲಿ ಬರೆದು ವಿಶೇಷರೀತಿಯಲ್ಲಿ ಸಮಾಜಕ್ಕೆ ಧಾರ್ಮಿಕಸೇವೆ ಸಲ್ಲಿಸಿದ್ದಾರೆ. ಪ್ರಕೃತ ಪ್ರಕಟಿಸಿರುವ ಶ್ರೀ ಬದರೀಕ್ಷೇತ್ರ ಮಹಾತ್ಮ್ಯೆ ಎಂಬೀ ಗ್ರಂಥದಲ್ಲಿ ಶ್ರೀ ವಾದಿರಾಜರ ತೀರ್ಥಪ್ರಬಂಧ, ನಾರದೀಯ ಪುರಾಣ, ಸನಕಸಂಹಿತೆ, ಪದ್ಮಪುರಾಣ, ನಾರದ–ಸನತ್ಕುಮಾರರ ಸಂವಾದ ಇತ್ಯಾದಿ ಗ್ರಂಥಗಳಿಂದಲ್ಲೆಲ್ಲಿ ವಿಷಯ ಸಂಗ್ರಹಮಾಡಿ, ವಿಶಾಲ ಬದರೀಕ್ಷೇತ್ರಯಾತ್ರ ವಿಚಾರವಾಗಿ ಶಾಸ್ತ್ರಮುಖದಿಂದ ತಿಳಿಯಬೇಕಾದ ಸಕಲ ವಿಷಯುಗಳನ್ನೂ ವಿಶದೀಕರಿಸಿದ್ದಾರೆ. ಬ್ರಹ್ಮ ಕಪಾಲತೀರ್ಥ, ತೈಮಿಂಗಿಲತೀರ್ಥ, ಹಯಗ್ರೀವತೀರ್ಥ ಇತ್ಯಾದಿ ಹಲವಾರು ಪುಣ್ಯತೀರ್ಥಗಳು, ಪಂಚಶಿಲಾ, ಪಂಚಗಂಗಾ, ಪಂಚಪ್ರಯಾಗ ಇವುಗಳ ವಿವರಗಳು, ಬದರೀಕ್ಷೇತ್ರದಲ್ಲಿ ಅನುಸರಿಸಬೇಕಾದ ನಿಯಮಗಳು ಬದರೀಯಾತ್ರಾ ಮಾಡಬೇಕಾದ ಕ್ರಮ, ದಾನ ಫಲ, ಪಿತೃಶ್ರಾದ್ಧನಿಯಮ ಇತ್ಯಾದಿ ಈ ಯಾತ್ರಾಸಂಬಂಧ ಹಲವು ಉಪಯುಕ್ತ ಶಾಸ್ತ್ರಸಿದ್ಧ ವಿಚಾರಗಳಿಗೆ ಇದು ಕೈಗನ್ನಡಿಯಂತಿದೆ. ಶ್ರೀ ಆಚಾರ್ಯರು ಇದರಲ್ಲಿ ವಿವರಿಸಿರುವಂತೆ ಯಾತ್ರೆ ಮಾಡಲು ಆ ಕ್ಷೇತ್ರ ಪ್ರಾಂತದಲ್ಲಿ ಕೊನೆಯ ಪಕ್ಷ ಒಂದು ತಿಂಗಳಾದರೂ ವಾಸಿಸಿರಬೇಕಾದೀತು. ವೇಗವಾದ ರೈಲು ಮತ್ತು ಬಸ್ ಪ್ರಯಾಣ

ದಿಂದ ಹತ್ತಿಪ್ಪತ್ತು ದಿನಗಳಲ್ಲೇ ಹರಿದ್ವಾರ, ಹೃಷೀಕೇಶ, ಬದರೀ ಕ್ಷೇತ್ರ ಗಳನ್ನು ನೋಡಿಕೊಂಡು ಬರುವ ಯಾತ್ರೆಯು ಈ ಶಾಸ್ತ್ರಸಿದ್ಧ ಯಾತ್ರೆಯನ್ನು ಅಣಕಿಸಿದಂತಿರುವುದು ಮಾತ್ರ. ಇದರಲ್ಲಿ ಬದರೀ ಮತ್ತು ಕೇದಾರನಾಥ ಕ್ಷೇತ್ರಗಳ ಮಹಾತ್ಮ್ಯೆ ಮಾತ್ರವಲ್ಲದೆ, ಹರಿದ್ವಾರವನ್ನು ಬಿಟ್ಟರೆ, ಯಮು ನೋತ್ರಿ, ಗಂಗೋತ್ರಿ, ಕೇದಾರನಾಥ ಇವುಗಳಿಗಿರುವ ದೂರ, ಮಧ್ಯೆ ತಂಗ ಬೇಕಾದ ಸ್ಥಳಗಳು, ಸುತ್ತಮುತ್ತಲಿನ ತೀರ್ಥ – ಕ್ಷೇತ್ರಗಳು – ಇತ್ಯಾದಿ ಅನೇಕ ಉಪಯುಕ್ತ ವಿಚಾರಗಳನ್ನೆಲ್ಲ ಈ ಗ್ರಂಥದಲ್ಲಿ ಶೇಖರಿಸಿ–ಶ್ರದ್ಧಾ ಪೂರ್ವಕ ಯಾತ್ರೆ ಮಾಡ ಬಯಸುವವರಿಗೆ ತಿಳಿದಿರಬೇಕಾದ ಸಕಲ ವಿಷಯ ಗಳನ್ನೂ ವಿವರಿಸಿರುವರು. ಈ ಬದರೀ ಯಾತ್ರೆ ಕೈಪಿಡಿಯೊಂದು ಬಳಿಯಲ್ಲಿ ದ್ದರೆ, ಆ ಪ್ರಾಂತೀಯ ಭಾಷೆ ತಿಳಿಯದೆ, ಅಲ್ಲಿಯ ವಿವರಗಳನ್ನರಿಯದೆ ಪಡ ಬೇಕಾದ ತೊಂದರೆಯಿಂದ ಎಷ್ಟೋಮಟ್ಟಿಗೆ ಮುಕ್ತರಾಗಬಹುದು. ಇದೊಂದು ಶ್ರೀ ಆಚಾರ್ಯರ ಬಹು ಜನೋಪಯುಕ್ತ ಮಹೋಪಕಾರ.

ಶ್ರೀ ಗುರುರಾಜೋ ವಿಜಯತೇ

ಬೆಂಗಳೂರು ಚಾಮರಾಜಪೇಟೆ 97, ಶ್ರೀ ರಾಘವೇಂದ್ರ ಕಾಲೋನಿ ಯಲ್ಲಿರುವ ವಿದ್ವಾನ್ ಶ್ರೀ ಮ. ಸಂ. ವೈ. ಕೃಷ್ಣಾಚಾರ್ಯರು ಬರೆದು ಕಳುಹಿಸಿದ ಅಭಿಪ್ರಾಯಗಳು

ನಮ್ಮ ಮಿತ್ರರಾದ ಶ್ರೀಮತ್ಪೂಜ್ಯ ಚೀಮನಹಳ್ಳಿ ರಘುನಾಥಾಚಾರ್ಯ ರಿಂದ ರಚಿತವಾದ "ಶ್ರೀ ಬದರೀ ಕ್ಷೇತ್ರ ಮಹಾತ್ಮ್ಯೆ" ಎಂಬ ಚಿಕ್ಕ ಗ್ರಂಥ ವನ್ನು ಪರಮಾದರಪೂರ್ವಕವಾಗಿ ವಿಮರ್ಶೆ ಮಾಡಲಾಗಿ, ನಮ್ಮ ಮನಸ್ಸಿನ ಮೇಲೆ ಮೂಡಿದ ಸ್ಥಿರತರ ಪರಿಣಾಮವೇನೆಂದರೆ ಸದರೀ ಶ್ರೀ ಆಚಾರ್ಯರು ಸುಮಾರು ನಾಲ್ಕು ವರ್ಷಗಳ ಕೆಳಗೆ ಸಕುಟುಂಬ ಸಪರಿವಾರರಾಗಿ ಶ್ರೀ ಬದರೀ ಕ್ಷೇತ್ರಯಾತ್ರೆಯನ್ನು ಕ್ರಮವಾಗಿ ಸಾವಧಾನದಿಂದ ಮಾಡುತ್ತಾ, ಅಲ್ಲಿ ಅವ ರಿಗೆ ಆಗಿರುವ ಅನುಭವಾನಂದವನ್ನು ಮನದಲ್ಲಿ ಇರಿಸಿಕೊಂಡು ಅನೇಕ ಪುರಾಣ (ಮತ್ತು ಸ್ಮೃತಿ) ಗ್ರಂಥಗಳಲ್ಲಿ ನಿರೂಪಿತವಾದ ಶ್ರೀ ಬದರೀ ಕ್ಷೇತ್ರದ ಮಹಾತ್ಮ್ಯೆಯನ್ನು ತಮ್ಮ ಅನುಭವಕ್ಕೆ ಸಂವಾದವಾಯಿತೆಂದು

ತುಂಬ ಹರ್ಷೋದ್ರೇಕದಿಂದ ಶ್ರೀ ಬದರೀ ಕ್ಷೇತ್ರ ಯಾತ್ರೆ ಮಾಡಬೇಕೆಂಬುವ ಹಂಬಲವನ್ನು ಸ್ವಜನರ ಮನಸ್ಸಿನಲ್ಲಿ ಉಂಟುಮಾಡಿಕೊಡಬೇಕೆಂಬ ಉದ್ದೇಶ ದಲ್ಲಿ ನಿರಂತರ ಸ್ಮರಿಸುವವರಿಗೂ ಕೂಡ ಶ್ರೀ ವಿಶಾಲ ಬದರೀನಾಥನ ಕೃಪಾ ಕಟಾಕ್ಷವು ಭಕ್ತರಲ್ಲಿ ಉಂಟಾಗಲೆಂಬುದು ಮುಖ್ಯ ಉದ್ದೇಶವು. ಹಾಗೂ ಶ್ರೀ ಬದರೀ ಕ್ಷೇತ್ರ ಯಾತ್ರೆ ಮಾಡುವವರಿಗೆ ಅಲ್ಲಲ್ಲಿರತಕ್ಕ ಮುಖ್ಯ ಶ್ರೀ ಬದರೀನಾಥರ ಸನ್ನಿಧಾನವುಳ್ಳ ಸ್ಥಳಗಳ ದಿಙ್ಮಾತ್ರ ಪ್ರದರ್ಶನವೂ ವಿಸ್ತಾರ ವಾಗಿ ಉಲ್ಲೇಖಿಸಿರುತ್ತದೆ. ಇದು ಶ್ರೀ ಹರಿಗುರು ಭಕ್ತರಿಗೆ ತುಂಬ ಉಪ ಯೋಗಗೊಳಿಸಲು ಯೋಗ್ಯ ಕೈಪಿಡಿ (Ghide Book) ಎಂದು ಹೇಳಲು ಅಭ್ಯಂತರವಿಲ್ಲವು.

19-12-1965. (Sd.) Krishnachara Waikar.

T. T. SHARMAN — *Ex Officer-in-charge*

Mysore State Committee History of the Freedom Movement in India

***Ex Presdent*: Kannada Sahitya Parishat, Bangalore.**

***Founder - Editor*: Visvakarnataka.**

***Ex Chairmn*: Kannada Typewriter Commettee, (Governmet of Mysore)**

***Ex President*: Mysore State Journalists Conference, Bangalore.**

***Vice-President*: All Karnataa Border Action Committee, Bangalor.**

ಭಾರತದ ಭಾಗ್ಯ, ಕರ್ನಾಟಕದ ಮಹಾಭಾಗ್ಯ; ಚೀ ಮ ನ ಹ ಳ್ಳಿ ವಿದ್ವಾನ್ ರಘುನಾಥಾಚಾರ್ಯರರಂತಹ "ಪಂಡಿತ ಮಾರ್ತಾಂಡ"ರಿನ್ನೂ ಕೆಲವರು ನಮ್ಮಲ್ಲಿದ್ದಾರೆ. ಭಾರತದ ಧರ್ಮ – ದರ್ಶನಗಳ ಅಧ್ಯಯನವನ್ನು ಬಿಷ್ಕ ಪರಂಪರಾಗತ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತಿರುವ

ಹಲವೇ ಹಲವರಲ್ಲಿ ಶ್ರೀವರ್ಮಾ ಚೀಮನಹಳ್ಳಿ ಆಚಾರ್ಯರೊಬ್ಬರು. ರಾಜ ಪ್ರೋಷಣೆಯ ಕಾಲವಾಯಿತು ; ಗುರುಜನ ಪ್ರೋಷಣೆಯೂ ಕುಗ್ಗುತ್ತ ಬಂತು. ಆದರೂ ಆಚಾರ್ಯರಿಗೆ "ಇಲ್ಲ"ವೆಂಬ ಚಿಂತೆಯಿಲ್ಲ. ಪ್ರಭುತ್ವ ಪುರಸ್ಕಾರ ತಿರಸ್ಕಾರಗಳವರ ದೃಷ್ಟಿಪಥದಲ್ಲೇ ಇಲ್ಲ.

ಧರ್ಮಪ್ರಚಾರಕಾರ್ಯ ಹೇಗಿ ನಡೆಯಬೇಕು ; ಆಸಕ್ತಿ ಹೇಗೆ ವಿಸ್ತಾರಗೊಳ್ಳಬೇಕು ; ನಿರ್ಮಲ ಸಾಹಿತ್ಯ ಸೃಷ್ಟಿ ಹೇಗಾಗಬೇಕು ; ಸಂಸ್ಕೃತಿಯ ಸಂರಕ್ಷಣೆಯಾಗಬೇಕು. ಇವೇ ಆಚಾರ್ಯರನ್ನು ಸದಾ ಬಾಧಿಸುತ್ತಿರುವುದು. ಈ ಪವಿತ್ರ ಕಾರ್ಯಸಾಧನೆಯೊಂದೇ ಅವರ ಜೀವನ ಧ್ಯೇಯ. ಈ ಕಾರ್ಯ ಸಾಧನೆಗೆ ಸಹಾಯ ಯಾವ ಮೂಲೆಯಿಂದಲೇ ಬರಲಿ ಅವರು "ಬೇಡ" ಅನ್ನುವುದಿಲ್ಲ. ಎಲ್ಲೂ, ಯಾರಲ್ಲೂ, "ಬೇಡು"ವುದಿಲ್ಲ. ಧರ್ಮಪ್ರಸಂಗ, ಧರ್ಮಪ್ರಸಾರ, ನಡೆಸುತ್ತಿದ್ದಾರೆ.

"ಸದ್ಭಕ್ತಿ ದರ್ಪಣ"ವೆಂಬ (ಸಂಸ್ಕೃತ – ಕನ್ನಡ) ಪುಸ್ತಕವಾದರೋ ಓದಲು ಬರುವ ಪ್ರತಿಯೊಬ್ಬನ ಕೈಯ್ಯಲ್ಲೂ ಇರಬೇಕು ; ಅದನ್ನು ಪ್ರತಿನಿತ್ಯವೂ ಓದಬೇಕು. "ಸೆಕ್ಯುಲರ್ ಸ್ಟೇಟ್" ಕಲ್ಪನೆ, ಸ್ಥಾಪನೆ, ಧರ್ಮವನ್ನು ಜನರ ನಿತ್ಯಜೀವನದ ಸಕಲ ಕ್ಷೇತ್ರಗಳಿಂದಲೂ ದೂರವಾಗಿರಿಸಿದೆ. ಪ್ರಭುತ್ವ ಸಂಬಂಧವಾದ ಸಂಸ್ಥೆಗಳ ಅಂಚು-ಚುಂಚುಗಳ ಬಳಿಯಲ್ಲೂ ಧರ್ಮದ ಗಾಳಿ, ದೇವರಗಾಳಿ, ಸುಳಿದಾಡುವಹಾಗಿಲ್ಲ. ಶಾಲಾ ಕಾಲೇಜುಗಳಲ್ಲಿಲ್ಲ. ಮನೆಗಳಲ್ಲೂ ಆ ಗಾಳಿಯಾಟ ಕಡಿಮೆಯಾಗುತ್ತಿದೆ.

ಹೀಗಾಗಬಾರದು ; ಧರ್ಮದ ಸೇವೆ, ಧರ್ಮಪ್ರಚಾರ, ನಡೆಯುತ್ತಲೇ ಹೋಗಬೇಕು.

"ಧರ್ಮಾದರ್ಥಃ ಪ್ರಭವತಿ ಧರ್ಮಾತ್ ಪ್ರಭವತೇ ಸುಖಂ ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥"

ಇದು ಆಚಾರ್ಯರನ್ನು ಧರ್ಮದ ಸೇವೆಗೆ ಕಟ್ಟಿಹಾಕಿದೆ. ಆಚಾರ್ಯರ "ಸದ್ಭಕ್ತಿ ದರ್ಪಣ"ವನ್ನು ಮುಖ್ಯವಾಗಿ ಶಿಕ್ಷಣ ಶಾಖೆಯವರು ಪೂರ್ಣ

ಉಪಯೋಗಮಾಡಿಕೊಳ್ಳಬೇಕು. ಆಚಾರ್ಯರ ಜ್ಞಾನ, ಅನುಭವ, ಸಾಧನದ, ಫಲವೀಗ್ರಂಥವೆಂದು ಹೇಳಿದರೆ ಸಾಕು.

"ಶ್ರೀ ಬದರೀ ಕ್ಷೇತ್ರ ಮಹಾತ್ಮ್ಯೆ" ಆಚಾರ್ಯರ ಯಾತ್ರಾಫಲ. ಖಂಡಿತವಾಗಿಯೂ "ಇದು ಬರೆ ಗೈಡ್" ಎಂಬ ಭ್ರಮೆಗೆ ಒಳಗಾಗಬಾರದು. ಆ ಗುಂಪಿನ ಸಾಹಿತ್ಯವಲ್ಲವಿದು; ಇದು ಆಸ್ತಿಕರ, ಸಾಧಕರ "ಜ್ಞಾನದೀಪಿಕೆ" ಇದನ್ನೋದುವಾಗ "ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ" ಎಂಬ ಮಾತು ಮೇಲಿಂದ ಮೇಲೆ ನೆನಪಿಗೆ ಬರುತ್ತದೆ. ನಾನಾ ತೀರ್ಥಗಳ, ಧಾರೆಗಳ, ಮಠಗಳ, ಶಿಲೆಗಳ, ಆಶ್ರಮಗಳ "ಒಳಗನ್ನೂ, ಹೊರಗನ್ನೂ" ಚೆನ್ನಾಗಿ ತಿಳಿದುಕೊಳ್ಳಲು ಸಹಾಯವಾಗುತ್ತದೆ. ಶ್ರದ್ಧೆಯಿಂದ ಈ ಪುಸ್ತಕವನ್ನೋದಿದರೆ "ದುರ್ಜನ"ರೂ "ಸಜ್ಜನ"ರಾಗಿ ಪರಿವರ್ತನವಾಗುತ್ತಾರೆ; ಅಂತಹ ಪರಸುಗಲ್ಲಿದು!

ಶ್ರೀ ರಘುನಾಥಾಚಾರ್ಯರೊಂದಿಗೆ ಕಾಲು ಘಂಟೆಯ ಕಾಲ ಕಳೆದರೆ ಸಾಕು ಪುಣ್ಯೋದಕ ಸ್ನಾನ ಫಲಪ್ರಾಪ್ತಿಯಾಗುತ್ತದೆ. ಆಚಾರ್ಯರು ಮಹಾ ವಿದ್ವಾಂಸರು, ಮಹಾ ವಾಗ್ಮಿಗಳು, ಎಲ್ಲಕ್ಕೂ ಹೆಚ್ಚಾಗಿ "ಪರಮ ಸುಲಭರು".

ಕನ್ನಡ ಬಲ್ಲ ಜನರಿಗೆ ಆಚಾರ್ಯರ ಸಾಹಿತ್ಯಸೇವೆ ಧರ್ಮದ ಸೇವೆ, ಸಾಹಿತ್ಯದ ಪರಮೋದ್ದೇಶವಾದರೂ ಮತ್ತೇನು?

ತಿರುಮಲೆ ತಾತಾಚಾರ್ಯ ಶರ್ಮ

3-12-1965.



ಪರಿಶಿಷ್ಟ (ಪುಟ ೧೯ ನೋಡಿ)

ಪಿತೃಷೋಡಶದಲ್ಲಿ

ಗುರುದಾರರತಾ ಮೂಢಾಃ ಪರದಾರರತಾಶ್ಚ ಯೇ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಬ್ರಹ್ಮಸ್ವಹಾರಿಣೋ ಯೇ ಚ ಸುರಾಪಾಸ್ಸ್ವರ್ಣಹಾರಿಣಃ ।
ತೇಷಾಮುದ್ಧರಣಾರ್ಥಾಯ ಇಮಂಪಿಂಡಂದದಾಮ್ಯಹಂ ॥

ಚಂಡಾಲೈಶ್ಚ ಹತಾ ಮಾರ್ಗೇ ಅಶೌಚ ಶಯನೇಮೃತಾಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಭ್ರೂಣಬ್ರಹ್ಮ ವಧೋಪೇತಾ ಯೇ ಕೇಚಿತ್ಮಿತರೋ ಮಮ ।
ಅಗಮ್ಯಾಗಮನೇ ಸಕ್ತಾಪಿತೇಭ್ಯಃ ಪಿಂಡಂ ದದಾಮ್ಯಹಂ ॥

ಕುಷ್ಠಾಪಸ್ಮಾರಲೂತಾಭಿಃ ಭಗಂಧರ ಮಹೋದರೈಃ ।
ಗಂಡಮಾಲಾ ಪಾಂಡುರೋಗ ಕ್ಷಯರೋಗೈಶ್ಚ ಯೇ ಹತಾಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಮಾತೃಷೋಡಶದಲ್ಲಿ

ಗರ್ಭಸ್ಥಿ ಗಮನೇ ದುಃಖೇ ವಿಷಮೇ ಭೂರಿವರ್ತ್ಮನಿ ।
ತಸ್ಯಾನಿಷ್ಕ್ರಮಣಾರ್ಥಾಯ ಮಾತೃಪಿಂಡಂ ದದಾಮ್ಯಹಂ ॥

ಯಾವತ್ಪುತ್ರೋ ನ ಭವತಿ ತಾವನ್ಮಾತುಶ್ಚ ಶೋಚನಮ್ ।
ತಸ್ಯಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಶೈಥಿಲ್ಯೈಪ್ರಸವೈಃ ಪ್ರಾಪ್ತೇ ಮಾತಾನಿಂದತಿ ತತ್ಕೃತವ್ ।
ತಸ್ಯಾಃ ಉದ್ಧರಣಾರ್ಥಾಯ ಇಮಂಪಿಂಡಂ ದದಾಮ್ಯಹಂ ॥

ಸಂಪೂರ್ಣ ದಶಮೇಮಾಸಿ ಮಾತಾ ಕ್ರಂದತಿ ದುಷ್ಕೃತಂ ।
ತಸ್ಯಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ದಿವಾರಾತ್ರೌ ಚ ಯಾ ಮಾತಾ ಸ್ತನಂ ದತ್ವಾ ಚಪಾಲಿತಾ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಅಗ್ನಿನಾ ಶೋಷಿತೇರ್ದೇಹೇ ತ್ರಿರಾತ್ರೋಪೋಷಣೇನ ಚ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಮಾಸಿ ಮಾಸಿನಿ ದಾರ್ಘೇಚ ಶರೀರಾತಪದುಃಖಿತಾ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದ್ಯಾಮ್ಯಹಂ ॥

ಗಾತ್ರಭಂಗೋ ಭವೇನ್ಮಾತುಃ ಘೋರಬಾಧ್ಯೇಪ್ರಪೀಡ್ಯತೆ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಪಾದಾಭ್ಯಾಂ ಜನಯೇತ್ಪುತ್ರೋ ಜನನೀ ಪರಿವೇದನಂ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಅಲ್ಪಾಹಾರಗತಾ ಮಾತಾ ಯಾವತ್ಪುತ್ರೋಸ್ಮಿ ಬಾಲಕಃ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಪಿಬಂತಿ ಕಟುಕದ್ರವ್ಯಂ ಮಾತಾ ಯಸ್ಯಹಿತಾಯ ಚ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಪುತ್ರೋ ವ್ಯಾಧಿ ಸಮಾಯುಕ್ತೋ ಮಾತಾ ಕ್ರಂದನಕಾರಿಣೀ ।
ತಸ್ಯಾ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಕ್ಷುಧಯಾ ಪೀಡಿತೇಪುತ್ರೇಹ್ಯನಂ ಮಾತಾ ಪ್ರಯಚ್ಛತಿ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥

ಮಾಸೇ ಮಾಸೇ ಕೃತಂ ಕಷ್ಟಂ ವೇದಾನಾ ಪ್ರಸವೇಷು ಚ ।
ತಸ್ಯಾಃ ಉದ್ಧರಣಾರ್ಥಾಯ ಇಮಂ ಪಿಂಡಂ ದದ್ಯಾಮ್ಯಹಂ ॥

ಯಮದ್ವಾರೇ ಪಥೇಃಘೋರೇ ಪಥಿ ಮಾತುಶ್ಚ ಶೋಚನಮ್ ।
ತಸ್ಯಾಃ ವಿಷ್ಕ್ರಮಣಾರ್ಥಾಯ ಮಾತೃ ಪಿಂಡಂ ದದಾಮ್ಯಹಂ ॥

ಇದೇ ಗ್ರಂಥಕರ್ತರಿಂದ ರಚಿತಗಳಾದ ಶ್ರೀಮನ್ಮರುಚ್ಛಾಸ್ತ್ರಸಾರ ಸಂಗ್ರಹ ಮತ್ತು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿರುವ ಸದ್ಭಕ್ತಿ ದರ್ಪಣ ಗ್ರಂಥಗಳ ವಿಷಯದಲ್ಲಿ, ಕೆಲವು ಅಭಿಪ್ರಾಯಗಳು ಮತ್ತು ವಿಮರ್ಶೆಗಳು.

K. T. PANDURANGI, M.A.
Vidwan Siromani,
Head of the Dept. of Sanskrit.

Govt. Art & Scince College,
Bangalore, 28-5-1965.

ಶಾಸ್ತ್ರರತ್ನಂ, ವೇದಾಂತವಿಶಾರದ ಇತ್ಯಾದಿ ಬಿರುದಾಂಕಿತರಾದ ಶ್ರೀ ಚೀಮನಹಳ್ಳಿ ರಘುನಾಥಾಚಾರ್ಯರು ನನಗೆ ಕಳೆದ ಹತ್ತು ಹನ್ನೆರಡು ವರುಷ ಗಳಿಂದ ಪರಿಚಿತರಾಗಿರುವರು. ಅವರು ಪ್ರಕಾಶಿಸುತ್ತಿದ್ದ "ಸರ್ವಜ್ಞ ಸಂದೇಶ" ವೆಂಬ ದ್ವೈತ ವೇದಾಂತ ಮಾಸಪತ್ರಿಕೆಯು ತುಂಬ ಉಪಯು ಕ್ತವೂ, ಜನಪ್ರಿಯವೂ ಆಗಿತ್ತು. "ಶ್ರೀಮನ್ ಮರುತ್ ಶಾಸ್ತ್ರಸಾರ ಸಂಗ್ರಹ" "ತತ್ತ್ವಮಸಿ" "ದ್ವೈತಾದ್ವೈತ ಪ್ರಶ್ನೋತ್ತರ ಮಾಲಿಕಾ" ಇತ್ಯಾದಿಯಾದ ಅವರ ಗ್ರಂಥಗಳು ದ್ವೈತ ವೇದಾಂತದ ಪ್ರಮೇಯಗಳನ್ನು ಸುಲಲಿತವಾಗಿಯೂ, ಪ್ರಮಾಣಬದ್ಧವಾಗಿಯೂ ವಿವರಿಸುತ್ತವೆ. ಶ್ರೀ ರಘು ನಾಥಾಚಾರ್ಯರು ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲಿಯೂ ಸಿದ್ಧ ಹಸ್ತರಾಗಿರುವರು.

"ಸದ್ಭಕ್ತಿದರ್ಪಣ"ವೆಂಬ ಅವರ ಪ್ರಕೃತ ಗ್ರಂಥವು ಭಕ್ತಿಯ ಸ್ವರೂಪ, ಅದರ ಪ್ರಕಾರಗಳು ಸಾಧನಗಳಲ್ಲಿ ಭಕ್ತಿಯ ಸ್ಥಾನ, ಭಕ್ತಿಯ ವಿಷಯಕವಾದ ಪ್ರಮಾಣಗಳು ಇತ್ಯಾದಿಗಳನ್ನು ಸುಲಭವಾಗಿಯೂ, ಶಾಸ್ತ್ರ ಸಮ್ಮತವಾಗಿಯೂ ಚರ್ಚಿಸುತ್ತದೆ. ಭಕ್ತಿಯು ಭಗವಂತನ ಅನುಗ್ರಹಕ್ಕೂ, ಮುಕ್ತಿಗೂ ಸಾಧನವೆಂದು ಅನೇಕ ಮತದವರು ಒಪ್ಪಿಕೊಂಡಿದ್ದರೂ ಅದರ ಸ್ವರೂಪ ಮತ್ತು ಸಾಧನವಾಗುವ ರೀತಿಗಳಲ್ಲಿ ಅಭಿಪ್ರಾಯ ಭೇದಗಳಿವೆ. ಆದುದರಿಂದ ಶ್ರೀಮದಾಚಾರ್ಯರ ಸಿದ್ಧಾಂತಕ್ಕನುಸರಿಸಿ ಸಪ್ರಮಾಣವಾ ಗಿಯೂ, ಸೋದಾಹರಣವಾಗಿಯೂ ಭಕ್ತಿಯ ಸ್ವರೂಪವನ್ನು ಚರ್ಚಿಸುವ ಈ ಗ್ರಂಥವು ಮಹತ್ವವುಳ್ಳದ್ದಾಗಿದೆ. ಶ್ರೀ ರಘುನಾಥಾಚಾರ್ಯರು ಶ್ರಮಪಟ್ಟು

ರಚಿಸಿದ ಈ ಗ್ರಂಥವನ್ನು ಸಕಲರೂ ಆದರದಿಂದ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ.

ಭಾಷೆ ಮತ್ತು ವಿಷಯಗಳಮೇಲೆ ಇಷ್ಟೊಂದು ಪ್ರಭುತ್ವವನ್ನು ಪಡೆದ ಅವರು ಇನ್ನೂ ಅನೇಕ ಉಪಯುಕ್ತ ಗ್ರಂಥಗಳನ್ನು ರಚಿಸಲೆಂದು ಹಾರೈಸುವೆನು.

(Sd.) ಪ್ರೊಫೆಸರ್ ಕೆ. ಟಿ. ಪಾಂಡುರಂಗಿ

ಸಂಯುಕ್ತ ಕರ್ಣಾಟಕ ಸಾಪ್ತಾಹಿಕಮಂಜರೀ

ತಾ॥ ೧೪-೩-೬೫ನೇ ಭಾನುವಾರ

ದ್ವೈತ ತತ್ವ ಪ್ರತಿಪಾದಕ ಗ್ರಂಥಗಳು

ಶ್ರೀ. ಮ. ಸಂ. ವಿದ್ವಾನ್ ಹ. ರಾ. ಪುರೋಹಿತರು ಇವರಿಂದ ವಿಮರ್ಶೆ.

ಶ್ರೀಮನ್ಮರುಚ್ಛಾಸ್ತ್ರ ಸಾರಸಂಗ್ರಹಃ (ಸಂಸ್ಕೃತ)

ಗ್ರಂಥಕರ್ತರು ಶಾಸ್ತ್ರರತ್ನಂ ಚೀಮನಹಳ್ಳಿ ರಘುನಾಥಾಚಾರ್ಯರು. ಕ್ರೌನ್ ಪುಸ್ತಕದ ೧೨+೪೪ ಪುಟಗಳು. ಬೆಲೆ ಎಂಟಾಣೆ. ಪ್ರಕಾಶಕರು ಶ್ರೀ ಸಿ. ಆರ್. ವೆಂಕಟೇಶ ವಿಠ್ಠಲಾಚಾರ್ಯರು ನಂ. ೨೯, ಹಯವದನ ೬ನೇ ಬೀದಿ, ಚಾಮರಾಜಪೇಟೆ ಬೆಂಗಳೂರು – ೧೮.

ವೇದಾಂತ ವಿಶಾರದಾದಿ ಅನೇಕ ಬಿರುದಾಂಕಿತ ಶ್ರೀ ಚೀಮನಹಳ್ಳಿ ರಘುನಾಥಾಚಾರ್ಯರು ಚಿಕ್ಕದಾದರೂ ದ್ವೈತ ಮತದ ರಹಸ್ಯವನ್ನು ಸೂರೆ ಮಾಡುವ ಈ ಪುಸ್ತಿಕೆಯನ್ನು ಬರೆದು ತತ್ತ್ವಗಳನ್ನು ತಿಳಿದುಕೊಳ್ಳಬಯಸುವವರಮೇಲೆ ಉಪಕಾರ ಮಾಡಿರುವರು. ಶ್ರೀ ಮಧ್ವಾಚಾರ್ಯರು ಬರೆದಿರುವ ೩೨ ಶ್ಲೋಕಗಳುಳ್ಳ ಶ್ರೀ ಅನುಭಾಷ್ಯದ ೨ನೇ ಅಧ್ಯಾಯದಲ್ಲಿಯ 'ಮುಖ್ಯಪ್ರಾಣವಶೇ ಸರ್ವಂ ಸ ವಿಷ್ಣೋರ್ವಶಗಃ ಸದಾ' ಎಂಬ ಶ್ಲೋಕಾರ್ಧವನ್ನು ಎತ್ತಿಕೊಂಡು ಆಚಾರ್ಯರು ಈ ಪುಟ್ಟ ಪ್ರಬಂಧವನ್ನು ಬರೆದಿರುವರು. ಈ ಅನುಭಾಷ್ಯವು ಚಿಕ್ಕದಾಗಿದ್ದರೂ ಬಹ್ವರ್ಥಗರ್ಭಿತವಾಗಿರುವುದು. ಇದಕ್ಕೇನೇ ಶ್ರೀ ರಾಘವೇಂದ್ರ ಗುರುಸಾರ್ವಭೌಮರು 'ತತ್ತ್ವಮಂಜರಿ' ಎಂಬ ದಿವ್ಯ ಟಿಪ್ಪಣಿಯನ್ನು ಬರೆದಿರುವರು.

ಚೀಮನಹಳ್ಳಿ ಆಚಾರ್ಯರು ಅನೇಕ ಆಧಾರಗಳನ್ನೂ ಪ್ರಮಾಣಗಳನ್ನೂ ತೋರಿಸಿಕೊಟ್ಟು ಈ ಪುಟ್ಟ ಪ್ರಬಂಧದಲ್ಲಿ ಸಿದ್ಧಾಂತವನ್ನು ಸ್ಥಾಪಿಸಿರುವರು.

ಈ ಪುಸ್ತಕದ ಹೆಸರು ಸೂಚಿಸುವಂತೆ ನಿಜವಾಗಿ ಇದು ಮರುಚ್ಛಾಸ್ತ್ರದ ಸಾರ ಸಂಗ್ರಹವೇ ಆಗಿದೆಂಬುದು ಸುಸ್ಪಷ್ಟ. ಇದರಲ್ಲಿ ಬಳಸಿದ ಸಂಸ್ಕೃತ ಎಷ್ಟೇ ಸರಳವಾಗಿದ್ದರೂ ಇಂಥ ಉಪಯುಕ್ತ ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸುವುದು ಹೆಚ್ಚು ಅವಶ್ಯಕ. ಆದುದರಿಂದ ಆಚಾರ್ಯರು ಪ್ರಕಟಿಸಲಿರುವ ಇದರ ದ್ವಿತೀಯ ಪರಿಚ್ಛೇದದ ಜೊತೆಯಲ್ಲಿ ಕನ್ನಡದಲ್ಲಿಯೂ ಈ ಸಾರ ಸಂಗ್ರಹವನ್ನು ಪ್ರಕಟಿಸಿ ಸಂಸ್ಕೃತ ತಿಳಿಯದಿದ್ದವರಿಗೆ ಶ್ರೀಮದಾಚಾರ್ಯರ ಶಾಸ್ತ್ರದ ಪರಿಚಯವಾಗುವಂತೆ ನೋಡಿಕೊಳ್ಳಬೇಕೆಂದು ಕೋರಲಾಗಿದೆ.

ಸಂಯುಕ್ತ ಕರ್ಣಾಟಕದ ಪುಟ 5 ಸಾರಸ್ವತ ಲೋಕ ವಿಭಾಗದಲ್ಲಿ

ತಾ|| 14–6–1965ರಲ್ಲು ವಿಮರ್ಶೆ

ಸದ್ಭಕ್ತಿದರ್ಪಣಂ (ಸಂಸ್ಕೃತ ಭಾಷೆ)

ಲೇಖಕರು: ಶಾಸ್ತ್ರರತ್ನಂ ವೇದಾಂತ ವಿಶಾರದ ಚೀಮನಹಳ್ಳಿ ರಘುನಾಥಾಚಾರ್ಯರು; ಪ್ರಕಾಶಕರು: ಶ್ರೀ ಸಿ. ಆರ್, ವೆಂಕಟೇಶ ವಿಠಲಾಚಾರ್ಯ, ನಂ. ೨೯, ಹಯವದನ ಸದನ, ೬ನೇ ರಸ್ತೆ ಚಾಮರಾಜಪೇಟೆ, ಬೆಂಗಳೂರು ೧೮. ೮೪ ಪುಟಗಳು; ಬೆಲೆ: ೧ ರೂ. ೭೫ ಪೈಸ.

ಮುಕ್ತಿಯನ್ನು ಪಡೆಯಲು ಸದ್ಭಕ್ತಿಯೇ ಮುಖ್ಯ ಸಾಧನವೆಂಬುದನ್ನು ಪ್ರಮಾಣಪೂರ್ವಕವಾಗಿ ತಿಳಿಸುವ ಉತ್ಕೃಷ್ಟ ಗ್ರಂಥ "ಸದ್ಭಕ್ತಿದರ್ಪಣ".

ಭಕ್ತಿಯ ಲಕ್ಷಣಗಳನ್ನು ವಿವರಿಸಿ, ಸಾಧಾರಣ, ಪಕ್ವ, ಪರಿಪಕ್ವ ಮತ್ತು ಅತಿ ಪರಿಪಕ್ವಗಳೆಂಬ ಭಕ್ತಿಯ ನಾಲ್ಕು ಘಟ್ಟಗಳನ್ನು ವಿಶ್ಲೇಷಿಸಿರುವ ಪಂಡಿತ ಮಾರ್ತಾಂಡೋಪನಿಷದ್ರತ್ನಾಕರ, ತತ್ವ ಚಿಂತಾಮಣಿ, ಸಾಹಿತ್ಯ ರತ್ನಂ, ಜ್ಞಾನಗುಣಾಕರ ಇತ್ಯಾದಿ ಬಿರುದಾಂಕಿತರಾದ ಚೀಮನಹಳ್ಳಿ ರಘುನಾಥಾಚಾರ್ಯರು ಮುಕ್ತಿಗೆ ಪ್ರಧಾನ ಸಾಧನವಾದ ಭಕ್ತಿಯೇ ಮೋಕ್ಷಾನಂತರ ಸಾಧ್ಯರೂಪವೆಂತಲೂ, ಪೂರ್ಣ ಭಕ್ತಿಗೇ ಸುಖ ಸಾಧ್ಯತ್ವದಿಂದ ಶ್ರೇಷ್ಠತ್ವ ನೆಂಬ ವಿಚಾರವನ್ನು ಮನಮುಟ್ಟುವಂತೆ ನಿರೂಪಿಸಿದ್ದಾರೆ.

ಭಗವದ್ಗೀತೆ ಗೀತಾಭಾಷ್ಯ ವೇದಗಳು, ಉಪನಿಷತ್ತುಗಳು, ಬ್ರಹ್ಮ ಸೂತ್ರಗಳು, ನ್ಯಾಯಸುಧಾ, ನ್ಯಾಯದೀಪಿಕಾ, ನ್ಯಾಯವಿವರಣ, ತತ್ವ ಪ್ರಕಾಶಿಕಾ, ತಂತ್ರಸಾರ ಮುಂತಾದ ಅಮೂಲ್ಯ ಗ್ರಂಥಗಳಿಂದ ಹಲವಾರು ವಾಕ್ಯಗಳನ್ನು ಉದ್ಧರಿಸಿ ಶ್ರೀ ರಘುನಾಥಾಚಾರ್ಯರು ತಮ್ಮ ವಿಚಾರಧಾರೆ ಯನ್ನು ಸಮರ್ಥಿಸಿದ್ದಾರೆ. ಸಂಸ್ಕೃತ ಭಾಷೆ ಬಲ್ಲವರಿಗೆ ಮಾತ್ರ ಅರ್ಥವಾ ಗುವ ಈ ಶ್ರೇಷ್ಠ ಗ್ರಂಥವನ್ನು ಕನ್ನಡದಲ್ಲಿಯೂ ರಚಿಸುವುದು ಅಗತ್ಯ. ಕನ್ನಡವನ್ನು ಮಾತ್ರ ಬಲ್ಲ ಭಕ್ತಿ ಮಾರ್ಗತತ್ವ ಜಿಜ್ಞಾಸುಗಳಿಗೆ ಉಪಕಾರ ವಾಗುವಂತಹ ಈ ಕಾರ್ಯವನ್ನು ಈ ವಿದ್ವನ್ಮಣಿಗಳು ಮಾಡಿಕೊಡುವರೆಂದು ಆಶಿಸುತ್ತೇವೆ.

(Sd.) ಶ್ಯಾಮ್

ಮೈಸೂರು "ಸಾಧ್ವಿ" ಪತ್ರಿಕೆಯಲ್ಲಿ ತಾ|| 5–7–1965 ರಲ್ಲಾ ವಿಮರ್ಶೆ

ಸದ್ಭಕ್ತಿದರ್ಪಣ (ಕನ್ನಡ)

ಬೆಂಗಳೂರಿನಲ್ಲಿರುವ ಶಾಸ್ತ್ರ ರತ್ನಂ ವೇದಾಂತ ವಿಶಾರದ ವೇ|| ಚೀಮನ ಹಳ್ಳಿ ರಘುನಾಥಾಚಾರ್ಯರು ಹಿಂದೆ ಸಂಸ್ಕೃತ ಭಾಷೆಯಲ್ಲಿ ಪ್ರಕಟಿಸಿದ್ದ ಮೇಲ್ಕಂಡ ನಾಮಾಂಕಿತ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಈಗ ರಚಿಸಿ ಪ್ರಕಟಿಸಿರುತ್ತಾರೆ. ಅದರ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ. ಉಡುಪಿ ಪುತ್ತಿಗೆ ಮಠಾಧೀಶರಾದ ಶ್ರೀ. ಶ್ರೀ. ಸುಜ್ಞಾನೇಂದ್ರ ತೀರ್ಥ ಶ್ರೀಪಾ ದಂಗಳವರು ಗ್ರಂಥಕ್ಕೆ ಶುಭಾಶಯವನ್ನಿತ್ತು, ಜ್ಞಾನಪೂರ್ವಕ ಭಕ್ತಿಯೇ ಶಾಶ್ವತ ಸುಖ ಪ್ರಾಪ್ತಿಗೆ ಉಪಾಯವೆಂದು ಶ್ರೀ ಮಧ್ವಾಚಾರ್ಯರು ಸಾರಿರುವ ಅಂಶವನ್ನು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ವಿವರಿಸಿರುವುದನ್ನು ಉಲ್ಲೇಖಿ ಸಿರುತ್ತಾರೆ. ಭಕ್ತಿಯಃ ಬಹು ಮುಖ ಶೋಧನೆಯಲ್ಲಿ ಗ್ರಂಥಕರ್ತರು ಜಿಜ್ಞಾ ಸುಗಳಿಗೆ ವಿಶೇಷ ಸಹಾಯ ಮಾಡಿರುತ್ತಾರೆಂದು ಅವರು ಸೂಚಿಸಿರುವರು.

ಗ್ರಂಥಕ್ಕೆ ಶ್ರೀ ಕುಂದಾಪುರ ವ್ಯಾಸರಾಜ ಸಂಸ್ಥಾನದ ಸಾಗರಕಟ್ಟೆ ಸ್ವಾಮಿಗಳವರೂ, ವೇದಾಂತ ವಿದ್ವಾನ್ ಕಾಪು ಹಯಗ್ರೀವಾಚಾರ್ಯರೂ,

ಕುಂಭಕೋಣೆಯ ವ್ಯಾಸರಾಜ ಮಠದ ಉಪನ್ಯಾಸ ರತ್ನಾಕರ ವಿ. ಎಂ. ರಾಮರಾಯರೂ ಮತ್ತು ಬೆಂಗಳೂರಿನ ನ್ಯಾಯ ವೇದಾಂತ ವಿದ್ವಾನ್ ವೇ|| ಯಲಿಮೆಲಿ ಡಿ. ಎಸ್. ವಾಸುದೇವಾಚಾರ್ಯರೂ ಪ್ರಶಂಸಾ ನುಡಿಗಳನ್ನು ಬರೆದಿರುವರು.

ಮುಕ್ತಿಗೆ ಪ್ರಧಾನ ಸಾಧನವಾದ ಭಕ್ತಿಯೇ ಮೋಕ್ಷಾನಂತರ ಸಾಧ್ಯರೂಪವೆಂತಲೂ, ಪೂರ್ಣ ಭಕ್ತಿಗೇ ಪೂರ್ಣ ಸುಖಸಾಧ್ಯತ್ವದಿಂದ ಶ್ರೇಷ್ಠತ್ವವಿರುವುದೆಂತಲೂ ಗ್ರಂಥಕರ್ತರು ನಿರೂಪಿಸಿರುತ್ತಾರೆ. ವಿವಿಧ ತೆರನಾದ ಭಕ್ತಿಗಳ್ಯಾವುವೆಂಬುದನ್ನೂ ನಿರೂಪಿಸಲಾಗಿದೆ. ಇದರ ಪ್ರಯೋಜನವನ್ನು ಆಸ್ತಿಕರೆಲ್ಲರೂ ಪಡೆದುಕೊಳ್ಳಲೆಂದು ಹಾರೈಸುತ್ತೇವೆ.

ಈ ಗ್ರಂಥವು ನಂ. ೨೯, ಹಯವದನ ಸದನ, ೬ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮. ಈ ವಿಳಾಸದಲ್ಲಿ ದೊರೆಯುತ್ತೆ.

ಬೆಲೆ : ರೂ. 2-00

ತಾ|| 24-9-1965ರಲ್ಲಿ

ಮೈಸೂರು "ಸಾಧ್ವಿ" ಪತ್ರಿಕೆಯಲ್ಲಿ ವಿಮರ್ಶೆ

ಮರುಚ್ಛಾಸ್ತ್ರ ಸಾರಸಂಗ್ರಹಃ

ಬೆಂಗಳೂರಿನಲ್ಲಿರುವ ವೇ. ಶಾಸ್ತ್ರರತ್ನಂ ಚೀಮನಹಳ್ಳಿ ರಘುನಾಥಾಚಾರ್ಯರು ಮೇಲ್ಕಂಡ ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ಮುದ್ರಿಸಿ ಪ್ರಕಟಿಸಿರುತ್ತಾರೆ. ಅದರಲ್ಲಿ ಶ್ರೀ ಮಧ್ವಾಚಾರ್ಯರು ಸರ್ವ ಶಾಸ್ತ್ರಾರ್ಥ ಸಂಗ್ರಹರೂಪವಾದ ಅಣುಭಾಷ್ಯದ ೩೨ ಶ್ಲೋಕಗಳಿಂದ ಕೂಡಿದ ನಾಲ್ಕು ಅಧ್ಯಾಯದ ೩ನೇ ಅಧ್ಯಾಯದಲ್ಲಿ ಹೇಳಿರುವ "ಮುಖ್ಯ ಪ್ರಾಣವಶೇ ಸರ್ವಂ ಸ ವಿಷ್ಣೋರ್ವಶಗಃ ಸದಾ" ಎಂಬ ಅರ್ಧ ಶ್ಲೋಕದಿಂದ ವೈಷ್ಣವ ಮತದ ಸಾರ ಸರ್ವಸ್ವವನ್ನೂ ನಿರೂಪಿಸಿರುತ್ತಾರೆ. ಮೋಕ್ಷದ ಪರಮ ಪುರುಷಾರ್ಥತ್ವ ಜಗತ್ಸತ್ಯತ್ವ ಇತ್ಯಾದಿಗಳನ್ನು ತನ್ನದೇ ಆದ ಶೈಲಿಯಲ್ಲಿ ವರ್ಣಿಸಿರುತ್ತಾರೆ.

ಉಡುಪಿ ಪುತ್ತಿಗೆ ಮಠಾಧೀಶರು, ಶ್ರೀ ಕುಂದಾಪುರ ವ್ಯಾಸರಾಜ ಸಂಸ್ಥಾನ, ಸಾಗರ ಕಟ್ಟೆ ಮಠಗಳ ಯತಿವರ್ಯರಾದ ಶ್ರೀ ಶ್ರೀ ಪ್ರದ್ಯುಮ್ನತೀರ್ಥ ಶ್ರೀಪಾದಂಗಳವರು ಮತ್ತು ಇನ್ನೂ ಅನೇಕ ಮಹನೀಯರು ಈ ಗ್ರಂಥವನ್ನು ಅವಲೋಕಿಸಿ ಪ್ರಶಂಸೆ ಮಾಡಿರುತ್ತಾರೆ. ಮಧ್ವ ಮತ ಸಂಪ್ರದಾಯಸ್ಥರು ವೇದಾಂತ ಜಿಜ್ಞಾಸುಗಳೇ ಮುಂತಾದವರು ಈ ಗ್ರಂಥದ ಸಾರವನ್ನು ಸವಿಯ ಬಹುದು.

ಬೆಲೆ : 00-50 ಪೈಸೆ

ಸಿ. ಆರ್. ವೆಂಕಟೇಶ ವಿಠಲಾಚಾರ್ಯ, ನಂ. ೨೯, ಹಯವದನ ಸದನ, ೬ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು – ೧೮.

ಈ ವಿಳಾಸದಲ್ಲಿ ಗ್ರಂಥವು ದೊರೆಯುವುದು.

xxxxxxxxx

ಸುಬೋಧ ಮಾಸಪತ್ರಿಕೆಯ

(ಜೂನ್ 1965ರಲ್ಲಿ ವಿಮರ್ಶೆ)

ಸದ್ಭಕ್ತಿದರ್ಪಣ ಲೇಖಕರು ಮತ್ತು ಅನುವಾದಕರು ಶಾಸ್ತ್ರರತ್ನಂ, ವೇದಾಂತ ವಿಶಾರದ ಚೀಮನಹಳ್ಳಿ ರಘುನಾಥಾಚಾರ್ಯರು. ಪ್ರಕಾಶಕರು, ಶ್ರೀ ಆರ್. ವೆಂಕಟೇಶ ವಿಠಲಾಚಾರ್ಯ, ನಂ. ೨೯, ಹಯವದನಸದನ, ಚಾಮರಾಜಪೇಟೆ ೬ನೇ ರೋಡು, ಬೆಂಗಳೂರು ೧೮. ಕ್ರೌನ್ ೧/೮ ಪುಟಗಳು ೧೨+೧೧೨+೧೨ — ೧೩೬

ಬೆಲೆ ರೂ. 2-00.

ಶ್ರೀ ಚೀಮನಹಳ್ಳಿ ರಘುನಾಥಾಚಾರ್ಯರು, ತಮ್ಮ ಈ ವಿಶ್ರಾಂತಿ ವೇಳೆಯನ್ನು ಸಂಸ್ಕೃತ ಮತ್ತು ಕನ್ನಡ ಗ್ರಂಥ ರಚನೆಗಳಿಗೆ ಮೀಸಲಾಗಿಟ್ಟು ದುಡಿಯುತ್ತಿರುವುದು ಬಹು ಶ್ಲಾಘನೀಯ ಸೇವೆ ಎನ್ನಲಡ್ಡಿಯಿಲ್ಲ. ಶಾಸ್ತ್ರರತ್ನಂ, ವೇದಾಂತವಿಶಾರದ, ಪಂಡಿತ ಮಾರ್ತಾಂಡ ಇತ್ಯಾದಿ ಬಿರುದಾಂಕಿತರಾಗಿ ಸಂಸ್ಕೃತ ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ಕರತಲಾಮಲಕವಾಗಿಸಿಕೊಂಡ ಇಂತಹ ಮಹನೀಯರು ಸಂಸ್ಕೃತ ಭಾಷೆ ಎಂಬ ಗಡುಸಾದ ವಜ್ರಪೇಟಿಕೆ ಯಲ್ಲಿರುವ ಮುಕ್ತಿಸಾಧಕವಾದ ಭಕ್ತಿ, ಜ್ಞಾನ, ವೈರಾಗ್ಯ ಬೋಧಕ ಅಮೂಲ್ಯ ವಸ್ತು ಸಾಮಗ್ರಿಗಳನ್ನು ತಿಳಿಗನ್ನಡದಲ್ಲಿ ವಿವರಿಸಿ ಕೊಟ್ಟರೆ ಜನತೆಗೆ ಆಗುವ

ಮಹದುಪಕಾರವನ್ನು ವರ್ಣಿಸಲಳವಲ್ಲ. ಈ ಮಹನೀಯರಿಂದಲೇ ಮೂಲ ಸಂಸ್ಕೃತ ಭಾಷೆಯಲ್ಲಿ ರಚಿತವಾದ ಈ 'ಸದ್ಭಕ್ತಿದರ್ಪಣಂ' ಗ್ರಂಥವನ್ನು ಈ ಮೊದಲೇ (ಸುಬೋಧ ಫೆಬ್ರುವರಿ ಸಂಚಿಕೆಯಲ್ಲಿ ವಿಸ್ತಾರವಾಗಿ ವಿಮರ್ಶಿಸಲಾಗಿದೆ.) ಗ್ರಂಥಕರ್ತರು, ಸಂಸ್ಕೃತಭಾಷಾ ಪರಿಚಯವಿಲ್ಲದ ಕನ್ನಡಿಗರಿಗೂ ಈ ಸದ್ಗ್ರಂಥದ ಪ್ರಯೋಜನವನ್ನು ದೊರಕಿಸಿ ಕೊಡಬೇಕೆಂದು ಅದನ್ನು ತಾವೇ ಕನ್ನಡದಲ್ಲಿ ಅನುವಾದಿಸುವುದರ ಮೂಲಕ ಅದರ ರಸ ಭಾವಗಳಿಗೆ ಕುಂದುಂಟಾಗದಂತೆ ಪರಿಶ್ರಮಿಸಿ, ಪ್ರಕಟಿಸಿರುವುದು ಅಭಿನಂದನಾರ್ಹವಾಗಿದೆ. ಭಗವದ್ಗೀತಾ, ಭಾಗವತ, ಹರಿವಂಶ, ಶ್ರುತಿ, ಸ್ಮೃತಿ, ಉಪನಿಷತ್ತುಗಳು ಮುಂತಾದುವುಗಳಿಂದ ಉದ್ಧರಿಸಿದ ಮೂಲ ವಾಕ್ಯಗಳನ್ನು ಕನ್ನಡದ ದಪ್ಪಕ್ಷರಗಳಲ್ಲಿ ಛಾಪಿಸಿ ಓದುಗರಿಗೆ ಶಾಸ್ತ್ರಾರ್ಥಗಳನ್ನು ವಿಶದೀಕರಿಸಿರುವ ಶ್ರೀ ಆಚಾರ್ಯರ ಈ ಉಪಕಾರವು ಚಿರಸ್ಮರಣೀಯವಾದುದು.

ಆಧ್ಯಾತ್ಮಪ್ರಕಾಶನದ ಸೆಪ್ಟಂಬರ್ 1965ರ 35 ಸಂಪುಟದ
1ನೇ ಸಂಚಿಕೆಯಲ್ಲಿ

ಶ್ರೀಮತ್ಪರಮಹಂಸೇತ್ಯಾದಿ ಗುಣಗಣಾಲಂಕೃತರಾದ

ಹೊಳೇನರಸೀಪುರದಲ್ಲಿರುವ ಶ್ರೀ ಶ್ರೀ ೧೦೦೮ ಶ್ರೀ ಸಚ್ಚಿದಾನಂದೇಂದ್ರ
ಶ್ರೀ ಸ್ವಾಮಿಗಳವರಿಂದ ಅನುಗ್ರಹಿಸಿದ ವಿಮರ್ಶೆ

ಸದ್ಭಕ್ತಿದರ್ಪಣಂ (ಸಂಸ್ಕೃತ): ಬರೆದವರು : ಶಾಸ್ತ್ರರತ್ನಂ, ವೇದಾಂತ ವಿಶಾರದ, ಚೀಮನಹಳ್ಳಿ ರಘುನಾಥಾಚಾರ್ಯರು, ಪಂಡಿತ ಮಾರ್ತಾಂಡ, ಉಪನಿಷದ್ರತ್ನಾಕರ, ತತ್ತ್ವ ಚಿಂತಾಮಣಿ, ಸಾಹಿತ್ಯರತ್ನಂ, ಜ್ಞಾನಗುಣಾಕರ – ಇತ್ಯಾದಿ ಬಿರುದಾಂಕಿತರು ; ಪ್ರಕಾಶಕರು : C.R. Venkatasha Vittalacharya. M.A., B.COM. R.A. C.A., Auditor, No. 29, Hayavadana Sadan, VI Road, Chamarajpet, Bangalore – 18.

ಪುಟಗಳು : 16-68-84 ಬೆಲೆ : ರೂ. 1-75.

ಅಂಥ ಸದೃಢವಾದ ಭಕ್ತಿಯಿಂದ ಸತ್ಕರ್ಮಾನುಷ್ಠಾನಮಾಡಿ ಪರಮಾತ್ಮನ ಪ್ರೀತಿಯನ್ನು ಸಂಪಾದಿಸಿದರೆ ಶಾಶ್ವತವಾದ ಮೋಕ್ಷವು ಸಿಕ್ಕುವುದು. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಮಾಡಬೇಕಾದ ಈ ಕರ್ತವ್ಯವನ್ನು ಮಾಡದಿರುವುದರಿಂದಲೇ ಆಗಾಗ ಬಗೆಬಗೆಯ ಕಷ್ಟನಿಷ್ಠುರಗಳಿಗೆ ಗುರಿಯಾಗಬೇಕಾಗುವುದು.

ಪ್ರಸ್ತುತ ಪುಸ್ತಿಕೆಯಲ್ಲಿ ಇಷ್ಟೊಂದು ಅವಶ್ಯವಾದ ತಿಳಿಯಬೇಕಾದ ಭಕ್ತಿಯ ಮಹಾತ್ಮ್ಯವನ್ನು ಬೇರೆ ಬೇರೆ ಶಾಸ್ತ್ರಗ್ರಂಥಗಳಲ್ಲಿಯ ಆಧಾರದ ವಾಕ್ಯಗಳನ್ನು ಉಲ್ಲೇಖಿಸಿ ತಿಳಿಸಲಾಗಿದೆ. ಭಕ್ತಿಯ ಲಕ್ಷಣವೇನು, ಅದರಲ್ಲಿಯ ಚತುರ್ಭೇದಗಳು ಅಪರೋಕ್ಷ ಜ್ಞಾನಕ್ಕೆ ಅದೆಂತು ಸಾಧನ, ಭಕ್ತಿಯಿಂದ ಜ್ಞಾನವೃದ್ಧಿಯೆಂತು ಎಲ್ಲ ಸಾಧನೆಗಳಿಗಿಂತ ಭಕ್ತಿಯೇ ಎಂತು ಶ್ರೇಷ್ಠ ಸಾಧನವೆಂಬುದನ್ನು ಆಚಾರ್ಯರು ಈ ಪುಸ್ತಕದಲ್ಲಿ ಸಾಧಾರಣವಾಗಿ ವಿವರಿಸಿದ್ದಾರೆ. ಅಧಿಕಾರಿಗಳ ಬೇಧದಿಂದ ಜ್ಞಾನಯೋಗಿಗಳು, ಕರ್ಮಯೋಗಿಗಳು, ಭಕ್ತಿಯೋಗಿಗಳು ಇರುವರೆಂಬುದನ್ನು ತಿಳಿಸಿ ಆಚಾರ್ಯರು ಅವರ ಲಕ್ಷಣಗಳನ್ನು ಹೇಳಿದ್ದಾರೆ. ಭಕ್ತಿಯಲ್ಲಿ ಸಾತ್ವಿಕ ರಾಜಸ ತಾಮಸವೆಂಬ ಭೇದವಿದ್ದು ಅದರ ಲಕ್ಷಣಗಳನ್ನೂ ವಿವರಿಸಿರುವರು.

ದೋಷಯುಕ್ತವಾದ ಭಕ್ತಿಯಿಂದ ಮುಕ್ತಿ ಸಾಧ್ಯವೋ ಎಂಬ ಶಂಕೆಯನ್ನೆತ್ತಿ ಅದರಿಂದ ಮೋಕ್ಷವು ದೊರೆಯಲಾರದೆಂದು ಅನೇಕ ಶಾಸ್ತ್ರೋದಾಹರಣೆಗಳಿಂದ ಸಿದ್ಧಪಡಿಸಿರುವರು. ಅದೇ ರೀತಿ ಭಕ್ತಿರಹಿತವಾದ ಜ್ಞಾನದಿಂದಲೂ ಮುಕ್ತಿ ದೊರೆಯಲಾರದೆಂದು ನಿರೂಪಿಸಿರುವರು. ಭಾಗವತ ಏಕಾದಶ ಸ್ಕಂದದ ೨೦ನೇ ಅಧ್ಯಾಯದಲ್ಲಿ ಪರಮಾತ್ಮನು ಭಕ್ತಿಯೋಗದ ಮಹಾತ್ಮ್ಯೆಯನ್ನು ವಿವರಿಸಿದ್ದನ್ನು ಈ ಪುಸ್ತಕದಲ್ಲಿ ಉದಾಹರಿಸಲಾಗಿದೆ. ಭಕ್ತಿಯಲ್ಲಿ ತಾರತಮ್ಯವಿದ್ದಂತೆ ಮುಕ್ತರಲ್ಲಿಯೂ ತಾರತಮ್ಯವಿರುವುದೆಂದು ಶ್ರೀಮನ್ಮಧ್ವಾಚಾರ್ಯರು ಸ್ಪಷ್ಟಪಡಿಸಿದ್ದನ್ನು ನಿರೂಪಿಸಲಾಗಿದೆ.

ಭಕ್ತಿಯಲ್ಲಿ ಸಾಧಾರಣ ಭಕ್ತಿ, ಪಕ್ವ ಭಕ್ತಿ, ಸಂಪಕ್ವ ಭಕ್ತಿ, ಅತಿಪರಿಪಕ್ವ ಭಕ್ತಿ, ನಿರ್ಗುಣಭಕ್ತಿ, ಅನಿಮಿತ್ತಾಭಕ್ತಿ, ಅತ್ಯಂತಿಕಭಕ್ತಿ ಮೊದಲಾದ ಪ್ರಭೇದಗಳಿವೆಯೆಂದು ಆಚಾರ್ಯರು ಹೇಳಿ ಅವುಗಳ ಲಕ್ಷಣಗಳನ್ನು ನಿರೂಪಿಸಿ

ಸಿದ್ದಾರೆ. ಅರ್ಚನ, ವಂದನ, ದಾಸ್ಯ, ಸುಖ, ಆತ್ಮನಿವೇದನ ಮೊದಲಾದವುಗಳ ಲಕ್ಷಣಗಳನ್ನು ವಿವರಿಸಲಾಗಿದೆ. ಈ ನವವಿಧ ಭಕ್ತಿಯನ್ನು ಮಾಡಿ ಅಕ್ರೂರ, ಪ್ರಹ್ಲಾದ ಮೊದಲಾದ ಭಕ್ತರು ಉದ್ಧೃತರಾದುದುಂಟು. ಈ ರೀತಿ ಭಕ್ತಿಯನ್ನು ಮಾಡಿ ಅನೇಕ ಜನ ಭಗವದ್ಭಕ್ತರು ಮುಕ್ತರಾದ ಉದಾಹರಣೆಗಳು ಇರುವುವು.

ಅನಂತರ ಆಚಾರ್ಯರು ಮುಕ್ತಿಯು ದ್ವಿವಿಧವೆಂದು ನಿರೂಪಿಸುತ್ತಾ ಜ್ಞಾನಾನಂದಾನುಭವ ಲಕ್ಷಣವಾದುದು ಮತ್ತು ನಿತ್ಯ ದುಃಖಾನುಭವ ಲಕ್ಷಣವಾದುದೆಂದು ಹೇಳಿದ್ದಾರೆ. ಸದಾ ಭಗವಂತನ ದ್ವೇಷ ಮಾಡುವವರಿಗೆ ಕೆಳಗಿರುವ ತಮೋ ಲೋಕ ಅರ್ಥಾತ್ ಅಂಧಂತ ಮಸ್ಸೇ ಮುಕ್ತಿ ಎಂದು ಕರೆಸಿಕೊಳ್ಳಲಾಗುತ್ತದೆ ಎಂದು ಅಭಿಪ್ರಾಯಪಟ್ಟಿರುವರು. ಯಾರು ಯಾರು ಯಾವ ಯಾವ ಭಾವನೆಗಳನ್ನು ಸ್ಮರಿಸುತ್ತ ಕೊನೆಗೆ ಮರಣಹೊಂದುವರೋ ಅವರು ಆಯಾ ಭಾವನೆ ಮತ್ತು ಸ್ಮರಣೆಗಳನ್ನನುಸರಿಸಿ ಆಯಾ ಸ್ಥಿತಿಯನ್ನು ಹೊಂದುತ್ತಾರೆ ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ–ವೃಂದಾವನದಲ್ಲಿಯ ಕಾಮಿನಿಯರಾದ ಗೋಪಿಕಾ ಸ್ತ್ರೀಯರು ಮರಣಾನಂತರ ಮುಕ್ತಿಯಲ್ಲಿಯೂ ವಿಷ್ಣು ಕಾಮುವುಳ್ಳವರಾದರೆಂಬುದು ಪ್ರಸಿದ್ಧ. ಹರಿಯಲ್ಲಿ ದ್ವೇಷ ಮಾಡುವ ಶಿಶುಪಾಲಾದಿಗಳು ತಮಸ್ಸಿನಲ್ಲಿಯೂ ಹರಿಯ ನಿತ್ಯ ದ್ವೇಷಿಗಳಾಗಿಯೇ ದುಃಖಾನುಭವಿಗಳಾಗಿರುವರೆಂಬುದು ಶಾಸ್ತ್ರಸಿದ್ಧ. ದೇವತಾ ಸ್ತ್ರೀಯರು ಪರಮಾತ್ಮನನ್ನು ಮಾವನೆಂದೂ, ಲಕ್ಷ್ಮೀದೇವಿಯ ಪತಿಯೆಂದೂ, ಚತುರ್ಮುಖ ಬ್ರಹ್ಮನು ತಂದೆಯೆಂದೂ ಗುರುವೆಂದೂ, ಇತರ ದೇವತೆಗಳು ಪರಮ ಗುರುವೆಂದೂ, ಉಪಾಸನೆ ಮಾಡಬೇಕೆಂಬ ಶಾಸ್ತ್ರ ವಚನವನ್ನು ಆಚಾರ್ಯರು ಉಲ್ಲೇಖಿಸಿರುವರು.

ಈ ರೀತಿ ಆಚಾರ್ಯರು ಭಗವತ್ಪ್ರೀತಿಗೆ ಭಕ್ತಿಯೇ ಮುಖ್ಯ ಸಾಧನವೆಂಬ ಮುಖ್ಯ ಪ್ರಮೇಯವನ್ನು ಈ ಪುಸ್ತಕದಲ್ಲಿ ಅನೇಕ ಶಾಸ್ತ್ರಾಧಾರ ವಚನಗಳನ್ನುಲ್ಲೇಖಿಸಿ ನಿರೂಪಿಸಿರುವರು. ಪರಮಾತ್ಮನ ಅಪರೋಕ್ಷ ಜ್ಞಾನಕ್ಕೆ, ಅವನ ಪ್ರಸಾದಕ್ಕೆ ಜ್ಞಾನ ಭಕ್ತಿ ವೈರಾಗ್ಯ ಈ ಮೂರು ಸಾಧನಗಳಾಗಿದ್ದರೂ ಇವುಗಳಲ್ಲಿ ಭಕ್ತಿಗೇ ಪ್ರಾಧಾನ್ಯ. ಏಕೆಂದರೆ ಪರಮಾತ್ಮನ ಮಾಹಾತ್ಮ್ಯ ಜ್ಞಾನ

ವಿಲ್ಲದಿದ್ದರೆ ಮತ್ತು ವಿಷಯಗಳಲ್ಲಿ ವೈರಾಗ್ಯ ಉಂಟಾಗದಿದ್ದರೆ ಭಕ್ತಿಯೇ ಹುಟ್ಟಲಾರದು. ಅರ್ಥಾತ್ ಭಕ್ತಿಗೆ ಇವೆರಡೂ ಸಹಾಯಕ. ಆದುದರಿಂದ ಭಕ್ತಿಗೇ ಪ್ರಾಧಾನ್ಯ. ಅಂತೆಯೇ ಶ್ರೀ ವ್ಯಾಸರಾಜರು 'ಭಕ್ತಿಶ್ಚ ತತ್ಸಾಧನಂ' ಎಂದು ಹೇಳಿದ್ದು.

ಆಚಾರ್ಯರು ಇಷ್ಟೊಂದು ಶ್ರಮ ವಹಿಸಿ ಶಾಸ್ತ್ರ ವಚನಗಳನ್ನು ಏಕತ್ರ ಸಂಗ್ರಹಿಸಿ ಪ್ರಸ್ತುತ ಪುಸ್ತಕದಲ್ಲಿ ಭಕ್ತಿಯ ಮಹಾತ್ಮ್ಯವನ್ನು ಬಣ್ಣಿಸಿದ್ದು ಅತ್ಯಂತ ಪ್ರಶಂಸನೀಯವಾಗಿದೆ. ಈ ಗ್ರಂಥದಲ್ಲಿ ಉದಾಹೃತವಾದ ಶ್ರುತಿ ಸ್ಮೃತಿ, ಪುರಾಣಾದಿ ವಚನಗಳ ಹೆಸರು, ಪುಟಸಂಖ್ಯೆ ಮೊದಲಾದುವನ್ನು ಕೊಟ್ಟಿದ್ದರಿಂದ ಹೆಚ್ಚಿನ ಅಭ್ಯಾಸ ಮಾಡುವವರಿಗೆ ಅನುಕೂಲವಾಗಿದೆ. ವಿಷಯಾನುಕ್ರಮಣಿಕೆಯೂ ಬೋಧಕವಾಗಿದೆ. ಬೆಲೆಯೇನೋ ಸ್ವಲ್ಪ ಹೆಚ್ಚೆನಿಸುತ್ತದೆ. ಇಂಥ ಪುಸ್ತಕವನ್ನು ಓದಿ ತತ್ವಗಳನ್ನು ತಿಳಿದುಕೊಳ್ಳಬಯಸುವವರೇ ಕಡಿಮೆ. ಅದರಲ್ಲಿಯೂ ಬೆಲೆ ಹೆಚ್ಚಾದರೆ ಕೊಳ್ಳುವುದು ಅಪರೂಪ. ಈ ದೃಷ್ಟಿಯಿಂದ ಬೆಲೆ ಕಡಿಮೆ ಇರಬೇಕಾಗಿದೆ. ಭಕ್ತಿಯ ಮಹಾತ್ಮ್ಯೆಯನ್ನು ತಿಳಿಯಬಯಸುವವರೆಲ್ಲ ಈ ಪುಸ್ತಕವನ್ನು ತರಿಸಿಕೊಂಡು ಓದಿ ಮನನ ಮಾಡಿ ಅದರ ಪ್ರಯೋಜನ ಪಡೆಯಬೇಕೆಂದು ಬಿನ್ನವಿಸುತ್ತೇನೆ.

(Sd.) ಹ. ರಾ. ಪುರೋಹಿತ, ಧಾರವಾಡ.

ಇದೇ ಗ್ರಂಥಕರ್ತರಿಂದ ರಚಿತವಾಗಿ ನಮ್ಮಲ್ಲಿ ದೊರೆಯುವ ಇತರ ಗ್ರಂಥಗಳು

1.	ಶ್ರೀಮನ್ಮಾರುಚ್ಛಾಸ್ತ್ರ ಸಾರಸಂಗ್ರಹಃ (ಸಂಸ್ಕೃತ)	0—50
2.	ಶ್ರೀ ರಾಮ ಚಾರಿತ್ರ್ಯ ಮಂಜರಿ ಮತ್ತು ಶ್ರೀ ಕೃಷ್ಣ ಚಾರಿತ್ರ್ಯ ಮಂಜರಿ .... ಶ್ರೀ ರಾಘವೇಂದ್ರ ಸ್ವಾಮಿಗಳಿಂದ ವಿರಚಿತ (ಕನ್ನಡ ತಾತ್ಪರ್ಯಾನುವಾದ ಸಹಿತ)	0—[illegible]
3.	ಸದ್ಯುಕ್ತಿದರ್ಪಣ (ಸಂಸ್ಕೃತ ಭಾಷೆ)	1—75
4.	,, (ಕನ್ನಡ ಭಾಷೆಯಲ್ಲಿ)	2—00
5.	ತತ್ತ್ವಮಸಿ? (ಪ್ರಮಾಣ ಸಹಿತ) ಕನ್ನಡ ಭಾಷೆ	0—[illegible]
6.	ತತ್ತ್ವಮಸಿ ವಿಮರ್ಶೆ	1—50
7.	ಸರ್ವಜ್ಞ ಸಂದೇಶ ಮಾಸಪತ್ರಿಕೆಗಳು — ಸಂಪುಟ ೧ ಬೈಂಡಾದವು	4—50
8.	,, ೨ ,, ...	4—50
9.	,, ,, ೩ ,, ...	4—50
10.	ಮುಕ್ತಿಸಾಧನ ಸುಲಭೋಪಾಯಗಳು	0—62
11.	ವೈಷ್ಣವದೀಕ್ಷೆ	0—50
12.	ವೈದಿಕರ ವದ್ದಾಟ	0—25
13.	ಸನ್ಮಿತ್ರ ಸಮಾಗಮ	0—25
14.	ಅಧ್ಯಾತ್ಮಾಮೃತನಿಧಿ — ಪ್ರಮೇಯ ಗ್ರಂಥ (ಕನ್ನಡ) ಅಚ್ಚಿನಲ್ಲಿದೆ	3—00
15.	ಸೂತ್ರಭಾಷ್ಯದ ಅಧಿಕರಣಾರ್ಥ ಸಾರಸಂಗ್ರಹ ೩ನೇ ಅಧ್ಯಾಯದ ೩ನೇ ಪಾದ	0—62

Printed at

Chitra Printery, Bangalore - 2.